بِسْمِ اللهِ الرَّحْمٰنِ الرَّحِیْمِ     نَحْمَدُہٗ وَنُصَلِّی عَلٰی رَسُوْلِہِ الْکَرِیْمِ     وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 04

ಸಂಚಿಕೆ: 01–02

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

05, 12 ಜನವರಿ 2023, 05, 12 ಸುಲಹ್ 1402 ಹಿಜರಿ ಶಮ್‌ಸಿ,
12, 19 ಜಮಾದಿ ಉಸ್ಸಾನಿ 1444 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

وَاذْكُرْ رَّبَّكَ فِيْ نَفْسِكَ تَضَرُّعًا وَّخِيْفَةً وَّدُوْنَ الْجَهْرِ مِنَ الْقَوْلِ بِالْغُدُوِّ وَالْاٰصَالِ وَلَا تَكُنْ مِّنَ الْغٰفِلِيْنَ (اعراف:206)

**(ಅಲ್–ಅಅ್‌ರಾಫ್: 206)**

ಅಂದರೆ: ನಿನ್ನ ಪ್ರಭುವನ್ನು ನಿನ್ನ ಮನಸ್ಸಿನಲ್ಲಿ ವಿನಮ್ರವಾಗಿಯೂ ಭಯಭರಿತವಾಗಿಯೂ ಮೆಲು ಧ್ವನಿಯಲ್ಲಿಯೂ ಮುಂಜಾವ ಮತ್ತು ಮುಸ್ಸಂಜೆಗಳಲ್ಲಿ ಸ್ಮರಿಸು. ನೀನು ಅಸಡ್ಡೆ ಮಾಡುವವರ ಪೈಕಿಯವನಾಗಬೇಡ.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಕೃಷಿಯಿಂದ ಪಕ್ಷಿಗಳು ತಿನ್ನುವ ಪ್ರತಿಫಲ

**(2320)** ಹಝ್‌ರತ್ ಅನಸ್(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ಅವರು ಹೇಳಿದರು: ಒಬ್ಬ ಮುಸಲ್ಮಾನನು ಯಾವುದಾದರು ಒಂದು ಸಸ್ಯವನ್ನು ನೆಟ್ಟರೆ ಅಥವಾ ಹೊಲವನ್ನು ಬಿತ್ತಿದರೆ ಅದನ್ನು ಪಕ್ಷಿ, ಮನುಷ್ಯ ಅಥವಾ ಪ್ರಾಣಿ ತಿನ್ನುತ್ತಿದ್ದರೆ, ಇದು (ಕೃಷಿ ಮತ್ತು ಮರ) ಅವನಿಗೆ ಸವಾಬ್ (ಒಳಿತಿನ) ಮೂಲವಾಗುತ್ತದೆ.

### ಸುರಕ್ಷತೆಯ ಸಲುವಾಗಿ ನಾಯಿಯನ್ನು ಸಾಕುವುದು ಅನುಮತಿಸಲಾಗಿದೆ

**(2322)** ಹಝ್‌ರತ್ ಅಬು ಹುರೈರಾ(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ಹೇಳಿದರು: ಯಾರು ನಾಯಿಯನ್ನು ಸಾಕುತ್ತಾರೋ ಅವರ ಕರ್ಮಗಳಿಂದ ಪ್ರತಿದಿನ ಒಂದು ಖೈರಾತ್ ಕಡಿಮೆಯಾಗುತ್ತವೆ. ಕೃಷಿ ಅಥವಾ ಪ್ರಾಣಿಗಳನ್ನು ರಕ್ಷಿಸುವ ಉದ್ದೇಶಕ್ಕಾಗಿ ಸಾಕಿರುವ ನಾಯಿಯನ್ನು ಹೊರತುಪಡಿಸಿ.

**(2323)** ರಸೂಲುಲ್ಲಾಹ್(ಸ) ಹೇಳಿದರು: ಕೃಷಿಯಲ್ಲಿ ಅಥವಾ ಮೇಕೆಗಳ ರಕ್ಷಣೆಯಲ್ಲಿ ತನಗೆ ಪ್ರಯೋಜನವಾಗದ ನಾಯಿಯನ್ನು ಸಾಕಿದವನು, ಪ್ರತಿದಿನ ಅವನ ಕರ್ಮಗಳ ಪ್ರತಿಫಲದಿಂದ ಒಂದು ಖೈರಾತ್ ಕಡಿಮೆಯಾಗುತ್ತದೆ.

**(ಸಾಹಿಹ್ ಬುಖಾರಿ, ಸಂಪುಟ–3, ಕಿತಾಬ್ ಅಲ್–ಹರ್ಸ್ ಮತ್ತು ಅಲ್–ಮಝಾರಿಅ, 2008 ಖಾದಿಯಾನ್ ಪ್ರಕಟಿತ)**

## ಅಶ್ಲೀಲತೆಯನ್ನು ಹೊರತುಪಡಿಸಿ, ಮಹಿಳೆಯರ ಇತರ ಎಲ್ಲಾ ದುರ್ಗುಣಗಳು ಮತ್ತು ಕಹಿಗಳನ್ನು ಭರಿಸಬೇಕಾಗುತ್ತದೆ

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ಒಳ್ಳೆಯ ವರ್ತನೆ

ಮಹಿಳೆಯರೊಂದಿಗೆ ಉತ್ತಮ ಒಡನಾಟದ ಬಗ್ಗೆ, ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹೇಳಿದರು:

"ಅಶ್ಲೀಲತೆಯನ್ನು ಹೊರತುಪಡಿಸಿ, ಮಹಿಳೆಯರ ಇತರ ಎಲ್ಲಾ ದುರ್ಗುಣಗಳನ್ನು ಮತ್ತು ಕಹಿಗಳನ್ನು ಸಹಿಸಿಕೊಳ್ಳಬೇಕು."

ಮತ್ತು ಅವರು ಹೇಳಿದರು: "ಪುರುಷನಾಗಿ ಮಹಿಳೆಯೊಂದಿಗೆ ಜಗಳವಾಡುವವನು ಪರಿಪೂರ್ಣ ನಾಚಿಕೆಯಿಲ್ಲದವ ಅನಿಸುತ್ತಾನೆ." ಅಲ್ಲಾಹನು ನಮ್ಮನ್ನು ಪುರುಷನನ್ನಾಗಿ ಮಾಡಿದ್ದಾನೆ ಅದು ನಮ್ಮ ಮೇಲೆ ಅಲ್ಲಾಹನ ಒಂದು ಪರಿಪೂರ್ಣ ಅನುಗ್ರಹವಾಗಿದೆ. ಅವನಿಗೆ ಕೃತಜ್ಞತೆಯನ್ನು ಅರ್ಪಿಸುವುದೆಂದರೆ ಮಹಿಳೆಯರೊಂದಿಗೆ ಸಂತೋಷ ಮತ್ತು ಸೌಮ್ಯತೆಯಿಂದ ನಡೆದುಕೊಳ್ಳುವುದಾಗಿದೆ."

ಒಮ್ಮೆ ಒಬ್ಬ ಸ್ನೇಹಿತನ ಒರಟುತನ ಮತ್ತು ಅಸಭ್ಯ ಭಾಷೆಯ ಬಗ್ಗೆ ಉಲ್ಲೇಖವಾಯಿತು ಅವನು ತನ್ನ ಹೆಂಡತಿಯೊಂದಿಗೆ ಕಠೋರವಾಗಿ ವರ್ತಿಸಿದ್ದಾನೆ ಎಂದು ದೂರಲಾಯಿತು. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇದರಿಂದ ತುಂಬಾ ದುಃಖಿತರಾದರು ಮತ್ತು ಹೇಳಿದರು: "ನಮ್ಮ ಸದಸ್ಯರು ಹೀಗೆ ಇರಬಾರದು."

ಹುಝೂರ್ ಅಲೈಹಿಸ್ಸಲಾಮ್ ಅವರು ಮಹಿಳೆಯರ ಬಗ್ಗೆ ದೀರ್ಘಕಾಲ ಮಾತನಾಡುವುದನ್ನು ಮುಂದುವರೆಸಿದರು ಮತ್ತು ಕೊನೆಯಲ್ಲಿ ಅವರು ಹೇಳಿದರು:

"ನನ್ನ ಪರಿಸ್ಥಿತಿ ಏನೆಂದರೆ, ಒಮ್ಮೆ ನಾನು ನನ್ನ ಹೆಂಡತಿಯ ಮೇಲೆ ಸಿಟ್ಟಾದೆ. ಅವಳು ಜೋರಾದ ಹೃದಯದ ನೋವಿನೊಂದಿಗೆ ಇರುವ ಹಾಗೆ ನನಗೆ ಭಾಸವಾಗುತ್ತಿತ್ತು ಆದರೆ ಅವಳ ಬಾಯಿಂದ ನಾನು ಯಾವುದೇ ನೋಯಿಸುವ ಅಥವಾ ಕಠಿಣವಾದ ಪದಗಳನ್ನು ಕೇಳಲಿಲ್ಲ. ತದನಂತರ, ನಾನು ಬಹಳ ಸಮಯದವರೆಗೆ ಸರ್ವಶಕ್ತನಾದ ಅಲ್ಲಾಹನ ಕ್ಷಮಯಾಚನೆಯನ್ನು ಕೇಳುತ್ತಿದ್ದೆ ಮತ್ತು ಬಹಳ ನಮ್ರತೆಯಿಂದ ನಫಿಲ್‌ಗಳನ್ನು ಅನುಷ್ಠಿಸಿದೆ ಮತ್ತು ಹೆಂಡತಿ ಮೇಲೆ ತೋರಿದ ಒರಟುತನ ಯಾವುದೇ ದೈವಿಕ ಪಾಪದ ಪರಿಣಾಮವಾಗಿದೆ ಎಂದು ಸ್ವಲ್ಪ ದಾನವನ್ನು ಸಹ ನೀಡಿದೆ."

**(ಮಲ್‌ಫೂಝಾತ್, ಸಂಪುಟ–1, ಪುಟ–418, ಪ್ರಕಟಿತ ಖಾದಿಯಾನ್ 2018)**

## ಮೂಮಿನ್‌ಗಳ (ಧರ್ಮನಿಷ್ಠರ) ಮಕ್ಕಳು ಮೂಮಿನ್‌ಗಳಾಗಿದ್ದರೆ, ಅವರು ತಮ್ಮ ಹೆತ್ತವರೊಂದಿಗೆ ಸ್ವರ್ಗದಲ್ಲಿ ಮತ್ತೆ ಸೇರುತ್ತಾರೆ

**ಮಕ್ಕಳ ಸಂಕಟಗಳು ಪೋಷಕರ ಮೇಲೆ ಪರಿಣಾಮ ಬೀರುತ್ತದೆ, ಅವರನ್ನು ಈ ಸಂಕಟದಿಂದ ಪಾರು ಮಾಡಲು ಸರ್ವಶಕ್ತನಾದ ಅಲ್ಲಾಹನು ಹಿರಿಯರ ಮಕ್ಕಳನ್ನು ಒಳ್ಳೆಯತನದಿಂದ ನಡೆಸಿಕೊಳ್ಳುತ್ತಾನೆ.**

ಹಝ್‌ರತ್ ಮುಸ್ಲಿಹ್ ಮೌಊದ್(ರ) ಸೂರಃ ಅನ್ನಹಲ್ ಆಯತ್ 120 **ಸುಮ್ಮ ಇನ್ನ ರಬ್ಬಕ ಲಿಲ್ಲಝೀನ ಅಮಿಲುಸ್ಸೂಅ ಬಿಜಹಾಲತಿನ್ ಸುಮ್ಮ ತಾಬೂ ಮಿಮ್ ಬಅದಿ ಝಾಲಿಕ ವ ಅಸ್ಲಿಹೂ; ಇನ್ನ ರಬ್ಬಕ ಮಿಮ್ ಬಅ್‌ದಿಹಾ ಲಗಫೂರುರ್ರಹೀಮ್**. (ಅಂದರೆ: ಅನಂತರ, ಅಜ್ಞಾನ ಕಾರಣದಿಂದ ದುಷ್ಟವಾಗಿ ವರ್ತಿಸಿ ಆ ಬಳಿಕ ಪಶ್ಚಾತ್ತಾಪಪಟ್ಟು ಜೀವನವನ್ನು ಸರಿಪಡಿಸಿಕೊಂಡವರಿಗೆ ಖಂಡಿತವಾಗಿಯೂ ನಿನ್ನ ಪ್ರಭು ಬಹಳ ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ.) ನ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ಅದಕ್ಕೂ ಮುನ್ನ ಸರ್ವಶಕ್ತನಾದ ಅಲ್ಲಾಹನು ಹೇಳಿದನು ಯಹೂದಿಗಳು ಅವಿಧೇಯರಾದರು, ಅದಕ್ಕಾಗಿಯೇ ಅವರ ಮೇಲೆ ಕಷ್ಟಗಳು ಬಂದವು, ಅಲ್ಲಾಹನು ಹೇಳಿದಂತೆ, **ವಲಾಕಿನ್ ಕಾನೂ ಅನ್‌ಫುಸಹುಮ್ ಯಝ್ಲಿಮೂನ** ಅಂದರೆ ಅವರು ಸ್ವತಃ ಹಿಂಸಿಸುತ್ತಿದ್ದರು ಆದ್ದರಿಂದಲೇ ಅವರೂ ಸಹ ಹಿಂಸೆಯನ್ನು ಅನುಭವಿಸಿದರು. ಆಗ ಹೇಳಿದನು ಯಹೂದಿಯರು ತಪ್ಪುಗಳನ್ನು ಮಾಡಿದ್ದರು ಅವರು ಈಗಲೂ ಅದರ ಬಗ್ಗೆ ಪಶ್ಚಾತ್ತಾಪಪಟ್ಟರೆ, ಅವರು ಅಲ್ಲಾಹನನ್ನು ಕ್ಷಮಿಸುವ, ಕರುಣಾಮಯಿಯಾಗಿ ಕಾಣಬಹುದು. ಇದರಲ್ಲಿ ಯಹೂದಿಗಳಿಗೆ ಯಾವುದೇ ವಿಶೇಷ ಅರ್ಥವನ್ನು ಹೊಂದಿಲ್ಲ, ಆದರೆ ಇದು ಸಾಮಾನ್ಯ ಕಾನೂನಿಗೆ ಅನುಸಾರವಾಗಿದೆ.

ಮಕ್ಕಳ ಸಂಕಟಗಳು ತಂದೆ–ತಾಯಿಯರ ಮೇಲೆ ಹೇಗೆ ಪರಿಣಾಮ ಬೀರುತ್ತದೆ, ಮಕ್ಕಳ ಅನಾರೋಗ್ಯದ ಕಾರಣದಿಂದ ತಂದೆ–ತಾಯಿಗೆ ಹೇಗೆ ಸಂಕಟವುಂಟಾಗುತ್ತದೆಯೋ ಅದೇ ರೀತಿ ಅವರು ನರಕಕ್ಕೆ ಬೀಳುವುದರಿಂದ ತಂದೆ–ತಾಯಿಯರಿಗೆ ನೋವಾಗುತ್ತದೆ. ರಸೂಲುಲ್ಲಾಹ್(ಸ)ರವರ ಬಗ್ಗೆ ಬರುತ್ತದೆ ಖಿಯಾಮತ್ ದಿವಸ ಕೆಲವು ಬಾಹ್ಯವಾಗಿ ಸಹಾಬಿಯರು ಎಂದು ತೋರುವ ಜನರು ನರಕದಲ್ಲಿ ಹೋಗುತ್ತಿರುವಾಗಿ ಕಂಡು 'ಸಹಾಬಿ' 'ಸಹಾಬಿ' ಎಂದು ಹೇಳಲಾಗುವುದು. (ಬುಖಾರಿ, ಸಂಪುಟ 3, ಕಿತಾಬ್ ಅಲ್–ತಫ್ಸೀರ್, ಅಧ್ಯಾಯ, **ನಕುಂತು ಅಲೈಹಿಮ್ ಶಹೀದ**) ಆದ್ದರಿಂದ, ಅವರನ್ನು ದುಃಖದಿಂದ ರಕ್ಷಿಸಲು, ಸರ್ವಶಕ್ತನಾದ ಅಲ್ಲಾಹನು ವೃದ್ಧರ ಮಕ್ಕಳನ್ನು ಒಳ್ಳೆಯತನದಿಂದ ನಡೆಸುತ್ತಾನೆ

*(ಪುಟ ಸಂಖ್ಯೆ–12 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಯಾ ಆಯಿಷಾ! ನನ್ನ ನಂತರ ಅಬುಬಕರ್ ಅವರನ್ನು ನನ್ನ ಉತ್ತರಾಧಿಕಾರಿಯನ್ನಾಗಿ ನಾನೊಂದು ಲಿಖಿತವನ್ನು ಬರೆಯಲು ಬಯಸುತ್ತೇನೆ. ಆದರೆ ಅಲ್ಲಾಹನು ಮತ್ತು ಸತ್ಯವಿಶ್ವಾಸಿಗಳು ಅಬೂಬಕರ್(ರ)ರನ್ನಲ್ಲದೇ ಬೇರೆ ಯಾರನ್ನೂ ಅಂಗೀಕರಿಸಲಾರರು ಎಂದು ನನಗೆ ತಿಳಿದಿದೆ.**

**ರಸೂಲುಲ್ಲಾಹ್(ಸ)ರವರ ನಂತರ ಯಾರಿಗಾದರು ಸ್ಥಾನವಿದ್ದರೆ ಅದು ಕೇವಲ ಹಝ್‌ರತ್ ಅಬುಬಕರ್(ರ) ಅವರಿಗೆ ಇದೆ ಎಂದು ಸಹಾಬಿಗಳು ಪರಸ್ಪರ ಮಾತನಾಡಿಕೊಳ್ಳುತ್ತಿದ್ದರು ಎಂದು ಹದೀಸ್‌ನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.**

**ಹಝ್‌ರತ್ ಅಬೂಬಕರ್(ರ)ರ ಜೀವನವೇ ಪ್ರಭುಗಳ ಪ್ರಭುವಾದ ಅಲ್ಲಾಹನ ಮೇಲೆ ಭರವಸೆ ಇರಿಸುವುದು ಮತ್ತು ಸಾಧನ ಸಾಮಗ್ರಿಗಳ ಕಡೆಗೆ ಕಡಿಮೆ ಗಮನ ಹರಿಸುವುದಾಗಿತ್ತು. ಅವರು ತನ್ನ ಶಿಷ್ಟಾಚಾರಗಳಲ್ಲಿ ನಮ್ಮ ಪ್ರವಾದಿ ಮತ್ತು ನೇತಾರರಾದ ಹಝ್‌ರತ್ ಪೈಗಂಬರ್(ಸ)ರಿಗೆ ನೆರಳಿನಂತೆ ಆಗಿದ್ದರು. ಸೃಷ್ಟಿಗಳಲ್ಲಿ ಶ್ರೇಷ್ಠರಾದ ಪೈಗಂಬರ್(ಸ)ರೊಂದಿಗೆ ಅವರಿಗೆ ಅನಂತವಾದ ಸಂಬಂಧವಿತ್ತು. ಇದೇ ಕಾರಣದಿಂದ ಇತರರಿಗೆ ದೀರ್ಘಕಾಲಾವಧಿಯಲ್ಲಿ ಮತ್ತು ದೂರದ ಭೂಖಂಡಗಳಲ್ಲಿ ಲಭಿಸದ್ದು ಹಝ್‌ರತ್ ಅಬೂಬಕರ್(ರ)ರಿಗೆ ಹಝ್‌ರತ್ ಪೈಗಂಬರ್(ಸ)ರ ಅನುಗ್ರಹದಿಂದ ಕ್ಷಣ ಮಾತ್ರದಲ್ಲಿ ಲಭಿಸಿತ್ತು.**

**ಹಝ್‌ರತ್ ಅಬೂಬಕರ್(ರ) ಪರಿಪೂರ್ಣವಾದ ಜ್ಞಾನವನ್ನು ಹೊಂದಿದ್ದ, ಅಲ್ಲಾಹನ ಬಗ್ಗೆ ಪರಿಜ್ಞಾನವಿದ್ದ, ಬಹಳ ತಾಳ್ಮೆಯಿದ್ದ ಮತ್ತು ಅತ್ಯಂತ ದಯಾಳು ಸ್ವಭಾವವನ್ನು ಹೊಂದಿದ್ದ ವ್ಯಕ್ತಿಯಾಗಿದ್ದರು. ವಿನಯ ಮತ್ತು ನಮ್ರತೆಯಿಂದ ಜೀವನವನ್ನು ಸಾಗಿಸುತ್ತಿದ್ದರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್‌ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಮೂರು ದಿವಂಗತರಾದ ಯು.ಕೆ.ಯಲ್ಲಿ ರಖೀಂ ಪ್ರೆಸ್ಸಿನಲ್ಲಿದ್ದ ಜಮಾಅತಿನ ಮುಬಲ್ಲಿಗ್‌ರಾದ ಸನ್ಮಾನ್ಯ ಮುಹಮ್ಮದ್ ದಾವೂದ್ ಝುಫರ್ ಸಾಹಿಬ್, ಸ್ಪೇನಿನ ಮುಬಲ್ಲಿಗ್ ಆಗಿದ್ದ ಮೌಲಾನ ಕರಂ ಇಲಾಹಿ ಝುಫರ್ ಸಾಹಿಬ್‌ರ ಪತ್ನಿಯಾದ ರುಖಿಯ ಶಮೀಂ ಬೇಗಂ ಸಾಹಿಬ, ಮತ್ತು ಹಝ್‌ರತ್ ಖಲೀಫತುಲ್ ಮಸೀಹ್ ಸಾನಿ(ರ)ರ ಪುತ್ರರಾದ ಸಾಹಿಬ್‌ಝಾದ ಮಿರ್ಝಾ ಹನೀಫ್ ಅಹ್ಮದ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ತಾಹಿರ ಹನೀಫ್ ಸಾಹಿಬರವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **18-11-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್‌ರತ್ ಅಬೂಬಕರ್ ಸಿದ್ದೀಖ್(ರ)ರ ಜೀವನಚರಿತ್ರೆಯ ಘಟನೆಗಳನ್ನು ಪ್ರಸ್ತಾಪಿಸಲಾಗುತ್ತಿತ್ತು. ಹಝ್‌ರತ್ ಪೈಗಂಬರ್(ಸ)ರ ದೃಷ್ಟಿಯಲ್ಲಿ ಹಝ್‌ರತ್ ಅಬೂಬಕರ್(ರ)ರ ಸ್ಥಾನಮಾನದ ಬಗ್ಗೆ ಹಿಂದೆಯೂ ಪ್ರಸ್ತಾಪಿಸಿದ್ದೆ. ಹಝ್‌ರತ್ ಅಬೂಬಕರ್(ರ)ರನ್ನು ಹಝ್‌ರತ್ ಪೈಗಂಬರ್(ಸ) ತನ್ನ ಉತ್ತರಾಧಿಕಾರಿಯಾಗಿ ನೇಮಿಸಲು ಬಯಸುತ್ತಿದ್ದರು ಎಂದು ಇದರಿಂದ ಗೊತ್ತಾಗುತ್ತದೆ. ಮಾತ್ರವಲ್ಲ, ಅಲ್ಲಾಹನು ಹಝ್‌ರತ್ ಅಬೂಬಕರ್(ರ)ರನ್ನೇ ಹಝ್‌ರತ್ ಪೈಗಂಬರ್(ಸ)ರ ನಂತರ ಖಲೀಫ ಮತ್ತು ಉತ್ತರಾಧಿಕಾರಿಯನ್ನಾಗಿ ಮಾಡುವನು ಎಂಬ ಸೂಚನೆಯನ್ನು ಅವರು ನೀಡಿದ್ದರು.

ಹಝ್‌ರತ್ ಆಯಿಶ(ರ) ವರದಿ ಮಾಡುತ್ತಾರೆ: ರೋಗಾವಸ್ಥೆಯಲ್ಲಿದ್ದಾಗ ಹಝ್‌ರತ್ ಪೈಗಂಬರ್(ಸ) ಹೇಳಿದರು: ನಿನ್ನ ತಂದೆಯಾದ ಅಬೂಬಕರ್ ಮತ್ತು ನಿನ್ನ ಸಹೋದರನನ್ನು ನನ್ನ ಬಳಿಗೆ ಕರೆದುಕೊಂಡು ಬಾ, ತಾನು ಉತ್ತರಾಧಿಕಾರಿಯಾಗಲು ಹೆಚ್ಚು ಅರ್ಹನು ಎಂದು ಬೇರೆ ಯಾವನಾದರೂ ಹೇಳದಿರಲಿಕ್ಕಾಗಿ ನಾನೊಂದು ಲಿಖಿತವನ್ನು ಬರೆಯುವೆನು. ಹೇಗಿದ್ದರೂ ಅಲ್ಲಾಹನು ಮತ್ತು ಸತ್ಯವಿಶ್ವಾಸಿಗಳು ಅಬೂಬಕರ್(ರ)ರನ್ನಲ್ಲದೇ ಬೇರೆ ಯಾರನ್ನೂ ಅಂಗೀಕರಿಸಲಾರರು. (ಸಹೀಹ್ ಮುಸ್ಲಿಮ್, ಕಿತಾಬ್ ಫಝಾಎಲುಸ್ಸಹಾಬ, ಹದೀಸ್-6181) ಅಂದರೆ ನೇರೆ ಯಾರಾದರು ಹೀಗೆ ಹೇಳಿದರೆ ಅವನು ಹೀಗೆ ಹೇಳುವುದು ತಪ್ಪು ಎಂದು ಹೇಳಬಹುದು. ಹಝ್‌ರತ್ ಅಬೂಬಕರ್(ರ) ರವರೇ ಉತ್ತರಾಧಿಕಾರಿಯಾಗುವರು.

ಹಝ್‌ರತ್ ಹುಧೈಫ ಬಿನ್ ಯಮಾನ್ ಅವರ ರದಿಯೂ ಒಂದಿದೆ, ಅವರು ಹೇಳುತ್ತಾರೆ ರಸೂಲುಲ್ಲಾಹ್(ಸ) ರವರು ಹೇಳುತ್ತಾರೆ: ನಾನು ನಿಮ್ಮಲ್ಲಿ ಯಾವಾಗ ತನಕ ಇರುವೆನು ಎಂಬುದು ನನಗೆ ತಿಳಿದಿಲ್ಲ. ಆದ್ದರಿಂದ ನೀವೆಲ್ಲರು ನನ್ನನ್ನು ಅನುಸರಿಸಿರಿ ತದನಂತರ ಅವರನ್ನು ಅನುಸರಿಸಿರಿ. ಹೀಗೆ ರಸೂಲುಲ್ಲಾಹ್(ಸ)ರವರು ಹಝ್‌ರತ್ ಅಬೂಬಕರ್(ರ) ಮತ್ತು ಉಮರ್(ರ)ರವರ ಕಡೆ ಸೂಚಿಸಿದರು. (ಸುನನ್ನ ಇಬ್ನೆ ಮಾಜ, ಕಿತಾಬುಸ್ಸನ, ಫೀ ಫಝಾಎಲ್ ಅಸ್ಹಾಬ್ ರಸೂಲುಲ್ಲಾಹ್(ಸ), ಹದೀಸ್-97)

ಹಝ್‌ರತ್ ಅಬು ಹುರೈರಾ ಹೇಳುತ್ತಿದ್ದರು, ನಾನು ರಸೂಲುಲ್ಲಾಹ್(ಸ) ಅವರಿಂದ ಕೇಳಿದ್ದೇನೆ, ಅವರು(ಸ) ಹೇಳುತ್ತಾರೆ ಒಮ್ಮೆ ನಾನು ಮಲಗಿದ್ದೆ. ನಾನು ನನ್ನನ್ನು ಒಂದು ಬಾವಿಯ ಹತ್ತಿರ ಕಂಡೆ ಆ ಬಾವಿಯ ಮೇಳೆ ಒಂದು ಬಕೀಟ್ ಇತ್ತು. ಅಲ್ಲಾಹನ ಇಚ್ಛೆಯಂತೆ ನಾನು ಆ ಬಾವಿಯಿಂದ ನೀರು ಸೇದಿದೆ. ನಂತರ ಇಬ್ನ್ ಅಬಿ ಕಹಾಫ ಆ ಬಕೆಟ್ ಅನ್ನು ತೆಗೆದುಕೊಂಡು ಅದರಲ್ಲಿ ಒಂದು ಬಕೆಟ್ ಅಥವಾ ಎರಡು ಬಕೆಟ್ ನೀರನ್ನು ಹೊರತೆಗೆದರು ಮತ್ತು ಅವರ ಎಳೆಯುವಲ್ಲಿ ಸ್ವಲ್ಪ ದೌರ್ಬಲ್ಯವಿತ್ತು, ಮತ್ತು ಅಲ್ಲಾಹನು ಅವರ ಈ ದೌರ್ಬಲ್ಯವನ್ನು ಮುಚ್ಚಿ ಅವರನ್ನು ಕ್ಷಮಿಸುವನು. ನಂತರ ಆ ಬಕೆಟ್ ಚಾರ್ಸಾ ಆಯಿತು, ಅಂದರೆ ದೊಡ್ಡ ಚರ್ಮದ ಬಕೆಟ್ ಆಯಿತು ಮತ್ತು ಇಬ್ನ್ ಅಲ್-ಖತ್ತಾಬ್ ಅದನ್ನು ತೆಗೆದುಕೊಂಡರು, ಆದ್ದರಿಂದ ಉಮರ್ ಅದನ್ನು ಎಳೆಯುವ ರೀತಿಯಲ್ಲಿ ಎಳೆದು ನೀರು ಸೇದುವ ಜನರಲ್ಲಿ ಅಂತಹ ಶಕ್ತಿಯನ್ನು ನಾನು ಯಾರಲ್ಲಿಯೂ ನೋಡಿಲ್ಲ. (ಸಹೀಹ್ ಅಲ್-ಬುಖಾರಿ, ಕಿತಾಬ್ ಫಝಾ ಎಲ್ ಅಸ್ಹಾಬುನ್ನಬಿ(ಸ), ಹದೀಸ್-3664) ಅಂದರೆ, ಹಝ್‌ರತ್ ಅಬು ಬಕರ್(ರ) ಮತ್ತು ಉಮರ್(ರ) ಅವರಿಬ್ಬರ ಬಗ್ಗೆ ಪ್ರವಾದಿಯವರು ಹೇಳಿದರು. ಅವರ ನಂತರ ಇವರು ಉತ್ತರಾಧಿಕಾರಿಗಳು ಎಂದು.

ಇಫ್ಕ್ ಘಟನೆಯಲ್ಲಿ ಹಝ್‌ರತ್ ಅಬೂಬಕರ್(ರ) ಅವರ ಪಾತ್ರ ಮತ್ತು ಅವರ ಸದ್ಗುಣಗಳನ್ನು ಈಗಾಗಲೇ ಸಹಾಬರವರ ಪ್ರಸ್ತವನೆಯಲ್ಲಿ ವಿವರಿಸಲಾಗಿದೆ. ಈಗ ಇಲ್ಲಿ ಸಂಕ್ಷಿಪ್ತವಾಗಿ ವಿವರಿಸುತ್ತೇನೆ ಅದರಿಂದ ನಮಗೆ ಪರ್ವತ ಸೀಳಿಹೋಗುವಂತಹ ಆರೋಪವನ್ನು ಹಝ್‌ರತ್ ಆಯಿಶ(ರ)ರ ವಿರುದ್ಧ ಹೊರಿಸಲಾಗಿತ್ತು. ಆದರೆ ಅವರ ಹೆತ್ತವರಿಗೆ ತನ್ನ ಮಗಳೊಡನೆ ಇರುವ ಪ್ರೀತಿಗಿಂತ ಹಝ್‌ರತ್ ಪೈಗಂಬರ್(ಸ)ರೊಡನೆ ಪ್ರೀತಿ ಮತ್ತು ಗೌರವವು ಬಹಳ ಹೆಚ್ಚಿಗೆ ಇತ್ತು. ಹಝ್‌ರತ್ ಪೈಗಂಬರ್(ಸ) ಇರಿಸಲು ಬಯಸಿದ್ದ ಅದೇ ಸ್ಥಿತಿಯಲ್ಲಿ ತನ್ನ ಮಗಳನ್ನು ಅವರು ಇರಿಸಿಕೊಂಡಿದ್ದರು. ಒಮ್ಮೆ ಈ ಸಂದರ್ಭದಲ್ಲಿ ಹಝ್‌ರತ್ ಆಯಷಾ(ರ) ಅವರು ತಮ್ಮ ಪೋಷಕರ ಮನೆಗೆ ಬಂದಾಗ ಹಝ್‌ರತ್ ಅಬೂಬಕರ್(ರ) ಅವರನ್ನು ಅದೇ ಸಮಯದಲ್ಲಿ ಅವರ ಮನೆಗೆ ಹಿಂದಿರುಗಿಸಿದರು. ಬುಖಾರಿಯಲ್ಲಿ ಇಫ್ಕ್ ಘಟನೆಯ ಸಂದರ್ಭದಲ್ಲಿ ಹಝ್‌ರತ್ ಆಯಿಳಾ(ರ)ರವರು ರಸೂಲುಲ್ಲಾಹ್(ಸ) ಅವರ ಅನುಮತಿಯೊಂದಿಗೆ ತಮ್ಮ ಪೋಷಕರ ಮನೆಗೆ ಓರ್ವ ಸೇವಕನೊಂದಿಗೆ ಹೋದರು ಎಂದು ವರದಿ ಇದೆ. ಹಝ್‌ರತ್ ಆಯಿಷಾ(ರ) ಹೇಳುತ್ತಾರೆ: ನಾನು ಮನೆಯೊಳಗೆ ಪ್ರವೇಶಿಸಿದಾಗ ಮನೆಯ ಕೆಳಗಿನ ಭಾಗದಲ್ಲಿ ನನ್ನ ತಾಯಿ ಉಮ್ಮು ರುಮಾನ್ ಮತ್ತು ಮನೆಯ ಮೇಲಿನ ಭಾಗದಲ್ಲಿ ಹಝ್‌ರತ್ ಅಬೂಬಕ್ಕರ್(ರ) ಅವರನ್ನು ಪವಿತ್ರ ಖುರ್‌ಆನ್ ಪಠಿಸುತ್ತಿರುವುದಾಗ ಕಂಡೆ. ನನ್ನ ತಾಯಿ ಹೇಳಿದರು: ಓ ನನ್ನ ಪ್ರೀತಿಯ ಮಗಳೇ! ನೀನು ಹೇಗೆ ಬಂದೆ?

ನಾನು ಅವರಿಗೆ ಸಂಪೂರ್ಣ ಘಟನೆಯನ್ನು ವಿವರಿಸಿದೆ. ಅವರು ಹೇಳುತ್ತಾರೆ: ಅದರಿಂದ ಅವರಿಗೆ ನನಗಾದಷ್ಟು ಆಶ್ಚರ್ಯವಾಗಲಿಲ್ಲ. ಘಟನೆಯನ್ನು ಕೇಳಿದ ಆಕೆಗೆ ಬೇಸರವಾಗಬಹುದೆಂದು ನಾನು ಭಾವಿಸಿದೆ, ಆದರೆ ಅವರಿಗೆ ಆಶ್ಚರ್ಯವಾಗಲಿಲ್ಲ. ಹಝ್ರತ್ ಆಯಿಶಾ(ರ) ಅವರ ತಾಯಿ ಹೇಳಿದರು ಓ ನನ್ನ ಪ್ರೀತಿಯ ಮಗಳೇ! ನಿಮ್ಮ ವಿರುದ್ಧ ಆಗಿರುವ ಈ ವಿಳಯವನ್ನು ಲಘುವಾಗಿ ತೆಗೆದುಕೊ, ಏಕೆಂದರೆ ಅಲ್ಲಾಹನಆಣೆ!! ಒಬ್ಬ ಸುಂದರ ಮಹಿಳೆಗೆ ತನ್ನನ್ನು ಪ್ರೀತಿಸುವ ಪತಿಯೊಂದಿಗೆ ಇರುವುದು ಅಪರೂಪವಾಗಿದೆ. ಅದು ಅವಳೊಂದಿಗೆ ಸವತಿಯರು ಇದ್ದಾರೆ, ಆದರೆ ಅವರು ಅವಳ ಬಗ್ಗೆ ಅಸೂಯೆ ಹೊಂದಿದ್ದಾರೆ ಮತ್ತು ಅವಳ ಬಗ್ಗೆ ಮಾತನಾಡುತ್ತಾರೆ. ಹಝ್ರತ್ ಆಯಿಶಾ(ರ) ಹೇಳಿದರು: ನಾನು ನೋಡುತ್ತಿರುವುದು ನನ್ನ ಮೇಲೆ ಬೀರುವ ಪರಿಣಾಮವನ್ನು ಅವರ ಮೇಲೆ ಬೀರಲಿಲ್ಲ. ಅದಕ್ಕೆ ನಾನು ಅವರಿಗೆ ಕೇಳಿದೆ ಇದರ ಬಗ್ಗೆ ನನ್ನ ತಂದೆಗೂ ತಿಳಿದಿದೆಯೇ? ಅದಕ್ಕೆ ಅವರು ಹೌದು ಎಂದು ಹೇಳಿದರು. ಆಗ ಹಝ್ರತ್ ಆಯಿಶಾ(ರ) ತನ್ನ ತಾಯಿಯನ್ನು ಕೇಳಿದರು: ಮತ್ತು ರಸೂಲುಲ್ಲಾಹ್(ಸ) ಅವರಿಗೆ? ಅವರು ಹೇಳಿದರು, "ಹೌದು, ರಸೂಲುಲ್ಲಾಹ್(ಸ) ಅವರಿಗೂ ತಿಳಿದಿದೆ." ನನ್ನ ಕಣ್ಣೀರು ಹರಿಯಲು ಪ್ರಾರಂಭಿಸಿತು ಮತ್ತು ನಾನು ಅಳಲು ಪ್ರಾರಂಭಿಸಿದೆ ಎಂದು ಹಝ್ರತ್ ಆಯಿಶಾ(ರ) ಹೇಳುತ್ತಾರೆ. ಹಝ್ರತ್ ಅಬೂಬಕರ್(ರ) ನನ್ನ ಅಳುವ ಧ್ವನಿಯನ್ನು ಕೇಳಿದರು, ಅವರು ಮನೆಯ ಮೇಲಿನ ಕೋಣೆಯಲ್ಲಿ ಖುರ್‌ಆನ್ ಪಠಿಸುತ್ತಿದ್ದರು. ಅವರು ಕೆಳಗೆ ಬಂದು ನನ್ನ ತಾಯಿಗೆ ಏನಾಯಿತು? ಎಂದು ಕೇಳಿದರು. ಅವಳ ಬಗ್ಗೆ ಚರ್ಚಿಸುತ್ತಿರುವ ಮಾತು ಅವಳಿಗೆ ತಿಳಿಯಿತು ಎಂದು ಹೇಳಿದರು, ಆಗ ಹಝ್ರತ್ ಅಬೂಬಕರ್(ರ) ಅವರ ಕಣ್ಣುಗಳಿಂದ ನೀರು ಹರಿಯಿತು. ಅವರು ಹೇಳಿದರು, ಓ ನನ್ನ ಪ್ರೀತಿಯ ಮಗಳೇ! ನೀನು ನಿನ್ನ ಮನೆಗೆ ಹಿಂತಿರುಗು ಎಂದು ನಾನು ನಿನಗೆ ಪ್ರಮಾಣ ಮಾಡುತ್ತೇನೆ. ಹಝ್ರತ್ ಆಯಿಷಾ(ರ) ಹೇಳುತ್ತಾರೆ ಆದ್ದರಿಂದ ನಾನು ನನ್ನ ಮನೆಗೆ ಮರಳಿ ಬಂದೆ.

(ಸಹೀಹ್ ಬುಖಾರಿ, ಕಿತಾಬ್ ತಫ್ಸೀರುಲ್ ಖುರ್‌ಆನ್, ತಫ್ಸೀರ್ ಸೂರಃ ಅನ್ನೂರ್, ವರದಿ ಸಂಖ್ಯೆ–4757)

ಇಫ್ಕ್ ಘಟನೆಯ ಉಲ್ಲೇಖದಲ್ಲಿ ಈ ಹೇಯ ಪಿತೂರಿ ಮತ್ತು ಹಝ್ರತ್ ಅಬು ಬಕರ್(ರ) ಅವರ ಸದ್ಗುಣಗಳನ್ನು ವಿವರಿಸುತ್ತ ಹಝ್ರತ್ ಮುಸ್ಲೆಹ್ ಮೌಊದ್(ರ) ಒಂದು ಸ್ಥಳದಲ್ಲಿ ಹೇಳಿದರು, ಯಾರಿಗೆಲ್ಲ ಕೆಟ್ಟ ಹೆಸರನ್ನು ತರುವುದರಿಂದ ಕಪಟವಿಶ್ವಾಸಿಗಳಿಗೆ ಮತ್ತು ಅವರ ಸರದಾರರಿಗೆ ಪ್ರಯೋಜನವಿತ್ತು ಎಂಬುವುದನ್ನು ನಾವು ಯೋಚಿಸಬೇಕಾಗಿದೆ. ಹಝ಼್ರತ್ ಆಯಿಶ(ರ)ರ ಮೇಲೆ ಆರೋಪ ಹೊರಿಸಿಕೊಂಡು ಕಪಟವಿಶ್ವಾಸಿಗಳಿಗೆ ಪೈಗಂಬರ್(ಸ) ಮತ್ತು ಹಝ಼್ರತ್ ಅಬೂಬಕರ್(ರ)ರೊಡನೆ ಇದ್ದ ಹಗೆಯನ್ನು ತೀರಿಸಬಹುದಾಗಿತ್ತು.

ಏಕೆಂದರೆ ಹಝ಼್ರತ್ ಆಯಿಶ(ರ) ಒಬ್ಬರ ಪತ್ನಿಯೂ ಮತ್ತೊಬ್ಬರ ಪುತ್ರಿಯೂ ಆಗಿದ್ದರು. ಈ ಇಬ್ಬರಿಗೆ ಕೆಟ್ಟ ಹೆಸರನ್ನು ತಂದರೆ, ಕೆಲವು ಜನರಿಗೆ ರಾಜಕೀಯವಾಗಿ ಮತ್ತು ನೈತಿಕವಾಗಿ ಪ್ರಯೋಜನ ಲಭಿಸಬಹುದಾಗಿತ್ತು. ಹಝ಼್ರತ್ ಆಯಿಶ(ರ)ರಿಗೆ ಕೆಟ್ಟ ಹೆಸರನ್ನು ತರುವುದರಿಂದ ಯಾರಿಗೂ ಪ್ರಯೋಜನ ಲಭಿಸಲು ಸಾಧ್ಯವಿರಲಿಲ್ಲ. ಹಝ಼್ರತ್ ಆಯಿಶ(ರ)ರ ಸ್ಥಾನವನ್ನು ಹಝ಼್ರತ್ ಪೈಗಂಬರ್(ಸ)ರ ದೃಷ್ಟಿಯಲ್ಲಿ ಕೆಳಗೆ ಇಳಿಸಲು ಮತ್ತು ತಮಗೆ ಸ್ಥಾನ ಲಭಿಸಲು ಇತರ ಪತ್ನಿಯಂದಿರು ಈ ಆರೋಪದಲ್ಲಿ ಭಾಗಿಯಾಗಿರಬಹುದು ಎಂದು ಭಾವಿಸಬಹುದಾಗಿತ್ತು. ಆದರೆ ಹಾಗೇನೂ ನಡೆದಿರಲಿಲ್ಲ ಎಂದು ಚರಿತ್ರೆಯಿಂದ ತಿಳಿದುಬರುತ್ತದೆ. ಹಝ್ರತ್ ಆಯಿಷಾ(ರ) ರವರ ಸವತಿಯರಲ್ಲಿ ರಸೂಲುಲ್ಲಾಹ್(ಸ) ಅವರ ಪತ್ನಿಯರಲ್ಲಿ ನಾನು ನನ್ನ ಪ್ರತಿಸ್ಪರ್ಧಿ ಮತ್ತು ಎದುರಾಳಿ ಎಂದು ಪರಿಗಣಿಸಿದ ಪತ್ನಿ ಎಂದರೆ ಹಝ್ರತ್ ಝೈನಬ್(ರ) ಅವರಾಗಿದ್ದರು. ಆಕೆಯನ್ನು ಬಿಟ್ಟರೆ ಬೇರೆ ಯಾವ ಪತ್ನಿಯನ್ನೂ ನಾನು ನನ್ನ ಪ್ರತಿಸ್ಪರ್ಧಿ ಎಂದು ಪರಿಗಣಿಸಿಲ್ಲ, ಆದರೆ ನನ್ನ ಮೇಲೆ ಆರೋಪ ಹೊರಿಸಿದಾಗ ಯಾರಾದರೂ ನನ್ನ ಮೇಲೆ ಆರೋಪ ಮಾಡಿದರೆ ಹೆಚ್ಚು ಗಟ್ಟಿಯಾಗಿ ನಿರಾಕರಿಸಿದ್ದು ಹಝ್ರತ್ ಝೈನಬ್(ರ.ಅ) ಆಗಿದ್ದರು ಅವರ ದಯೆಯನ್ನು ನಾನು ಎಂದಿಗೂ ಮರೆಯಲು ಸಾಧ್ಯವಿಲ್ಲ ಎಂದು ಹಝ್ರತ್ ಆಯಿಷಾ(ರ) ಸ್ವತಃ ಹೇಳುತ್ತಾರೆ.

ಹಝ್ರತ್ ಆಯಿಶಾ(ರ) ಅವರೊಂದಿಗೆ ಯಾರಿಗಾದರೂ ಹಗೆತನವಿದ್ದರೆ ಅದು ಅವರ ಸವತಿಗಳಾಗಿರಬಹುದು ಮತ್ತು ಅವರು ಬಯಸಿದರೆ, ಅವರು ಅದರಲ್ಲಿ ಭಾಗವಹಿಸಬಹುದಿತ್ತು, ಇದರಿಂದಾಗಿ ಹಝ್ರತ್ ಆಯಿಷಾ(ರ) ಅವರು ರಸೂಲುಲ್ಲಾಹ್(ಸ) ರವರ ನಂಬಿಕೆಯನ್ನು ತೆಗೆಯಬಹುದಾಗಿತ್ತು. ಆದರೆ ಅವರು ಈ ವಿಳಯದಲ್ಲಿ ಮಧ್ಯಪ್ರವೇಶಿಸಲಿಲ್ಲ, ಅಂದರೆ ಇತರ ಪತ್ನಿಯರು ಈ ವಿಷಯದಲ್ಲಿ ಮಧ್ಯಪ್ರವೇಶಿಸಲಿಲ್ಲ ಎಂದು ಇತಿಹಾಸದಿಂದ ಸಾಬೀತು ಆಗಿದೆ. ಮತ್ತು ಅವರಲ್ಲಿ ಯಾರನ್ನಾದರು ಆಯಿಷಾ(ರ)ರವರ ಬಗ್ಗೆ ಕೇಳಿದರೆ ಅವರೆಲ್ಲರು ಹಝ್ರತ್ ಆಯಿಶಾ(ರ) ಅವರನ್ನು ಹೊಗಳಿದರು. ಹೀಗೆ ಮತ್ತೊಬ್ಬ ಪತ್ನಿಯ ಕುರಿತು ಪ್ರವಾದಿ(ಸ)ರವರು ಈ ವಿಳಯವನ್ನು ಪ್ರಸ್ತಾಪಿಸಿದಾಗ ಆಯಿಶಾ ಅವರಲ್ಲಿ ಒಳ್ಳೆಯದನ್ನು ಬಿಟ್ಟು ಬೇರೇನೂ ಕಾಣಲಿಲ್ಲ ಎಂದು ಹೇಳಿದರು. ಆದ್ದರಿಂದ, ಹಝ್ರತ್ ಆಯಿಷಾ(ರ) ಅವರ ದ್ವೇಷವನ್ನು ಹೊರಹಾಕುವ ಸಾಧ್ಯತೆಯಿದ್ದರೆ, ಅದು ಅವರ ಸವತಿಯರಿಂದ ಆಗಿರಬಹುದು, ಆದರೆ ಈ ವಿಳಯದಲ್ಲಿ ಅವರಿಗೆ ಯಾವುದೇ ಸಂಬಂಧವಿರಲಿಲ್ಲ.

ಹಾಗೆಯೇ ಪುರುಷರ ಹೆಂಗಸರೊಂದಿಗೆ ದ್ವೇಳ ಸಾಧಿಸಲು ಕಾರಣವಿಲ್ಲ. ಆದ್ದರಿಂದ ರಸೂಲುಲ್ಲಾಹ್(ಸ) ಅವರ ಮೇಲಿನ ದ್ವೇಷದಿಂದ ಅಥವಾ ಹಝ್ರತ್ ಅಬೂಬಕರ್(ರ) ಅವರ ಮೇಲಿನ ದ್ವೇಷದಿಂದ ಆಯಿಷಾ(ರ) ಅವರ ವಿರುದ್ಧ ಆರೋಪ ಮಾಡಲಾಗಿತ್ತು. ರಸೂಲುಲ್ಲಾಹ್(ಸ) ಹೊಂದಿದ್ದ ಸ್ಥಾನವನ್ನು ಆರೋಪಿಗಳು ಕಸಿದುಕೊಳ್ಳಲು ಸಾಧ್ಯವಿರಲಿಲ್ಲ. ಅವರಿಗೆ ಯಾವ ಅಪಾಯವಿತ್ತು ಎಂದರೆ ರಸೂಲುಲ್ಲಾಹ್(ಸ) ಅವರ ನಂತರವೂ ಸಹ ಅವರು ತಮ್ಮ ಗುರಿಗಳನ್ನು ಪೂರೈಸುವಲ್ಲಿ ವಂಚಿತರಾಗುವುದಿಲ್ಲ. ಮತ್ತು ರಸೂಲುಲ್ಲಾಹ್(ಸ) ಅವರ ನಂತರ ಯಾರಾದರೂ ಖಲೀಫರಾಗಲು ಅರ್ಹರಾಗಿದ್ದರೆ, ಅವರು ಅಬೂಬಕರ್(ರ) ಎಂದು ಅವರು ನೋಡುತ್ತಿದ್ದರು.

ಆದುದರಿಂದ ಈ ಅಪಾಯವನ್ನು ಅರಿತು ರಸೂಲುಲ್ಲಾಹ್(ಸ) ರವರ ದೃಷ್ಟಿಯಿಂದ ಹಝ್ರತ್ ಆಯಿಷಾ(ರ) ಅವರನ್ನು ಬೀಳಿಸಲು ಅವರ ದೂರಿದರು. ಹೀಗೆ ಮಾಡಿದರೆ ಹಝ್ರತ್ ಆಯಿಷಾ(ರ) ಅವರು ರಸೂಲುಲ್ಲಾಹ್(ಸ.ಅ) ರವರ ದೃಷ್ಟಿಯಿಂದ ಬೀಳುವುದರಿಂದ ಹಝ್ರತ್ ಅಬೂಬಕರ್(ರ) ಅವರನ್ನು ಮುಸ್ಲಿಮರಲ್ಲಿದ್ದ ಸ್ಥಾನಮಾನವು ಕಳೆದುಹೋಗುತ್ತದೆ ಇದರಿಂದ ಮುಸ್ಲಿಮರು ಹಝ್ರತ್ ಅಬುಬಕರ್(ರ) ಅವರಿಂದ ಬೇಸರಗೊಂಡು ಅವರ ಮೇಲೆ ಅವರಿಗಿದ್ದ ಭಕ್ತಿಯನ್ನು ಬಿಟ್ಟುಬಿಡುತ್ತಾರೆ, ಮತ್ತು ಈ ರೀತಿಯಾಗಿ, ರಸೂಲುಲ್ಲಾಹ್(ಸ) ಅವರ ನಂತರ ಹಝ್ರತ್ ಅಬೂಬಕರ್(ರ) ಖಲೀಫ ಆಗಬೇಕಿರುವ ಬಾಗಿಲು ಸಂಪೂರ್ಣವಾಗಿ ಮುಚ್ಚಲ್ಪಡುತ್ತದೆ ಎಂದು ಭಾವಿಸಿದರು. ಹಝ್ರತ್ ಮುಸ್ಲೆಹ್ ಮೌಊದ್(ರ) ರವರು ಹೇಳುತ್ತಾರೆ, ಹಝ್ರತ್ ಖಲೀಫಾ ಅವ್ವಲ್(ರ) ಅವರ ಜೀವನದಲ್ಲಿ, ಪೈಗಾಮಿಯರ ಒಂದು ಗುಂಪು ನನ್ನನ್ನು ಆಕ್ಷೇಪಿಸುತ್ತಲೇ ಇರುತ್ತಿತ್ತು ಮತ್ತು ನನ್ನನ್ನು ದೂಷಿಸಲು ಪ್ರಯತ್ನಿಸುತ್ತಿತ್ತು. ಆದ್ದರಿಂದಲೇ, ಹಝ್ರತ್ ಆಯಿಷಾ(ರ) ಅವರನ್ನು ಆರೋಪಿಸಿದ ಘಟನೆಯ ನಂತರ ಸರ್ವಶಕ್ತನಾದ ಅಲ್ಲಾಹನು ಖಿಲಾಫತ್ ಅನ್ನು ಉಲ್ಲೇಖಿಸಲು ಇದು ಕಾರಣವಾಗಿದೆ.

ರಸೂಲುಲ್ಲಾಹ್(ಸ)ರವರ ನಂತರ ಯಾರಿಗಾದರು ಸ್ಥಾನವಿದ್ದರೆ ಅದು ಕೇವಲ ಹಝ್ರತ್ ಅಬುಬಕರ್(ರ) ಅವರಿಗೆ ಇದೆ ಎಂದು ಸಹಾಬಿಗಳು ಪರಸ್ಪರ ಮಾತನಾಡಿಕೊಳ್ಳುತ್ತಿದ್ದರು ಎಂದು ಹದೀಸ್‌ನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ ಒಮ್ಮೆ ಒಬ್ಬ ವ್ಯಕ್ತಿ ರಸೂಲುಲ್ಲಾಹ್(ಸ) ಅವರ ಬಳಿಗೆ ಬಂದು ಹೇಳಿದನು: ಯಾ ರಸೂಲಲ್ಲಾಹ್(ಸ)! ದಯವಿಟ್ಟು ನನ್ನ ಅಗತ್ಯವನ್ನು ಪೂರೈಸಿ. ಈ ಸಮಯದಲ್ಲಿ ಬೇಡ, ನಂತರ ಬನ್ನಿ ಎಂದರು. ಅವರು ಬದವಿಯಾಗಿದ್ದರಿಂದ ನಾಗರಿಕತೆ ಮತ್ತು ಸಭ್ಯತೆಯ ತತ್ವಗಳ ಬಗ್ಗೆ ಅಜ್ಞಾನಿಯಾಗಿದ್ದನು. ಅಷ್ಟಕ್ಕೂ ನೀವು ಮನುಷ್ಯರೆ ಎಂದು ಅವನು ಸ್ಪಷ್ಟವಾಗಿ ಹೇಳಿದನು. ನಾನು ನಂತರ ಬಂದಾಗ ನೀವು ಈಗಾಗಲೇ ತೀರಿಹೋದರೆ ನಾನು ಏನು ಮಾಡಬೇಕು? ಅದಕ್ಕೆ ರಸೂಲುಲ್ಲಾಹ್(ಸ) ಹೇಳಿದರು, "ನಾನು ಈ ಜಗತ್ತಿನಲ್ಲಿ ಇಲ್ಲದಿದ್ದರೆ, ಅಬೂಬಕರ್ ಬಳಿಗೆ ಹೋಗು, ಅವರು ನಿನ್ನ ಅಗತ್ಯವನ್ನು ಪೂರೈಸುತ್ತಾರೆ." ಅಂತೆಯೇ, ರಸೂಲುಲ್ಲಾಹ್(ಸ) ಒಮ್ಮೆ ಹಝ್ರತ್ ಆಯಿಷಾ(ರ) ರವರಿಗೆ ಹೇಳಿದರು ಎಂದು ಹದೀಸ್‌ಗಳಲ್ಲಿ ಉಲ್ಲೇಖಿಸಲಾಗಿದೆ.

ಓ ಆಯಿಶಾ(ರ)!! ನನ್ನ ನಂತರ ಅಬೂಬಕರ್(ರ) ಅವರನ್ನು ನೇಮಿಸಲು ನಾನು ಬಯಸುತ್ತೇನೆ, ಆದರೆ ಸರ್ವಶಕ್ತನಾದ ಅಲ್ಲಾಹನು ಮತ್ತು ವಿಶ್ವಾಸಿಗಳು ಅವನನ್ನು ಹೊರತುಪಡಿಸಿ ಬೇರೆ ಯಾರನ್ನೂ ಮೆಚ್ಚುವುದಿಲ್ಲ ಎಂದು ನನಗೆ ತಿಳಿದಿದೆ, ಆದ್ದರಿಂದ ನಾನು ಏನನ್ನೂ ಹೇಳುವುದಿಲ್ಲ. ಆದ್ದರಿಂದ, ರಸೂಲುಲ್ಲಾಹ್(ಸ) ಅವರ ನಂತರ, ಅವರಲ್ಲಿ ಯಾರಿಗಾದರೂ ಸ್ಥಾನಮಾನವಿದ್ದರೆ, ಅದು ಅಬೂಬಕರ್‌ಗೆ ಮತ್ತು ಅವರು ಪ್ರವಾದಿಯವರ ಖಲೀಫರಾಗಲು ಅರ್ಹರು ಎಂದು ಸಹಾಬರವರು ಸಹಜವಾಗಿ ಅರ್ಥಮಾಡಿಕೊಂಡಿದ್ದರು.

ಮಕ್ಕಾ ಜೀವನ ಹೇಗಿತ್ತೆಂದರೆ ಅದರಲ್ಲಿ ಸರ್ಕಾರ ಮತ್ತು ಅದರ ನಿರ್ವಹಣೆಯ ಪ್ರಶ್ನೆಯೇ ಉದ್ಭವಿಸಲಿಲ್ಲ, ಆದರೆ ರಸೂಲುಲ್ಲಾಹ್(ಸ) ಅವರು ಮದೀನಾಕ್ಕೆ ಬಂದ ನಂತರ, ಸರ್ಕಾರ ಸ್ಥಾಪನೆಯಾಯಿತು ಮತ್ತು ಸ್ವಾಭಾವಿಕವಾಗಿ ಈ ಪ್ರಶ್ನೆ ಉದ್ಭವಿಸಲು ಪ್ರಾರಂಭಿಸಿತು. ಕಪಟಿಗಳ ಹೃದಯದಲ್ಲಿ ಅವರು ಮದೀನಾಕ್ಕೆ ಬಂದಿದ್ದರಿಂದ ಅವರ ಅನೇಕ ಭರವಸೆಗಳು ಅಮಾನ್ಯಗೊಂಡವು. ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್ ತನ್ನ ರಾಜತ್ವದ ಎಲ್ಲಾ ಸಾಧ್ಯತೆಗಳು ಹೋದುದನ್ನು ಕಂಡಾಗ, ಅವನು ತುಂಬಾ ಕೋಪಗೊಂಡನು ಮತ್ತು ಅವರು ತೋರಿಕೆಗಾಗಿ ಮುಸ್ಲಿಮರಲ್ಲಿ ಸೇರಿಕೊಂಡಿದ್ದರು ಅವನು ಯಾವಾಗಲೂ ಇಸ್ಲಾಂ ಧರ್ಮದಲ್ಲಿ ಪಿತೂರಿಯನ್ನು ಹುಟ್ಟಿಸುತ್ತಿದ್ದನು. ಅವನು ಮತ್ತೇನೂ ಮಾಡಲಾರದ ಕಾರಣ ಅವನ ಮನದಲ್ಲಿ ಏನಾದರೂ ಆಸೆ ಮೂಡಿದರೆ ಅದು ಮುಹಮ್ಮದ್(ಸ.ಅ)ರವರ ಮರಣದ ನಂತರ ತಾನೇ ಮದೀನಾದ ರಾಜನಾಗುತ್ತೇನೆ ಅಂತ ಆದರೆ ಮುಸ್ಲಿಮರಲ್ಲಿ ಅರಸ ಸಾಮ್ರಾಜ್ಯ ಶುರುವಾದಾಗ ಒಂದು ಹೊಸ ವ್ಯವಸ್ಥೆಯನ್ನು ನೋಡಿದಾಗ ಅವರೆಲ್ಲರು ರಸೂಲುಲ್ಲಾಹ್(ಸ) ಅವರಲ್ಲಿ ಇಸ್ಲಾಮಿ ಸಾಮ್ರಾಜ್ಯದ ವಿಧಾನ ಏನು? ಎಂದು ವಿಭಿನ್ನವಾದ ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸಿದರು ಅದನ್ನು ನೋಡಿ ಅವರು ಶುರುಮಾಡಿದರು. ನಿಮ್ಮ(ಸ) ಅವರ ನಂತರ ಇಸ್ಲಾಮ್ ಧರ್ಮದ ಪರಿಸ್ಥಿತಿ ಏನಾಗುತ್ತದೆ ಮತ್ತು ಅದರ ಬಗ್ಗೆ ಮುಸ್ಲಿಮರು ಏನು ಮಾಡಬೇಕು? ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್ ಈ ಪರಿಸ್ಥಿತಿಯನ್ನು ನೋಡಿದಾಗ, ಈಗ ಇಸ್ಲಾಂನ ಸರ್ಕಾರವು ಅದರಲ್ಲಿ ತನ್ನ ಪಾತ್ರವನ್ನು ಹೊಂದಿರದ ರೀತಿಯಲ್ಲಿ ಸ್ಥಾಪನೆಯಾಗುತ್ತದೆ ಎಂದು ಅವನು ಭಯಪಡಲು ಪ್ರಾರಂಭಿಸಿದನು. ಅಂದರೆ ಅಬ್ದುಲ್ಲಾಗೆ ಯಾವುದೇ ಭಾಗವಿಲ್ಲ. ಅವನು ಈ ಸಂದರ್ಭಗಳನ್ನು ತಡೆಯಲು ಬಯಸಿದ್ದನು. ಮತ್ತು ಈ ಕಾರಣಕ್ಕಾಗಿ, ಅವನು ಅದರ ಬಗ್ಗೆ ಯೋಚಿಸಿದಾಗ, ಯಾರಾದರೂ ಇಸ್ಲಾಮಿಕ್ ತತ್ವಗಳ ಮೇಲೆ ಇಸ್ಲಾಮಿಕ್ ಸರ್ಕಾರವನ್ನು ಸ್ಥಾಪಿಸಲು ಸಾಧ್ಯವಾದರೆ, ಅದು ಹಝ್ರತ್ ಅಬುಬಕರ್(ರ) ಅವರಾಗಿದ್ದಾರೆ ಮತ್ತು ರಸೂಲುಲ್ಲಾಹ್(ಸ) ಅವರ ನಂತರ, ಮುಸ್ಲಿಮರು ಅವರ ಕಡೆಗೆ ನೋಡುತ್ತಾರೆ, ಅಂದರೆ ಹಝ್ರತ್ ಅಬುಬಕರ್(ರ) ರವರ ಕಡೆ ಮತ್ತು ಅವರು ಅವರನ್ನು ಎಲ್ಲರಿಗಿಂತಲೂ ಹೆಚ್ಚು ಗೌರವಾನ್ವಿತರು ಎಂದು ಪರಿಗಣಿಸುತ್ತಾರೆ. ಆದ್ದರಿಂದ ಅವನು ಜನರ ದೃಷ್ಟಿಯಲ್ಲಿ ಹಝ್ರತ್ ಅಬೂಬಕರ್(ರ) ಅವರನ್ನು ಅಪಖ್ಯಾತಿಗೊಳಿಸುವುದರಲ್ಲಿ ಮತ್ತು ಹಝ್ರತ್

ಅಬೂಬಕರ್(ರ) ಅವರನ್ನು ಕೆಳಗಿಳಿಸುವಲ್ಲಿ ತನ್ನ ಒಳಿತನ್ನು ಕಂಡುಕೊಂಡನು. ಮತ್ತು ಸ್ವತಃ ರಸೂಲುಲ್ಲಾಹ್(ಸ) ರವರ ದೃಷ್ಟಿಯಲ್ಲಿಯೂ ಸಹ ಪಥನಗೊಳಿಸಬೇಕು ಎಂದು ಯೋಚಿಸಿದನು. ಈ ದುರುದ್ದೇಶವನ್ನು ಪೂರೈಸಲು ಹಝ್ರತ್ ಆಯಿಷಾ(ರ) ಅವರ ಒಂದು ಯುದ್ಧದ ಸಂದರ್ಭದಲ್ಲಿ ಹಿಂದುಳಿದ ಘಟನೆಯಲ್ಲಿ ಪಡೆದುಕೊಂಡನು ಹೀಗೆ ಈ ದುಷ್ಟ ವ್ಯಕ್ತಿಯು ಅವರ ವಿರುದ್ಧ ಕೊಳಕು ಆರೋಪವನ್ನು ಮಾಡಿದನು, ಇದನ್ನು ಪವಿತ್ರ ಖುರ್‌ಆನ್‌ನಲ್ಲಿ ಉಲ್ಲೇಖಿಸಲಾಗಿದೆ ಮತ್ತು ಹದೀಸ್‌ಗಳಲ್ಲಿ ವಿವರಿಸಲಾಗಿದೆ.

ಈ ರೀತಿಯಾಗಿ ಹಝ್ರತ್ ಅಬೂಬಕರ್(ರ) ಅವರು ಜನರ ದೃಷ್ಟಿಯಲ್ಲಿ ಅವಮಾನಕ್ಕೊಳಗಾಗುತ್ತಾರೆ ಮತ್ತು ರಸೂಲುಲ್ಲಾಹ್(ಸ) ಅವರೊಂದಿಗಿನ ಅವರ ಸಂಬಂಧವೂ ಹಾಳಾಗುತ್ತದೆ ಮತ್ತು ಈ ವ್ಯವಸ್ಥೆ ಸ್ಥಾಪಿತವಾಗಲು ಅಂತರ ಉಂಟಾಗುತ್ತದೆ ಎಂಬುದು ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್‌ನ ಮೂಲ ಉದ್ದೇಶವಾಗಿತ್ತು. ಇದು ಸ್ಥಾಪಿಸಿದ್ದಲ್ಲಿ ಅವನ ಎಲ್ಲಾ ಉದ್ದೇಶಗಳು ನಶಿಸುತ್ತಿತ್ತು. ರಸೂಲುಲ್ಲಾಹ್(ಸ) ಅವರ ನಂತರ ಪ್ರಭುತ್ವದ ಕನಸು ಕಾಣುತ್ತಿದ್ದವನು ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್ ಮಾತ್ರ ಅಲ್ಲ. ಅವನೊಂದಿಗೆ ಇನ್ನೂ ಕೆಲವರು ಈ ಕಾಯಿಲೆಯಿಂದ ಬಳಲುತ್ತಿದ್ದರು. ಕಪಟಿಯು ಯಾವಾಗಲೂ ತನ್ನ ಮರಣವನ್ನು ದೂರವೆಂದು ಪರಿಗಣಿಸುವುದರಿಂದ ಮತ್ತು ಅವನು ಇತರರ ಸಾವಿನ ಬಗ್ಗೆ ಊಹಾಪೋಹವನ್ನು ಮುಂದುವರೆಸುತ್ತಾನೆ, ಆದ್ದರಿಂದ ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್ ತನ್ನ ಮರಣವನ್ನು ದೂರವೆಂದು ಪರಿಗಣಿಸಿದನು ಮತ್ತು ಅವನು ರಸೂಲುಲ್ಲಾಹ್(ಸ) ಅವರ ಜೀವಿತಾವಧಿಯಲ್ಲಿ ಅವನು ತನ್ನ ಹಿಮ್ಮಡಿಯನ್ನು ಉಜ್ಜಿಕೊಂಡು ಸಾಯುತ್ತಾನೆ ಎಂದು ತಿಳಿದಿರಲಿಲ್ಲ. ಅವನು ರಸೂಲುಲ್ಲಾಹ್(ಸ) ರವರು ಮರಣ ಹೊಂದಿದರೆ ನಾನು ಅರೇಬಿಯಾದ ರಾಜನಾಗುತ್ತೇನೆ ಎಂದು ಊಹಿಸುತ್ತಿದ್ದನು. ಆದರೆ ಈಗ ಅಬೂಬಕರ್(ರ) ಅವರ ಒಳ್ಳೆಯತನ ಮತ್ತು ಧರ್ಮನಿಷ್ಠೆ ಮತ್ತು ಉದಾತ್ತತೆಯನ್ನು ಮುಸ್ಲಿಮರಲ್ಲಿ ಗುರುತಿಸಿದ್ದಾರೆ ಎಂದು ಅವನು ತಿಳಿದುಕೊಂಡನು. ರಸೂಲುಲ್ಲಾಹ್(ಸ) ಅವರು ನಮಾಝ್‌ನ ನೇತೃತ್ವ ವಹಿಸಲು ಆಗಮಿಸುತ್ತಿರದಿದ್ದಾಗ ಹಝ್ರತ್ ಅಬೂಬಕರ್(ರ) ಅವರ ಸ್ಥಳದಲ್ಲಿ ಪ್ರಾರ್ಥನೆಯನ್ನು ನಡೆಸುತ್ತಾರೆ. ಮುಸ್ಲಿಮರಿಗೆ ರಸೂಲುಲ್ಲಾಹ್(ಸ) ಅವರಿಂದ ಫತ್ವಾ ಕೇಳಲು ಅವಕಾಶ ಸಿಗದಿದ್ದರೆ ಅವರು ಅಬುಬಕರ್(ರ) ಅವರನ್ನು ಫತ್ವಾ ಕೇಳುತ್ತಾರೆ. ಇದನ್ನು ನೋಡಿದ ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್ ಅವನು ಮುಂದೆ ರಾಜ್ಯವನ್ನು ಪಡೆಯುವ ನಿರೀಕ್ಷೆಯಲ್ಲಿದ್ದನು ಮತ್ತು ಅದನ್ನು ನಿವಾರಿಸಲು ಬಯಸಿದನು. ಈ ವಿಷಯವನ್ನೇ ಪರಿಹರಿಸಲು ಮತ್ತು ಮತ್ತು ಮುಸ್ಲಿಮರ ದೃಷ್ಟಿಯಲ್ಲಿ ಹಝ್ರತ್ ಅಬೂಬಕರ್(ರ)ರಿಗೆ ಇದ್ದ ಗೌರವ ಕಡಿಮೆಯಾಗಲು ಮತ್ತು ಹಝ್ರತ್ ಅಬೂಬಕರ್(ರ) ಮುಂದಿನ ಖಲೀಫರಾಗುವ ಸಾಧ್ಯತೆ ಇರದಂತೆ ಆಗಲು ಅವನು ಹೀಗೆ ಮಾಡಿದನು. ಇದೇ ವಿಷಯವನ್ನು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಪ್ರಸ್ತಾಪಿಸಿರುವನು: **ಇನ್ನಲ್ಲಧೀನ ಜಾಊ ಬಿಲ್ ಇಫ್‌ಕಿ ಉಸ್‌ಬತುಮ್ಮಿಂಕುಮ್**. ಅರ್ಥ: ನಿಶ್ಚಯವಾಗಿಯೂ ಆ ಮಹಾ ಸುಳ್ಳನ್ನು ಆರೋಪಿಸಿದವರು ನಿಮ್ಮ ಪೈಕಿಯ ಒಂದು ಗುಂಪಿನವರೇ ಆಗಿದ್ದಾರೆ. ಆದರೆ ಅಲ್ಲಾಹನು ನುಡಿಯುತ್ತಾನೆ **ಲಾ ತಹ್‌ಸಬೂಹೂ ಶರ್‍ರಲ್ಲಕುಂ. ಬಲ್ ಹುವ ಖೈರುಲ್ಲಕುಂ**. ಅದು ನಿಮಗೆ ದೋಷಕರವೆಂದು ಭಾವಿಸಬೇಡಿರಿ. ಬದಲು, ನಿಮಗೆ ಅದು ಗುಣಕರವಾಗಿದೆ. ಎಂದರೆ ಈ ಆರೋಪ ನಿಮ್ಮ ಒಳಿತು ಮತ್ತು ಪ್ರಗತಿಗೆ ಕಾರಣವಾಗುವುದು. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ನಾವು ಖಿಲಾಫತ್ ಬಗ್ಗೆ ತತ್ವಗಳನ್ನು ವಿವರಿಸಿದ್ದೇವೆ ಮತ್ತು ಈ ಕಪಟಿಗಳು ಕಠಿಣವಾಗಿ ನೋಡುತ್ತಾರೆ ಎಂದು ನಮಗೆ ಹೇಳುತ್ತೇವೆ. ಅವರು ವಿಫಲರಾಗುತ್ತಾರೆ ಮತ್ತು ನಾವು ಸ್ಥಾಪಿಸಿದ ಖಿಲಾಫತ್ ಅನ್ನು ತ್ಯಜಿಸುತ್ತಾರೆ ಏಕೆಂದರೆ ಖಿಲಾಫತ್ ಪ್ರವಾದಿತ್ವದ ಒಂದು ಅಂಶವಾಗಿದೆ ಮತ್ತು ದೈವಿಕ ಬೆಳಕನ್ನು ಸಂರಕ್ಷಿಸುವ ಸಾಧನವಾಗಿದೆ.

(ಖುತ್ಬತ್ ಮಹಮೂದ್, ಸಂಪುಟ-18, ಪುಟಗಳು 451-455 ರಿಂದ ಆಯ್ದುಕೊಳ್ಳಲಾಗಿದೆ)

ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳಿದರು, ಈಗ ನೋಡಿ! ಅದೇ ವಿಷಯವನ್ನು ಸೂರಾ ನೂರ್‌ನ ಆರಂಭದಿಂದ ಅದರ ಅಂತ್ಯದವರೆಗೆ ಹೇಗೆ ವಿವರಿಸಲಾಗಿದೆ. ಹಝ್ರತ್ ಆಯಿಷಾ(ರ) ಅವರ ವಿರುದ್ಧ ಮಾಡಿದ ಆರೋಪವನ್ನು ಮೊದಲು ಉಲ್ಲೇಖಿಸಲಾಗಿದೆ ಮತ್ತು ಹಝ್ರತ್ ಆಯಿಶಾ(ರ) ಅವರ ಮೇಲೆ ಆರೋಪದ ಮುಖ್ಯ ಉದ್ದೇಶವೆಂದರೆ ಹಝ್ರತ್ ಅಬುಬಕರ್(ರ) ಅವರನ್ನು ಅವಮಾನಿಸುವುದು ಮತ್ತು ಅವರ ಸಂಬಂಧಗಳು ಹದಗೆಡುತ್ತವೆ ಮತ್ತು ಅದರ ಪರಿಣಾಮವಾಗಿ ಅವರ ಗೌರವವು ಹದಗೆಡುತ್ತದೆ. ಮತ್ತು ಅದರ ಪ್ರತಿಫಲವಾಗಿ ಮುಸ್ಲಿಮರ ದೃಷ್ಟಿಯಲ್ಲಿ ಅವರ ಗೌರವ ಕಡಿಮೆಯಾಗುತ್ತದೆ ಮತ್ತು ರಸೂಲುಲ್ಲಾಹ್(ಸ) ಅವರ ಮರಣದ ನಂತರ ಅವರು ಖಲೀಫರಾಗಲು ಸಾಧ್ಯವಾಗುವುದಿಲ್ಲ. ಏಕೆಂದರೆ ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್ ರಸೂಲುಲಲಾಹ್(ಸ) ರವರ ನಂತರ ಮುಸ್ಲಿಮರ ದೃಷ್ಟಿಯು ಹಝ್ರತ್ ಅಬುಬಕರ್(ರ)ರವರ ಮೇಲೆ ಬೀಳುತ್ತದೆ ಎಂದು ಅರಿತುಕೊಂಡಿದ್ದನು. ಮತ್ತು ಅಬುಬಕರ್(ರ) ಅವರ ಮೂಲಕ ಖಿಲಾಫತ್ ಸ್ಥಾಪನೆಯಾದರೆ, ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್ ಅವನ ಸಾಮ್ರಾಜ್ಯದ ಕನಸುಗಳು ಎಂದಿಗೂ ಈಡೇರುವುದಿಲ್ಲ. ಆದ್ದರಿಂದಲೇ ಸರ್ವಶಕ್ತನಾದ ಅಲ್ಲಾಹನು ಈ ಆರೋಪವನ್ನು ಪ್ರಸ್ತಾಪಿಸಿದ ನಂತರ ಖಿಲಾಫತ್ ಅನ್ನು ಉಲ್ಲೇಖಿಸಿದ್ದಾನೆ ಮತ್ತು ಖಿಲಾಫತ್ ರಾಜಪ್ರಭುತ್ವವಲ್ಲ ಎಂದು ಹೇಳಿದನು. ಅದು ದೈವಿಕ ಪ್ರಕಾಶವನ್ನು ಉಳಿಸಿಕೊಳ್ಳುವ ಸಾಧನವಾಗಿದೆ, ಆದ್ದರಿಂದ ಅಲ್ಲಾಹನು ತನ್ನ ಸ್ಥಾಪನೆಯನ್ನು ಅವನ ಕೈಯಲ್ಲಿ ಇರಿಸಿದ್ದಾನೆ. ಅದರ ನಷ್ಟವು ಪ್ರವಾದಿತ್ವದ ಬೆಳಕು ಮತ್ತು ದೈವತ್ವದ ಬೆಳಕಿನ ನಷ್ಟವಾಗಿದೆ. ಆದ್ದರಿಂದ, ಅವನು ಖಂಡಿತವಾಗಿಯೂ ಈ ಬೆಳಕನ್ನು ಸ್ಥಾಪಿಸುತ್ತಾನೆ ಮತ್ತು ಪ್ರವಾದಿತ್ವದ ನಂತರ ರಾಜ್ಯವನ್ನು ಸ್ಥಾಪಿಸಲು ಅವನು ಎಂದಿಗೂ ಅನುಮತಿಸುವುದಿಲ್ಲ ಮತ್ತು ಅವನು ಬಯಸಿದವನನ್ನು ಮಾತ್ರ ಖಲೀಫನನ್ನಾಗಿ ಮಾಡುತ್ತಾನೆ, ಆದರೆ ಅವನು ಒಂದಲ್ಲ ಆದರೆ ಅನೇಕ ಜನರನ್ನು ಖಿಲಾಫತ್ ಸ್ಥಾಪಿಸುವ ಮೂಲಕ ಖಿಲಾಫತ್‌ನ ಬೆಳಕಿನ ಸಮಯವನ್ನು ಹೆಚ್ಚಿಸುವ ವಾಗ್ದಾನವನ್ನು ನೀಡುತ್ತಾನೆ. ಈ ಲೇಖನವು ಹೇಗಿದೆ ಎಂದರೆ ಹಝ್ರತ್ ಖಲೀಫತುಲ್ ಮಸೀಹ್ ಅಲ್-ಅವ್ವಲ್(ರ) ಹೇಳುತ್ತಿದ್ದರು: ಖಿಲಾಫತ್ ಕೇಸ್ರಿಯ ಅಂಗಡಿಯ ಸೋಡಾ ನೀರು ಅಲ್ಲ ಅದನ್ನ ಯಾರು ಬೇಕಾದರು ಕುಡುಯುವುದಕ್ಕೆ. ಅಂತೆಯೇ ಹೇಳಿದರು, ನೀವು ಆರೋಪಿಸಲು ಬಯಸಿದರೆ, ಖಂಡಿತವಾಗಿಯೂ ದೂಷಿಸಿರಿ, ನೀವು ಖಿಲಾಫತ್ ಅನ್ನು ಅಳಿಸಲು ಸಾಧ್ಯವಿಲ್ಲ, ಅಥವಾ ಅಬೂಬಕರ್ ಅವರನ್ನು ಖಿಲಾಫತ್‌ನಿಂದ ವಂಚಿತಗೊಳಿಸಲಿ ಸಾಧ್ಯವಿಲ್ಲ, ಏಕೆಂದರೆ ಖಿಲಾಫತ್ ಒಂದು ದೈವಿಕ ಪ್ರಕಾಶವಾಗಿದೆ. ಅದು ಅಲ್ಲಾಹನ ಪ್ರಕಾಶದ ಒಂದು ಮೂಲವಾಗಿದೆ, ಅದನ್ನು ಮನುಷ್ಯನು ತನ್ನ ಸ್ವಂತ ಸಾಧನಗಳಿಂದ ಅದನ್ನು ಹೇಗೆ ಅಳಿಸಲು ಸಾಧ್ಯ.

ಅದೇ ರೀತಿಯಲ್ಲಿ ಈ ಖಿಲಾಫತ್‌ನ ಪ್ರಕಾಶವು ಇತರ ಕೆಲವು ಮನೆಗಳಲ್ಲಿ ಕಂಡುಬರುತ್ತದೆ ಮತ್ತು ಯಾವುದೇ ಮನುಷ್ಯನು ತನ್ನ ಪ್ರಯತ್ನಗಳಿಂದ ಮತ್ತು ತನ್ನ ಕುತಂತ್ರದಿಂದ ಈ ಪ್ರಕಾಶದ ಹೊರಹೊಮ್ಮುವಿಕೆಯನ್ನು ತಡೆಯಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. (ಖುತ್ಬಾತೆ ಮಹ್ಮೂದ್, ಸಂಪುಟ-18, ಪುಟ-457)

ಹೇಗಾದರೂ, ಇದು ಖಿಲಾಫತ್‌ನ ಬಗ್ಗೆ ಒಂದು ಲೇಖನವಾಗಿದೆ. ಇದನ್ನು ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ)ರವರ ಖುತ್ಬ ನೀಡಿದ್ದರು. ಇದರಿಂದ ತಿಳಿದು ಬರುವುದೇನೆಂದರೆ ರಸೂಲುಲ್ಲಾಹ್(ಸ) ಅವರ ದೃಷ್ಟಿಯಲ್ಲಿ ಹಝ್ರತ್ ಅಬುಬಕರ್(ರ) ಅವರಿಗೆ ಒಂದು ಉತ್ತುಂಗ ಸ್ಥಾನವಿತ್ತು ಮತ್ತು ನುಬುವ್ವತಿನ ನಂತರ ತಕ್ಷಣವೇ ಖಿಲಾಫತಿನ ಪರಂಪರೆಯು ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಯ ಪ್ರಕಾರ ಜಾರಿಯಲ್ಲಿರಬೇಕಿತ್ತು ಮತ್ತು ಜಾರಿಯಲ್ಲಿತ್ತು ಹಾಗೂ ಅಲ್ಲಾಹನ ವಾಗ್ದಾನದ ಪ್ರಕಾರ ಹಝ್ರತ್ ಮಸೀಹ್ ಮೌಊದ್(ಅ)ರ ಮೂಲಕ ಆ ವ್ಯವಸ್ಥೆ ಪುನಃ ಸ್ಥಾಪನೆಯಾಯಿತು ಎಂಬುದನ್ನು ಈ ಘಟನೆಯ ಮೂಲಕ ಮತ್ತು ಅಲ್ಲಾಹನು ತನ್ನ ಕೃತ್ಯರೂಪದ ಸಾಕ್ಷ್ಯದ ಮೂಲಕ ಸಾಬೀತುಗೊಳಿಸಿದನು.

ಹಝ್ರತ್ ಅಬೂಬಕರ್(ರ)ರ ವಿನಯ ಮತ್ತು ನಮ್ರತೆಯ ಬಗ್ಗೆ ಹಝ್ರತ್ ಸಈದ್ ಬಿನ್ ಮುಸಯ್ಯಬ್(ರ) ವರದಿ ಮಾಡುತ್ತಾರೆ: ಒಂದು ಬಾರಿ ಹಝ್ರತ್ ಪೈಗಂಬರ್(ಸ) ತನ್ನ ಕೆಲವು ಸಹಾಬಿಯರ ಜೊತೆಗೆ ಒಂದು ಸಭೆಯಲ್ಲಿ ಕುಳಿತುಕೊಂಡಿದ್ದರು. ಒಬ್ಬ ವ್ಯಕ್ತಿ ಹಝ್ರತ್ ಅಬೂಬಕರ್(ರ)ರೊಡನೆ ಜಗಳ ಮಾಡಿದನು ಮತ್ತು ಅವರಿಗೆ ಮೂರು ಸಲ ತೊಂದರೆ ಕೊಟ್ಟನು. ಆದರೆ ಅವರು ಸುಮ್ಮನಿದ್ದರು. ಮೂರನೇ ಬಾರಿಯ ನಂತರ ಅವರು ಅದಕ್ಕೆ ಪ್ರತಿಕ್ರಯಿಸಿದರು. ಆಗ ಹಝ್ರತ್ ಪೈಗಂಬರ್(ಸ) ಅಲ್ಲಿಂದ ಎದ್ದು ನಿಂತರು. ಇದರ ಬಗ್ಗೆ ಹಝ್ರತ್ ಅಬೂಬಕರ್(ರ) ಕೇಳಿದಾಗ, ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮ್ಮ ಕುರಿತು ಆ ವ್ಯಕ್ತಿ ಹೇಳುತ್ತಿದ್ದ ಮಾತನ್ನು ಆಕಾಶದಿಂದ ದೇವದೂತ ಇಳಿದುಕೊಂಡು ನಿರಾಕರಿಸುತ್ತಿದ್ದರು. ಆದರೆ ನೀವು ಪ್ರತಿಕ್ರಯಿಸಲು ತೊಡಗಿದಾಗ ಶೈತಾನನು ಬಂದನು. ಶೈತಾನನು ಬಂದ ಸಭೆಯಲ್ಲಿ ನಾನು ಕುಳಿತುಕೊಳ್ಳುವುದಿಲ್ಲ. (ಸುನನ್ ಅಬೀ ದಾವೂದ್, ಕಿತಾಬುಲ್ ಅದಬ್, ಹದೀಸ್-4896)

ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಬೂಬಕರ್, ಮೂರು ಸಂಗತಿಗಳಿವೆ. ಅವೆಲ್ಲವೂ ಸತ್ಯ ಸಂಗತಿಗಳಾಗಿವೆ. ಒಂದು, ಯಾವನ ಮೇಲಾದರೂ ದೌರ್ಜನ್ಯ ಮಾಡಲಾಗುವಾಗ, ಅವನು ಆದರಣೀಯನಾದ ಅಲ್ಲಾಹನ ಸಲುವಾಗಿ ಅದನ್ನು ಕಡೆಗಣಿಸಿದರೆ, ಅಲ್ಲಾಹನು ತನ್ನ ಸಹಾಯದಿಂದ ಅವನನ್ನು ಆದರಣೀಯಗೊಳಿಸುವನು. ಎರಡು, ಒಬ್ಬನು ತನ್ನ ಸಂಪತ್ತಿನಿಂದ ದಾನವನ್ನು ಮಾಡಿಕೊಂಡು, ರಕ್ತಸಂಬಂಧವನ್ನು ಸುದೃಢಗೊಳಿಸಿದರೆ, ಅಲ್ಲಾಹನು ಅದರ ಕಾರಣದಿಂದ ಅವನ ಸಂಪತ್ತನ್ನು ವರ್ಧಿಸುವನು. ಮೂರು, ಒಬ್ಬ ವ್ಯಕ್ತಿ ಸಂಪತ್ತನ್ನು ವರ್ಧಿಸಲು ಭಿಕ್ಷೆ ಬೇಡುವುದಾದರೆ, ಅಲ್ಲಾಹನು ಅವನ ಸಂಪತ್ತನ್ನು ಕಡಿಮೆಗೊಳಿಸುವನು. (ಮಜ್‌ಮಉಝ್ವಾ ಎದ್, ಸಂಪುಟ-8, ಪುಟ-247, ಹದೀಸ್-13698, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಅಬೂಬಕರ್(ರ)ರ ಗುಣವೈಶಿಷ್ಟ್ಯಗಳನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ಪರಿಪೂರ್ಣವಾದ ಜ್ಞಾನವನ್ನು ಹೊಂದಿದ್ದ, ಅಲ್ಲಾಹನ ಬಗ್ಗೆ ಪರಿಜ್ಞಾನವಿದ್ದ, ಬಹಳ ತಾಳ್ಮೆಯಿದ್ದ ಮತ್ತು ಅತ್ಯಂತ ದಯಾಳು ಸ್ವಭಾವವನ್ನು ಹೊಂದಿದ್ದ ವ್ಯಕ್ತಿಯಾಗಿದ್ದರು. ವಿನಯ ಮತ್ತು ನಮ್ರತೆಯಿಂದ ಜೀವನವನ್ನು ಸಾಗಿಸುತ್ತಿದ್ದರು. ಬಹಳವಾಗಿ ಕ್ಷಮಿಸುವವರೂ ಇತರರ ತಪ್ಪುಗಳನ್ನು ಕಡೆಗಣಿಸುವವರೂ ಹಾಗೂ ವಾತ್ಸಲ್ಯ ಮತ್ತು ಕೃಪೆಯ ಸ್ವರೂಪವಾಗಿದ್ದರು. ತನ್ನ ಹಣೆಯ ಪ್ರಕಾಶದಿಂದ ವಿಶಿಷ್ಟಗೊಂಡಿದ್ದರು (ಗುರುತಿಸಲ್ಪಡುತ್ತಿದ್ದರು). ಅವರ ಆತ್ಮವು ಸೃಷ್ಟಿಗಳಲ್ಲಿ ಶ್ರೇಷ್ಠರಾದ ಹಝ್ರತ್ ಪೈಗಂಬರ್(ಸ)ರ ಆತ್ಮದೊಂದಿಗೆ ಸೇರಿಕೊಂಡಿತ್ತು. ಪವಿತ್ರ ಖುರ್‌ಆನಿನ ಜ್ಞಾನ ಮತ್ತು ಪ್ರವಾದಿಗಳ ನೇತಾರ ಹಾಗೂ ಮನುಕುಲದ ಹೆಮ್ಮೆಯು ಆದ ಹಝ್ರತ್ ಪೈಗಂಬರ್(ಸ)ರನ್ನು ಪ್ರೀತಿಸುವುದರಲ್ಲಿ ಅವರು ಎಲ್ಲರಿಗಿಂತ ಮಿಗಿಲಾಗಿದ್ದರು. ಅವರು ಸತ್ಯವಂತನೂ ಏಕನೂ ಆದ ದೇವನ ಬಣ್ಣವನ್ನು ತನ್ನದಾಗಿಸಿದ್ದರು. ಸತ್ಯಸಂಧತೆ ಎಂಬುದು ಅವರೊಳಗೆ ಹುದುಗಿದ್ದ ಮತ್ತು ಸಹಜವಾಗಿದ್ದ ವೈಶಿಷ್ಟ್ಯವಾಗಿತ್ತು. ಇದೇ ಸತ್ಯಸಂಧತೆಯ ಪ್ರಭಾವ ಮತ್ತು ಪ್ರಕಾಶವು ಅವರ ಪ್ರತಿಯೊಂದು ಮಾತು ಮತ್ತು ಕೃತ್ಯದಲ್ಲಿ ಪ್ರಕಟವಾಗಿತ್ತು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ)ರ ವಿಶೇಷತೆಗಳನ್ನು ಮತ್ತು ಸ್ಥಾನಮಾನಗಳನ್ನು ಆದರಣೀಯನಾದ ಅಲ್ಲಾಹನು ನನಗೆ ತಿಳಿಸಿರುವನು.

ಹಝ್ರತ್ ಅಬೂಬಕರ್(ರ)ರ ಜೀವನವೇ ಪ್ರಭುಗಳ ಪ್ರಭುವಾದ ಅಲ್ಲಾಹನ ಮೇಲೆ ಭರವಸೆ ಇರಿಸುವುದು ಮತ್ತು ಸಾಧನ ಸಾಮಗ್ರಿಗಳ ಕಡೆಗೆ ಕಡಿಮೆ ಗಮನ ಹರಿಸುವುದಾಗಿತ್ತು. ಅವರು ತನ್ನ ಶಿಷ್ಟಾಚಾರಗಳಲ್ಲಿ ನಮ್ಮ ಪ್ರವಾದಿ ಮತ್ತು ನೇತಾರರಾದ ಹಝ್ರತ್ ಪೈಗಂಬರ್(ಸ)ರಿಗೆ ನೆರಳಿನಂತೆ ಆಗಿದ್ದರು. ಸೃಷ್ಟಿಗಳಲ್ಲಿ ಶ್ರೇಷ್ಠರಾದ ಪೈಗಂಬರ್(ಸ)ರೊಂದಿಗೆ ಅವರಿಗೆ ಅನಂತವಾದ ಸಂಬಂಧವಿತ್ತು. ಇದೇ ಕಾರಣದಿಂದ ಇತರರಿಗೆ ದೀರ್ಘಕಾಲಾವಧಿಯಲ್ಲಿ ಮತ್ತು ದೂರದ ಭೂಖಂಡಗಳಲ್ಲಿ ಲಭಿಸದ್ದು ಹಝ್ರತ್ ಅಬೂಬಕರ್(ರ)ರಿಗೆ ಹಝ್ರತ್ ಪೈಗಂಬರ್(ಸ)ರ ಅನುಗ್ರಹದಿಂದ ಕ್ಷಣ ಮಾತ್ರದಲ್ಲಿ ಲಭಿಸಿತ್ತು. (ಸಿರ್ರುಲ್ ಖಿಲಾಫ, ಉರ್ದು ಅನುವಾದ ಪ್ರಕಟಿತ ನಝಾರತ್ ಇಶಾಅತ್ ರಬ್ವಾಹ್, ಪುಟ–101–103)

ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಅಲಿ ಬಿನ್ ಅಬೂತಾಲಿಬ್(ರ) ವರದಿ ಮಾಡುತ್ತಾರೆ: ಪ್ರತಿ ಪ್ರವಾದಿಗೆ ಕುಲೀನರಾದ ಏಳು ಸ್ನೇಹಿತರನ್ನು ನೀಡಲಾಗಿತ್ತು ಮತ್ತು ನನಗೆ ಹದಿನಾಲ್ಕು ಕುಲೀನ ಸ್ನೇಹಿತರನ್ನು ನೀಡಲಾಗಿದೆ. ಅದಕ್ಕೆ ನಾವು ಅವರು ಯಾರು ಯಾರು? ಎಂದು ಪ್ರಶ್ನಿಸಿದೆವು, ಅದಕ್ಕೆ ಅವರು ಉತ್ತರಿಸಿದರು ನಾನು ಮತ್ತು ನನ್ನ ಇಬ್ಬರೂ ಪುತ್ರರೂ ಮತ್ತು ಹಝ್ರತ್ ಜಅ್ಫರ್(ರ), ಹಝ್ರತ್ ಹಮ್ಜಾ(ರ), ಹಝ್ರತ್ ಅಬೂಬಕರ್(ರ), ಹಝ್ರತ್ ಮಸ್ಅಬ್ ಬಿನ್ ಉಮೈರ್(ರ), ಹಝ್ರತ್ ಬಿಲಾಲ್(ರ), ಹಝ್ರತ್ ಸಲ್ಮಾನ್(ರ), ಹಝ್ರತ್ ಅಮ್ಮಾರ್(ರ), ಹಝ್ರತ್ ಮಿಖ್ದಾದ್(ರ) , ಹಝ್ರತ್ ಹುಧೈಫ(ರ) ಮತ್ತು ಹಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್(ರ) ಆಗಿದ್ದರು.

(ಸುನನ್ ಅತ್ತಿರ್‌ಮಿಝಿ, ಕತಾಬುಲ್ ಮನಾಖಿಬ್, ಹದೀಸ್–3785)

ಮುಶ್ರಿಕರು ಇತರರ ಜೊತೆಗೆ ಸೇರಿಕೊಂಡು ಹಜ್ಜ್ ಮಾಡುತ್ತಾರೆ ಮತ್ತು ಶಿರ್ಕಿನ ಪದಗಳನ್ನು ನುಡಿಯುತ್ತಾರೆ ಹಾಗೂ ನಗ್ನರಾಗಿ ಕಅ್ಬ ಭವನದ ಸುತ್ತು ಹಾಕುತ್ತಾರೆ ಎಂಬ ಸುದ್ದಿ ತಬೂಕಿನಿಂದ ಮರಳುವಾಗ ಹಝ್ರತ್ ಪೈಗಂಬರ್(ಸ)ರಿಗೆ ಮುಟ್ಟಿದಾಗ ಆ ವರ್ಷ ಹಜ್ಜ್ ಕರ್ಮಾನುಷ್ಠಾನವನ್ನು ಮಾಡುವ ಇರಾದೆಯನ್ನು ಅವರು ತ್ಯಜಿಸಿದರು. ಹಿಜರೀ 9ರಲ್ಲಿ ಹಝ್ರತ್ ಅಬೂಬಕರ್(ರ)ರನ್ನು ಹಝ್ರತ್ ಪೈಗಂಬರ್(ಸ) ಹಜ್ಜಿನ ಅಮೀರನ್ನಾಗಿ ಮಾಡಿಕೊಂಡು ಮಕ್ಕಾಗೆ ಕಳುಹಿಸಿದ್ದರು. (ಅರ್‌ರೌಝುಲ್ ಉನ್ಫ್, ಸಂಪುಟ–4, ಪುಟ–318, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಉಮ್ದತುಲ್ ಖಾರಿ, ಶರಹ್ ಸಹೀಹ್ ಬುಖಾರಿ, ಸಂಪುಟ–9, ಪುಟ–384, ಹದೀಸ್–1622, ಕಿತಾಬುಲ್ ಹಜ್ಜ್, ದಾರ್ ಅಹ್ಯಾಉತ್ತುರಾಸುಲ್ ಅರಬಿ 2003)

300 ಸಂಗಡಿಗರ ಜೊತೆಗೆ ಹಝ್ರತ್ ಅಬೂಬಕರ್(ರ) ಮಕ್ಕಾಗೆ ಹೋದರು. ಖುರ್ಬಾನಿಯ 20 ಜಾನುವಾರುಗಳನ್ನು ಅವರ ಜೊತೆಗೆ ಹಝ್ರತ್ ಪೈಗಂಬರ್(ಸ) ಕಳುಹಿಸಿದರು. ಅವುಗಳ ಕುತ್ತಿಗೆಗಳಲ್ಲಿ ಹಝ್ರತ್ ಪೈಗಂಬರ್(ಸ) ಸ್ವತಃ ತನ್ನ ಕೈಯಿಂದ ಕುರ್ಬಾನಿಯ ಗುರುತಾಗಿ ಕೊರಳಪಟ್ಟಿಗಳನ್ನು ಕಟ್ಟಿದರು ಮತ್ತು ಗುರುತು ಹಾಕಿದರು. ಹಝ್ರತ್ ಅಬೂಬಕರ್(ರ) ಸ್ವತಃ ತನ್ನ ಜೊತೆಗೆ ಕುರ್ಬಾನಿಯ 5 ಜಾನುವಾರುಗಳನ್ನು ತೆಗೆದುಕೊಂಡು ಹೋಗಿದ್ದರು. (ಅಸ್ಸೀರತುಲ್ ಹಲಬೀಯ, ಸಂಪುಟ–3, ಪುಟ–295, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲಡಬನಾನ್)

ಒಂದು ವರದಿಯ ಪ್ರಕಾರ, ಹಝ್ರತ್ ಅಲಿ(ರ) ಅವರು ಈ ಹಜ್ಜ್ ಸಂದರ್ಭದಲ್ಲಿ ಸೂರಾ ತೌಬಾದ ಆರಂಭಿಕ ಆಯತ್‌ಗಳನ್ನು ಘೋಷಿಸಿದರು. ಇದರ ವಿವರಗಳನ್ನು ಹಝ್ರತ್ ಅಲಿ(ರ) ಅವರ ಪ್ರಸ್ತಾವನೆಯಲ್ಲಿ ಮತ್ತು ನಂತರ ಹಝ್ರತ್ ಅಬೂಬಕರ್(ರ) ಅವರ ಪ್ರಸ್ತಾವನೆಯ ಪ್ರಾರಂಭದಲ್ಲಿ ಒಮ್ಮೆ ಖುತ್ಬದಲ್ಲಿ ವಿವರಿಸಿದ್ದೇನೆ. ಏನೇ ಇರಲಿ, ನಾನು ಇಲ್ಲಿ ಸಂಕ್ಷಿಪ್ತವಾಗಿ ಹೇಳುತ್ತೇನೆ, ಸೂರಾ ಬರಾತ್ ಅಂದರೆ ಸೂರಾ ತೌಬಾ ರಸೂಲುಲ್ಲಾಹ್(ಸ) ರವರ ಮೇಲೆ ಅವತೀರ್ಣಗೊಂಡಾಗ, ಅವರು ಹಝ್ರತ್ ಅಬುಬಕರ್(ರ) ಅವರನ್ನು ಹಜ್‌ನ ಅಮೀರ್ ಆಗಿ ಕಳುಹಿಸಿದ್ದರು. ರಸೂಲುಲ್ಲಾಹ್(ಸ) ಅವರಲ್ಲಿ ಕೇಳಲಾಯಿತು, ಯಾ ರಸೂಲಲ್ಲಾಹ್!! ನೀವು ಈ ಸೂರಾವನ್ನು ಹಝ್ರತ್ ಅಬೂಬಕರ್(ರ) ಅವರಿಗೆ ಅಲ್ಲಿ ಪಠಿಸಲು ಕಳುಹಿಸಿದರೆ, ಆಗ ರಸೂಲುಲ್ಲಾಹ್(ಸ) ರವರು ಹೇಳಿದರು ನನ್ನ ಪರವಾಗಿ ನನ್ನ ಅಹ್ಲ್ ಅಲ್–ಬೈತ್‌ನ ಒಬ್ಬ ವ್ಯಕ್ತಿಯನ್ನು ಹೊರತುಪಡಿಸಿ ಯಾರೂ ಈ ಕರ್ತವ್ಯವನ್ನು ನಿರ್ವಹಿಸಲು ಸಾಧ್ಯವಿಲ್ಲ. ತದನಂತರ ರಸೂಲುಲ್ಲಾಹ್(ಸ)ರವರು ಹಝ್ರತ್ ಅಲಿ(ರ) ಅವರನ್ನು ಕರೆದು ಅವರಿಗೆ ಹೇಳಿದರು, ಸೂರಾ ತೌಬಾದ ಆರಂಭದಲ್ಲಿ ಉಲ್ಲೇಖಿಸಲಾದ ವಿಷಯವನ್ನು ತೆಗೆದುಕೊಂಡು ಹೋಗಿ ಮತ್ತು ತ್ಯಾಗದ ದಿನದಂದು ಜನರು ಮಿನಾದಲ್ಲಿ ಒಟ್ಟುಗೂಡಿದಾಗ, ಈ ವರ್ಷದ ನಂತರ ಯಾವುದೇ ಅವಿಶ್ವಾಸಿಗಳು ಸ್ವರ್ಗವನ್ನು ಪ್ರವೇಶಿಸುವುದಿಲ್ಲ ಮತ್ತು ಈ ವರ್ಷದ ನಂತರ ಯಾವ ಬಹುದೇವಾರಾಧಕರಿಗೆ ಹಜ್ಜ್ ಮಾಡಲು ಅನುಮತಿ ನೀಡಲಾಗುವುದಿಲ್ಲ ಮತ್ತು ಬೈತುಲ್ಲಾಹ್‌ದಲ್ಲಿ ಬೆತ್ತಲೆಯಾಗಿ ಸುತ್ತಲು ಯಾರಿಗೂ ಅನುಮತಿಸಲಾಗುವುದಿಲ್ಲ ಮತ್ತು ರಸೂಲುಲ್ಲಾಹ್(ಸ) ಅವರೊಂದಿಗೆ ಒಪ್ಪಂದ ಮಾಡಿಕೊಂಡರೂ ಅದರ ಅವಧಯನ್ನು ಪೂರೈಸುತ್ತಾರೆ ಎಂದು ಘೋಷಿಸಿ ಎಂದು ಹೇಳಿದರು.

ಹಝ್ರತ್ ಅಲಿ(ರ) ಈ ಆದೇಶದೊಂದಿಗೆ ನಿರ್ಗಮಿಸಿದರು. ದಾರಿಯಲ್ಲಿ ಹಝ್ರತ್ ಅಬೂಬಕರ್(ರ) ಅವರನ್ನು ಭೇಟಿಯಾದರು. ಹಝ್ರತ್ ಅಬುಬಕರ್(ರ) ರವರು ಹಝ್ರತ್ ಅಲಿ(ರ) ರವರನ್ನು ದಾರಿಯಲ್ಲಿ ನೋಡಿದಾಗ ಅಥವಾ ಭೇಟಿಯಾದಾಗ, ಹಝ್ರತ್ ಅಬುಬಕರ್(ರ) ರವರು ಹಝ್ರತ್ ಅಲಿ(ರ) ರವರಿಗೆ ನಿಮ್ಮನ್ನು ಅಮೀರ್ ಆಗಿ ನೇಮಿಸಲಾಗಿದೆಯೇ ಅಥವಾ ನೀವು ನನ್ನ ಅಧೀನದಲ್ಲಿ ಇರುತ್ತೀರಾ? ಎಂದು ಕೇಳಿದರು. ನಿಮ್ಮ ಅಧೀನದಲ್ಲಿ ಎಂದು ಹಝ್ರತ್ ಅಲಿ(ರ) ಹೇಳಿದರು. ತದನಂತರ ಅವರಿಬ್ಬರೂ ಹೊರಟರು. ನಾನು ನಿಮಗೆ ಅಧೀನನಾಗಿರುತ್ತೇನೆ, ಆದರೆ ಈ ಆಯತ್‌ಗಳು ಏನೆಂದು ನಾನು ಪಠಿಸುತ್ತೇನೆ. ಆದಾಗ್ಯೂ, ಹಝ್ರತ್ ಅಬೂಬಕರ್(ರ) ಅವರು ಹಜ್ಜ್ ವಿಷಯಗಳ ಬಗ್ಗೆ ಜನರನ್ನು ಮೇಲ್ವಿಚಾರಣೆ ಮಾಡಿದರು ಮತ್ತು ಈ ವರ್ಷ ಅರಬ್ಬರು ಜಾಹಿಲಿಯಾತ್ ಸಮಯದಲ್ಲಿ ಅವರು ತಂಗಿದ ಸ್ಥಳಗಳಲ್ಲಿಯೇ ತಂಗಿದ್ದರು. ತ್ಯಾಗದ ದಿನ ಬಂದಾಗ, ಹಝ್ರತ್ ಅಲಿ(ರ) ಎದ್ದುನಿಂತು ರಸೂಲುಲ್ಲಾಹ್(ಸ) ಅವರು ಹೇಳಿದ್ದನ್ನು ಜನರಿಗೆ ಘೋಷಿಸಿದರು. ಅದರ ಬಗ್ಗೆ ನಾನು ಈಗಾಗಲೇ ವಿವರವಾಗಿ ವಿವರಿಸಿದ್ದೇನೆ. (ಅಸ್ಸೀರತುನ್ನಬವೀಯು ಲಿಇಬ್ನೆ ಹಿಶ್ಶಾಮ್, ಪುಟ–832, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2001)

ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪ ಮುಂದುವರೆಯುವುದು.

ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು. ಮೊದನೆಯದಾಗಿ ಯು.ಕೆ.ಯಲ್ಲಿ ರಖೀಂ ಪ್ರೆಸ್ಸಿನಲ್ಲಿದ್ದ ಜಮಾಅತಿನ ಮುಬಲ್ಲಿಗ್‌ರಾದ ಸನ್ಮಾನ್ಯ ಮುಹಮ್ಮದ್ ದಾವೂದ್ ಝುಫರ್ ಸಾಹಿಬ್‌ರದ್ದಾಗಿದೆ. ಅವರು ಚೌಧರಿ ಮುಹಮ್ಮದ್ ಯೂಸುಫ್ ಸಾಹಿಬ್‌ರ ಪುತ್ರರಾಗಿದ್ದರು. ನವೆಂಬರ್ 16ರಂದು ಅವರ ನಿಧನವಾಯಿತು. ಅವರಿಗೆ 48 ವರ್ಷ ಪ್ರಾಯವಿತ್ತು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರದ್ದು ಜನಾಝ ಹಾಝಿರ್ ಆಗಿದೆ. ಜುಮಾ ನಮಾಝಿನ ನಂತರ ನಾನು ಜನಾಝ ಕೂಡ ನಿರ್ವಹಿಸುವೆನು.

1998ರಲ್ಲಿ ಜಾಮಿಅ ಅಹ್ಮದಿಯಾ ರಬ್ವದಿಂದ ಶಾಹಿದ್ ಕೋರ್ಸ್ ಪೂರ್ತಿ ಮಾಡಿದ್ದರು. ಅನಂತರ ಮುರಬ್ಬಿಯಾಗಿ ವಿವಿಧ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದರು. 2001ರಲ್ಲಿ ಇಂಗ್ಲಂಡಿಗೆ ಬಂದರು. ಇಲ್ಲಿ ರಖೀಂ ಪ್ರೆಸಿನಲ್ಲಿ ಇಸ್ಲಾಮಾಬಾದಿನಲ್ಲಿ ಅವರನ್ನು ನೇಮಿಸಲಾಗಿತ್ತು. ಬಹಳ ಆಸಕ್ತಿಯಿಂದ ಸೇವೆ ಮಾಡುತ್ತಿದ್ದರು. ಖಿಲಾಫತಿನೊಂದಿಗೆ ಆಳವಾದ ವಿಶ್ವಾಸದ ಸಂಬಂಧವನ್ನು ಹೊಂದಿದ್ದರು. ಇಸ್ಲಾಮಾಬಾದಿನಲ್ಲಿ ಇರುವಾಗ ಕೆಲವು ಕಾಲ ಜಮಾಅತಿನ ಸದರ್ ಆಗಿಯೂ ಇದ್ದರು. ಉಮ್ರಾ ಮಾಡುವ ಸೌಭಾಗ್ಯವನ್ನು ಕೂಡ ಪಡೆದಿದ್ದರು. ದಿವಂಗತರು ಮೂಸಿಯೂ ಆಗಿದ್ದರು. ದಿವಂಗತರು ತಂದೆತಾಯಂದಿರು ಮತ್ತು ಪತ್ನಿಯನ್ನಲ್ಲದೇ ಮೂರು ಪುತ್ರರನ್ನು ಮತ್ತು ಪುತ್ರಿಯೊಬ್ಬಳನ್ನು ಅಗಲಿರುವರು.

ಅವರ ತಂದೆಯಾದ ಚೌಧರಿ ಯೂಸುಫ್ ಸಾಹಿಬ್ ಹೇಳುತ್ತಾರೆ: ಮುರಬ್ಬಿಯಾಗಲು ನಾನು ದಾವೂದ್‌ನನ್ನು ಹುರಿದುಂಬಿಸಿದಾಗ ಮಗನು ನನ್ನ ಬಯಕೆಯನ್ನು ಪೂರ್ತಿಯಾಗಿ ಅನುರಿಸಿದರು. ಮುರಬ್ಬಿಯಾಗುವುದಕ್ಕೆ ಬದಲಾಗಿ ಬೇರೆ ಏನಾದರೂ ಆಗಲು ಪ್ರಯತ್ನಿಸಿದರೆ ಅವನಿಗೆ ಉತ್ತಮ ನೌಕರಿ ಸಿಗಬಹುದು ಮತ್ತು ತನ್ನ ಮನೆಯ ಸ್ಥಿತಿಯನ್ನು ಉತ್ತಮಗೊಳಿಸಬಹುದು ಎಂದು ಕೆಲವರು ಹೇಳಿದ್ದರು. ಆದರೆ ಮಗನು ಅವರ ಸಲಹೆಗಳನ್ನು ಪೂರ್ಣವಾಗಿಯೂ ನಿರಾಕರಿಸಿದರು. ಜಾಮಿಅದಿಂದ ಮುರಬ್ಬಿಯಾಗಿ ತನ್ನ ಮರಣದ ತನಕ ಪರಿಪೂರ್ಣ ನಿಷ್ಠೆಯಿಂದ ವಖ್ಫ್‌ನ್ನು ನಿಭಾಯಿಸಿದರು. ಬಹಳ ವಿಧೇಯನಾದ ಪುತ್ರನಾಗಿದ್ದನು. ನನ್ನ ಪ್ರತಿಯೊಂದು ಮಾತನ್ನು ಅನುಸರಿಸುತ್ತಿದ್ದನು. ಎಂದೂ ನಿರಾಕರಿಸುತ್ತಿರಲಿಲ್ಲ. ನನಗೆ ಸದಾ ನೆಮ್ಮದಿ ನೀಡಲು ಪ್ರಯತ್ನಿಸುತ್ತಿದ್ದನು. ಸಾಂಪತ್ತಿಕ ಕಷ್ಟತೆಗಳಿದ್ದರೂ ಎಂದಿಗೂ ತನ್ನ ವಖ್ಫನ್ನು ಉಪೇಕ್ಷಿಸುವ ಬಗ್ಗೆ ಯೋಚಿಸಲಿಲ್ಲ. ಜಾಮಿಅ ಅಹ್ಮದಿಯದಲ್ಲಿ ಕಲಿಯುವಾಗ ಸಾಂಪತ್ತಿಕ ಕಷ್ಟತೆಯ ಕಾರಣದಿಂದ ಸೈಕಲ್ ಪಂಕ್ಚರ್ ಆದರೆ, ಅದನ್ನು ಸರಿಪಡಿಸಲು ಕೆಲವೊಮ್ಮೆ ಹಣವಿರುತ್ತಿರಲಿಲ್ಲ. ಮನೆಯಿಂದ ಸೈಕಲಲ್ಲಿ ಗಾಳಿ ತುಂಬಿಸಿ ಜಾಮಿಅಗೆ ಹೋಗುತ್ತಿದ್ದನು. ಮರಳುವಾಗಲೂ ಹೀಗೆಯೇ ಮಾಡುತ್ತಿದ್ದನು. ಎಂದಿಗೂ ದೂರುತ್ತಿರಲಿಲ್ಲ. ಖಿಲಾಫತಿಗೆ ವಿಧೇಯ ಮತ್ತು ಖಲೀಫರ ಇಚ್ಛೆಯನ್ನು ಅರಿಯುವ ಮುಬಲ್ಲಿಗ್ ಆಗಿದ್ದರು.

ಅವರ ಪತ್ನಿಯಾದ ಮುಬಾರಕ ಸಾಹಿಬ ಹೇಳುತ್ತಾರೆ: 22 ವರ್ಷಗಳ ಕಾಲ ನಾವು ಜೊತೆಯಾಗಿದ್ದೆವು. ಬಹಳ ಸೌಮ್ಯಹೃದಯಿ, ಪರಿಶ್ರಮಿ, ಅಲ್ಲಾಹನ ಮೇಲೆ ಅಪಾರವಾದ ಭರವಸೆ ಹೊಂದಿದ್ದ ಮತ್ತು ಪ್ರತಿಯೊಬ್ಬರ ಬಹಳ ಸೇವೆ ಮಾಡುವ ವ್ಯಕ್ತಿಯಾಗಿದ್ದರು. ಅಸಾಧ್ಯವೆಂದು ತೋರುವ ಅನೇಕ ಸಂದರ್ಭಗಳು ಜೀವಿತದಲ್ಲಿ ಬರುವಾಗ ಅವರು ಹೀಗೆ ಹೇಳುತ್ತಿದ್ದರು: ಅಲ್ಲಾಹನ ಮೇಲೆ ಭರವಸೆಯಿಡು. ಎಲ್ಲವೂ ಸರಿಯಾಗುವುದು. ಅಲ್ಲಾಹನ ಕೃಪೆಯಿಂದ ಅನಂತರ ಹಾಗೆಯೇ ಆಗುತ್ತಿತ್ತು. ಉತ್ತಮ ಮನುಷ್ಯನಾಗಲು, ಯಾರಿಗೂ ತೊಂದರೆ ಕೊಡದಿರಲು ಸದಾ ಮಕ್ಕಳಿಗೆ ಉಪದೇಶಿಸಿದ್ದರು. ವಖ್ಫನ್ನು ಸರಿಯಾಗಿ ನಿಭಾಯಿಸಲು ಸಾಧ್ಯವಾಗಲು ಅಲ್ಲಾಹನು ಸೌಭಾಗ್ಯ ನೀಡುವಂತೆ ದುಆ ಮಾಡಲು ಹೇಳುತ್ತಿದ್ದರು. ಇದಾಗಿತ್ತು ಅವರ ಬಯಕೆ.

ಅವರ ಹಿರಿಯ ಮಗಳಾದ ದರ್ಮಾನ ಸಾಹಿಬ ಹೇಳುತ್ತಾಳೆ: ನಾವು ಉತ್ತಮ ಅಹ್ಮದಿ ಮುಸ್ಲಿಮರಾಗಲು ಮತ್ತು ಆಸುಪಾಸಿನ ಜನರ ಕಾಳಜಿವಹಿಸಲು ಹಾಗೂ ಅವರಿಗೆ ನಮ್ಮ ಕಾರಣದಿಂದ ಯಾವುದೇ ತೊಂದರೆ ಉಂಟಾಗದಂತೆ ನೋಡಲು ಮಾತ್ರ ನನ್ನ ತಂದೆ ಹೇಳುತ್ತಿದ್ದರು.

ಹಿರಿಯ ಮಗನಾದ ರೋಹಾನ್ ಹೇಳುತ್ತಾನೆ: ನನ್ನ ತಂದೆಗೆ ನಮ್ಮ ಆಧ್ಯಾತ್ಮಿಕ ತರಬೇತಿಯ ಬಹಳ ಚಿಂತೆಯಿರುತ್ತಿತ್ತು. ನಾವು ಏನಾದರೂ ಪ್ರಶ್ನೆಯನ್ನು ಕೇಳಿದರೆ ಅವರು ಮುರಬ್ಬಿಯಾದ ಕಾರಣದಿಂದ ಪವಿತ್ರ ಖುರ್‌ಆನಿನ ಅಧ್ಯಾಪನೆಗಳ ಬೆಳಕಿನಲ್ಲಿ ಮತ್ತು ಧಾರ್ಮಿಕ ಮಗ್ಗುಲಲ್ಲಿ ಅದಕ್ಕೆ ಉತ್ತರ ನೀಡಲು ಪ್ರಯತ್ನಿಸುತ್ತಿದ್ದರು. ಅವರ 15 ವರ್ಷ ಪ್ರಾಯದ ಅವರ ಕಿರಿಯ ಮಗನಾದ ಫುವಾದ್ ದಾವೂದ್ ಹೇಳುತ್ತಾನೆ: ಕೊನೆಯ ದಿನಗಳಲ್ಲಿ ಅವರಿಗೆ ಉಂಟಾದ ಕ್ಯಾನ್ಸರ್ ಬಹಳ ತೀವ್ರಗೊಂಡಿತ್ತು. ನೀನೊಂದು ಸುಂದರವಾದ ಜೀವಿತವನ್ನು ಜೀವಿಸುವುದಾಗಿ ಕಾಣಲು ನಾನು ಬಯಸುತ್ತಿದ್ದೆ. ಆದರೆ ಅಲ್ಲಾಹನ ಇಂಗಿತ ಬೇರೆಯಾಗಿದೆ. ನಾನು ಅಲ್ಲಾಹನ ಇಚ್ಛೆಯಲ್ಲಿ ತೃಪ್ತನಾಗಿರುವೆನು. ಹೇಗಿದ್ದರೂ ಒಳಿತನ್ನು ಮಾಡಲು, ಜಮಾಅತಿನೊಂದಿಗೆ ಸಂಬಂಧವಿರಿಸಲು ಮತ್ತು ಖಿಲಾಫತಿನೊಂದಿಗೆ ಸಂಬಂಧವಿರಿಸಲು ಅವರು ಮಕ್ಕಳನ್ನು ಯಾವಾಗಲೂ

ಉಪದೇಶಿಸುತ್ತಿದ್ದರು. ಅಲ್ಲಾಹನು ಮಕ್ಕಳಿಗೆ ಆ ಉಪದೇಶಗಳನ್ನು ಪಾಲಿಸಲು ಸೌಭಾಗ್ಯ ನೀಡಲಿ. ಅವರಿಗಾಗಿ ಮಾಡಿದ ದುಆಗಳನ್ನು ಸ್ವೀಕಾರ ಮಾಡಲಿ.

ಬಹಳ ಹಸನ್ಮುಖರಾಗಿದ್ದರು ಮತ್ತು ಹೃದಯಗಳನ್ನು ಸೆಳೆಯುವ ಸ್ನೇಹಮತಿ ವ್ಯಕ್ತಿಯಾಗಿದ್ದರು ಹಾಗೂ ಕಂಪ್ಯೂಟರ್, ಆರ್ಟ್ ವರ್ಕ್‌ನಲ್ಲಿ ನುರಿತರಾಗಿದ್ದರು ಎಂದು ಅವರ ಪರಿಚಿತರಾದ ಎಲ್ಲರೂ ಅವರ ಬಗ್ಗೆ ಹೇಳಿರುವರು. ಮುರಬ್ಬಿಯಾಗಿದ್ದರು. ಆದರೆ ಟೆಕ್ನಿಕಲ್ ಕೆಲಸಗಳಲ್ಲಿ ಮತ್ತು ಎಡಿಟಿಂಗ್ ಇತ್ಯಾದಿಗಳಲ್ಲೂ ಪರಿಣಿತರಾಗಿದ್ದರು. ರಖೀಂ ಪ್ರೆಸಿನಲ್ಲಿ ಅವರು ಬಹಳ ಕೆಲಸ ಮಾಡಿದ್ದರು. ತನ್ನ ಕೌಶಲವನ್ನು ಉಪಯೋಗಿಸಲು ಅವರಿಗೆ ಉತ್ತಮ ಸಂದರ್ಭ ಲಭಿಸಿತ್ತು. ಜಮಾಅತಿನ ಸೇವೆಯನ್ನು ಸದಾ ಅಲ್ಲಾಹನ ಅನುಗ್ರಹ ಮತ್ತು ತನ್ನ ಸೌಭಾಗ್ಯವೆಂದು ಭಾವಿಸುತ್ತಿದ್ದರು.

ಒಬ್ಬ ಸಂಬಂಧಿಕ ಹೀಗೆಯೂ ಬರೆದಿರುವರು: ಇತರರಿಗೆ ಬಹಳ ರಹಸ್ಯವಾಗಿ ಸಹಾಯ ಮಾಡುತ್ತಿದ್ದರು. ರಹಸ್ಯವಾಗಿ ನಿರ್ಗತಿಕರಿಗೆ, ಸಂಬಂಧಿಕರಿಗೆ ಸಾಂಪತ್ತಿಕ ಸಹಾಯವನ್ನು ಮಾಡುತ್ತಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಅವರ ತಂದೆತಾಯಂದಿರಿಗೂ ಸಹನೆ ಮತ್ತು ಧೈರ್ಯವನ್ನು ನೀಡಲಿ. ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಎರಡನೆಯ ಜನಾಝ಼ ಗ಼ಾಯಿಬ್ ಸ್ಪೇನಿನ ಮುಬಲ್ಲಿಗ್ ಆಗಿದ್ದ ಮೌಲಾನ ಕರಂ ಇಲಾಹಿ ಝ಼ಫರ್ ಸಾಹಿಬ್‌ರ ಪತ್ನಿಯಾದ ರುಖಿಯ ಶಮೀಂ ಬೇಗಂ ಸಾಹಿಬರದ್ದಾಗಿದೆ. ಕೆಲವು ದಿನಗಳ ಹಿಂದೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

1932ರಲ್ಲಿ ಖಾದಿಯನನಲ್ಲಿ ಜನಿಸಿದ್ದರು. ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ಅನೇಕ ವರ್ಷಗಳ ಕಾಲ ಸ್ಪೇನಿನ ಲಜ್ನ ಸದರ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಅವರಿಗೆ ಮೂವರು ಪುತ್ರರು ಮತ್ತು ಮೂವರು ಪುತ್ರಿಯರು ಇದ್ದರು. ಅವರ ಒಬ್ಬ ಮೊಮ್ಮಗನಾದ ಅತಾಉಲ್‌ಮುನ್‌ಇಮ್ ತಾರಿಕ್ ವಖ್ಫೇ ಝ಼ಿಂದಗಿ ಆಗಿರುವರು. ಸೆಂಟ್ರಲ್ ಸ್ಪೇನಿಶ್ ಡೆಸ್ಕಿನ ಇಂಚಾರ್ಜ್ ಆಗಿದ್ದಾರೆ. ಮೊಮ್ಮಗಳೊಬ್ಬಳು ಜಮಾಅತಿನ ಮುಬಲ್ಲಿಗ್‌ರಿಗೆ ವಿವಾಹಿತರಾಗಿರುವರು. ಅಲ್ಲಾಹನ ಅನುಗ್ರಹದಿಂದ ಇಬ್ಬರು ಪುತ್ರರು ಕೂಡ ದೀನಿನ ಸೇವೆ ಮಾಡುವವರಾಗಿದ್ದಾರೆ. ಅವರ ಒಬ್ಬ ಹಿರಿಯ ಮಗನು ನಾಇಬ್ ಅಮೀರ್ ಆಗಿರುವರು. ರುಖಿಯ ಸಾಹಿಬ್‌ರ ತಾತ ಮೌಲವಿ ಫಖ್‌ರುದ್ದೀನ್ ಸಾಹಿಬ್ ಮತ್ತು ದಾದಿ ಸಾಹಿಬ ಬೀಬಿ ಸಾಹಿಬ ಭೇರೆಯವರಾಗಿದ್ದರು. ಹಝ್ರ಼ತ್ ಮಸೀಹ್ ಮೌಊದ್(ಅ)ರ ಕಾಲದಲ್ಲಿ ಬೈಅತ್ ಮಾಡಿದ ನಂತರ ಖಾದಿಯಾನಗೆ ಹೋದರು. ಅವರ ತಾಯಿಯ ತಂದೆಯಾದ ಅಬ್ದುರ್ರಹೀಂ ಸಾಹಿಬ್‌ರು ಅಜ್ಮೀರ್‌ನವರಾಗಿದ್ದರು. ಆರಂಭದಲ್ಲಿ ಸಿಖ್ ಧರ್ಮದವರಾಗಿದ್ದರು. ಅನಂತರ ಹಝ್ರ಼ತ್ ಮಸೀಹ್ ಮೌಊದ್(ಅ)ರ ಕೈಯಲ್ಲಿ ಬೈಅತ್ ಮಾಡುವ ಸೌಭಾಗ್ಯ ಪಡೆದರು. ಬೈಅತ್ ಮಾಡಿದ ನಂತರ ಕಲಿಯಲಿಕ್ಕಾಗಿ ಖಾದಿಯಾನಿಗೆ ಹೋದರು.

ರುಖಿಯ ಬೇಗಂ ಸಾಹಿಬರ ಬಗ್ಗೆ ಅವರ ಮಗನು ಬರೆಯುತ್ತಾರೆ: ದಾವತುಲ್ ಅಮೀರ್ ಪುಸ್ತಕ ಅವರಿಗೆ ಬಹಳ ಪ್ರಿಯವಾಗಿತ್ತು. ಅದನ್ನು ಅನೇಕ ಬಾರಿ ಓದಿದ್ದರು. ಈ ಪುಸ್ತಕವನ್ನು ಓದಿದ ನಂತರ ನನ್ನ ಮನಸ್ಸಿನಲ್ಲಿ ಇದ್ದ ಅನೇಕ ಸಂಶಯಗಳಿಗೆ ಉತ್ತರ ಲಭಿಸಿದ್ದುವು. 12 ವರ್ಷ ಪ್ರಾಯದಿಂದಲೇ ನಮಾಝಿನ ಆಸಕ್ತಿ ಇತ್ತು. ಸತ್ಯವಿಶ್ವಾಸ ಮತ್ತು ನೇರವಾದ ಮಾರ್ಗದಲ್ಲಿ ನಡೆಸು ಎಂದು ಅಲ್ಲಾಹನಲ್ಲಿ ಪ್ರಾರ್ಥಿಸುತ್ತಿದ್ದರು. ಪರ್ದಾಧಾರಣೆಯ ಬಹಳ ಗಮನವಹಿಸುತ್ತಿದ್ದರು. ಜಮಾಅತಿನ ಇತರ ಮಹಿಳೆಯರಿಗೆ ಮಾದರಿಯಾಗಿದ್ದರು. ರೋಗಿಗಳ ಮತ್ತು ನಿರ್ಗತಿಕರೊಂದಿಗೆ ಸಹಾನುಭೂತಿ ಹೊಂದಿದ್ದರು. ಎಲ್ಲ ರೀತಿಯಲ್ಲೂ ಅವರ ಸಹಾಯಕ್ಕಾಗಿ ತಯಾರಾಗುತ್ತಿದ್ದರು.

ಆರಂಭದಲ್ಲಿ ಸ್ಪೇನಿಗೆ ಮೌಲಾನ ಸಾಹಿಬ್‌ರ ಜೊತೆಗೆ ಬಂದಾಗ ಅನೇಕ ಕಷ್ಟತೆಗಳನ್ನು ಎದುರಿಸಿದ್ದರು. ಹೆಚ್ಚಾಗಿ ಪೊಲೀಸರು ಮೌಲಾನ ಸಾಹಿಬ್‌ರನ್ನು ತಬ್ಲೀಗಿನ ಕಾರಣದಿಂದ ಬಂಧಿಸುತ್ತಿದ್ದರು. ಪೊಲೀಸರು ತಬ್ಲೀಗ್ ಕೆಲಸಗಳ ಸಬೂಬು ಸಿಗಲು ತಪಾಸಣೆ ನಡೆಸುತ್ತಿದ್ದರು. ಅಲ್ಲಾಹನು ಖಂಡಿತ ಸಹಾಯಿಸುವನು ಎಂದು ತನ್ನ ಗಂಡನ ಹಾಗೆ ರುಖಿಯ ಸಾಹಿಬರಿಗೆ ದೃಢವಿಶ್ವಾಸವಿತ್ತು. ಖುತ್‌ಬದಲ್ಲಿ ಮಸೀದಿ ನಿರ್ಮಿಸಲು ಅನುಯೋಜ್ಯವಾದ ಜಾಗವನ್ನು ಹುಡುಕಲು ಹಝ್ರ಼ತ್ ಖ಼ಲೀಫತುಲ್ ಮಸೀಹ್ ಸಾಲಿಸ್(ರಹ್) ಮೌಲಾನ ಸಾಹಿಬ್‌ರಿಗೆ ನಿರ್ದೇಶನ ನೀಡಿದಾಗ ರುಖಿಯ ಸಾಹಿಬರು ಕೂಡ ಎಲ್ಲ ರೀತಿಯಲ್ಲೂ ಸಹಾಯ ಮಾಡಿದ್ದರು. ಬಶಾರತ್ ಮಸೀದಿಯ ನಿರ್ಮಾಣ ಶುರುವಾದಾಗ ಬಹುತೇಕ ಪ್ರತಿದಿನ ಅವರು ತನ್ನ ಗಂಡನ ಜೊತೆಗೆ ಖುರ್ತಬದಿಂದ ಪೆಡ್ರೋಬಾದ್ ತನಕ ನಿರ್ಮಾಣ ಕೆಲಸಗಳ ಮೇಲ್ನೋಟವಹಿಸಲಿಕ್ಕಾಗಿ ಹೋಗುತ್ತಿದ್ದರು. ಎಲ್ಲ ಖರ್ಚುಗಳ ರಿಕಾರ್ಡ್ ಅವರ ಬಳಿಯಲ್ಲಿತ್ತು. ಅಕೌಂಟೆಂಟ್ ಎಂಬ ನೆಲೆಯಲ್ಲಿ ಮಸೀದಿಯ ನಿರ್ಮಾಣದಲ್ಲಿ ಇದ್ದರು.

ಅವರ ಮಗನಾದ ಫಝ್‌ಲೆ ಇಲಾಹಿ ಖಮರ್ ಹೇಳುತ್ತಾರೆ: ನನ್ನ ತಾಯಿ ಹಝ್ರ಼ತ್ ಮುಸ್ಲಿಹ್ ಮೌಊದ್(ರ)ರ ಉಪದೇಶವನ್ನು ಸದಾ ಮುಂದಿರಿಸಿದ್ದರು. ಹಝ್ರ಼ತ್ ಮುಸ್ಲಿಹ್ ಮೌಊದ್(ರ) ಅವರೊಡನೆ ಹೀಗೆ ಹೇಳಿದ್ದರು: ತನ್ನ ಡ್ಯೂಟಿಗೆ ಆದ್ಯತೆ ನೀಡಬೇಕು ಮತ್ತು ಪತಿಗೆ ಸಲಹೆ ನೀಡಬೇಕು. ನೀವು ಹೋಗುತ್ತಿರುವ ದೇಶದಲ್ಲಿ ನಿಮ್ಮ ಪತಿಯನ್ನು ತಬ್ಲೀಗಿನ ಕೆಲಸದಲ್ಲಿ ಸೋಮಾರಿಯಾಗುವಂತೆ ಮಾಡಬೇಡಿರಿ. ಬದಲಾಗಿ ಇನ್ನಷ್ಟು ಕ್ರಿಯಾಶೀಲಗೊಳಿಸಬೇಕು. ಮರಣದ ನಂತರ ಜೊತೆಯಾಗಿರಲು ಬಹಳಷ್ಟು ಸಮಯವಿದೆ. ಈ ವಿಷಯವನ್ನು ಮುಂದಿರಿಸಿಕೊಂಡು ನೀವು ಜೀವಿತದ ಈ ದಿನಗಳಲ್ಲಿ ಕೆಲಸ ಮಾಡುವ ಸಮಯವನ್ನು ಹೆಚ್ಚು ಪ್ರಯೋಜನಕರವಾಗುವಂತೆ ಮಾಡಲು ಪ್ರಯತ್ನಿಸಬೇಕು. ಹೇಗಿದ್ದರೂ ಅವರ ಉಪದೇಶಗಳನ್ನು ಅವರು ಪಾಲಿಸಿದ್ದರು. ಎಲ್ಲ ಪರಿಸ್ಥಿತಿಯಲ್ಲೂ ಸದಾ ಅಲ್ಲಾಹನ ಸಂಪ್ರೀತಿಯನ್ನು ಮುಂದಿರಿಸಿಕೊಂಡು ಸಹನೆ ಮತ್ತು ಧೈರ್ಯದಿಂದ ಕೆಲಸ ಮಾಡಿದರು. ಆರಂಭದ ದಿನಗಳು ಬಹಳ ಕಷ್ಟಕರವಾಗಿದ್ದುವು. ಆದರೆ ಅವರು ಅವುಗಳನ್ನು ಧೈರ್ಯದಿಂದ ಸಹಿಸಿದರು. ಧರ್ಮಕ್ಕೆ ಲೌಕಿಕತೆಯ ಮೇಲೆ ಆದ್ಯತೆ ನೀಡಿದರು.

ಇಸ್ಲಾಮಿನ ಹೆಸರು ಕೂಡ ಹೇಳುವುದು ಅಪರಾಧವೆಂದು ಭಾವಿಸಲಾಗುತ್ತಿದ್ದ ಸ್ಥಳದಲ್ಲಿ ಹಝ್ರ಼ತ್ ಮುಸ್ಲಿಹ್ ಮೌಊದ್(ರ)ರ ಉಪದೇಶಗಳನ್ನು ಪಾಲಿಸುತ್ತಾ ಇಸ್ಲಾಮಿನ ಮಾದರಿಯನ್ನು ಸ್ಥಾಪಿಸಿಕೊಂಡು ಅಹ್ಮದಿಯ್ಯತ್ತಿನ ಸಂದೇಶವನ್ನು ಹರಡಲು ಅವರು ದೊಡ್ಡದಾದ ಪಾತ್ರವನ್ನು ವಹಿಸಿಕೊಂಡಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಮೂರನೇ ಜನಾಝ಼ ಹಝ್ರ಼ತ್ ಖ಼ಲೀಫತುಲ್ ಮಸೀಹ್ ಸಾನಿ(ರ)ರ ಪುತ್ರರಾದ ಸಾಹಿಬ್‌ಝ಼ಾದ ಮಿರ್ಝ಼ಾ ಹನೀಫ್ ಅಹ್ಮದ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ತಾಹಿರ ಹನೀಫ್ ಸಾಹಿಬರದ್ದು ಆಗಿದೆ. ಅವರು ಸಯ್ಯದ್ ಝ಼ೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಹ್ ಸಾಹಿಬ್‌ರ ಪುತ್ರಿಯಾಗಿದ್ದರು. ಅವರು ಕೆಲವು ದಿನಗಳಿಗೆ ಮುಂಚಿತವಾಗಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿಕೊಂಡಿದ್ದರು. ನಾನು ಹೇಳಿದಂತೆ ಅವರು ಹಝ್ರ಼ತ್ ಖ಼ಲೀಫತುಲ್ ಮಸೀಹ್ ಸಾನ(ರ)ರ ಸೊಸೆಯಾಗಿದ್ದರು. ನನ್ನ ತಂದೆಯ ಸಹೋದರಿಯಾಗಿದ್ದರು. ಅವರ ಜನನ 1936ರಲ್ಲಿ ಖಾದಿಯಾನಿನಲ್ಲಿ ಆಗಿತ್ತು. ಬುಖ಼ಾರಿಯ ಅನೇಕ ಭಾಗಗಳನ್ನು ಒಳಗೊಂಡ ವ್ಯಾಖ್ಯಾನವನ್ನು ಬರೆದಿದ್ದ ಸಯ್ಯದ್ ಝ಼ೈನುಲ್ ಆಬಿದೀನ್ ವಲಿಯಲ್ಲಾಹ್ ಶಾಹ್ ಸಾಹಿಬ್‌ರು ಅವರ ತಂದೆಯಾಗಿದ್ದರು. ಅವರು ಅರಬ್ ದೇಶದಲ್ಲೂ ನೆಲೆಸಿದ್ದರು. ಡಮಸ್ಕಸಿನವರವರಾಗಿದ್ದ ಸಯ್ಯದ ಸಯ್ಯಾರ ಸಾಹಿಬ ಅವರ ತಾಯಿಯಾಗಿದ್ದರು. ಅವರ ತಾತ ಮತ್ತು ಹಝ್ರ಼ತ್ ಖ಼ಲೀಫತುಲ್ ಮಸೀಹ್‌ರ ತಾಯಿಯ ತಂದೆಯು ಆದ ಹಝ್ರ಼ತ್ ಡಾಕ್ಟರ್ ಸಯ್ಯದ್ ಅಬ್ದುಸ್ಸತ್ತಾರ್ ಶಾಹ್ ಸಾಹಿಬ್(ರ)ರ ಮೂಲಕ ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಪ್ರವೇಶಿಸಿತ್ತು. ಅವರು 1901ರಲ್ಲಿ ಹಝ್ರ಼ತ್ ಮಸೀಹ್ ಮೌಊದ್(ಅ)ರ ಕೈಯಲ್ಲಿ ಬೈಅತ್ ಮಾಡಿದ್ದರು. ಈ ರೀತಿಯಾಗಿ ಅವರು ಖ಼ಲೀಫತುಲ್ ಮಸೀಹ್ ರಾಬಿಅ್‌ರ ಸಹೋದರಿಯಾಗಿದ್ದರು. ದಿವಂಗತ ತಾಹಿರ ಸಾಹಿಬ 1972ರಿಂದ 1990ರ ತನಕ ಲಜ್ನ ಇಮಾಇಲ್ಲಾಹ್ ರಬ್ವದಲ್ಲಿ ಸೆಕ್ರಟರಿ ಇಸ್ಲಾಹೋ ಇರ್ಶಾದ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಅನಂತರ ಸಿರಲಿಯೋನಿನಲ್ಲಿ ತನ್ನ ವಖ್ಫೇ ಝ಼ಿಂದಗಿ ಪತಿಯ ಜೊತೆಗೆ ಜೀವಿತವನ್ನು ಸಾಗಿಸಿದ್ದರು. ಅಲ್ಲಾಹನು ಅವರಿಗೆ ಮೂವರು ಪುತ್ರಿಯರನ್ನು ಮತ್ತು ಇಬ್ಬರು ಪುತ್ರರನ್ನು ದಯಪಾಲಿಸಿರುವನು.

ಅವರ ಹಿರಿಯ ಪುತ್ರಿಯಾದ ಅಮತುಲ್ ಮೂಮಿನ್ ಹೇಳುತ್ತಾರೆ: ನಮ್ಮ ತಾಯಿ ಐದು ಹೊತ್ತಿನ ನಮಾಝಿಲ್ಲದೇ ತಹಜ್ಜುದ್ ನಮಾಝ್ ಮತ್ತು ತಿಲಾವತ್ ನಿಯತವಾಗಿ ಮಾಡುವುದನ್ನು ನಾವು ಕಂಡಿದ್ದೇವೆ. ಅದಲ್ಲದೇ ಇಶ್ರಾಕಿನ ನಮಾಝ್‌ಗಳನ್ನು ಕೂಡ ನಿರ್ವಹಿಸುತ್ತಿದ್ದರು. ಎಂದಿಗೂ ಈ ದಿನಚರ್ಯೆಯನ್ನು ಬಿಡುವುದಾಗಿ ಕಂಡಿಲ್ಲ. ಎಲ್ಲವನ್ನೂ ಅವರು ಬಹಳ ಪ್ರೀತಿ ಮತ್ತು ಮಗ್ನತೆಯಿಂದ ಮಾಡುತ್ತಿದ್ದರು. ಆರಾಧನೆ ಕೂಡ ಬಹಳ ಪ್ರೀತಿ ಮತ್ತು ಮಗ್ನತೆಯಿಂದ ಮಾಡುತ್ತಿದ್ದರು. ಇದರ ಜೊತೆಗೆ ಇತರ ಲೌಕಿಕ ಕೆಲಸಗಳನ್ನು ಹೇಗೆ ನಿಭಾಯಿಸುತ್ತಾರೆ ಎಂದು ನಾನು ಅಚ್ಚರಿಪಡುತ್ತಿದ್ದೆ. ಪತಿಯ ಮನೆಯವರ ಹಕ್ಕುಗಳು, ನೆರಯವರಿಗೆ ಸಂಬಂಧಿಸಿದ ಕರ್ತವ್ಯಗಳು, ಪತಿಯ ಕಾಳಜಿವಹಿಸುವುದು, ನಮ್ಮೆಲ್ಲರ ಆಹಾರದ ಗಮನವಹಿಸುವುದು, ಅತಿಥಿಗಳ ಸತ್ಕಾರ ಎಲ್ಲವನ್ನು ಬಹಳ ಉತ್ಸಾಹದಿಂದ ಮಾಡುತ್ತಿದ್ದರು. ಅವರಿಗೆ ಜಮಾಅತಿನೊಂದಿಗೆ ಪ್ರೀತಿಯಿತ್ತು. ಅವರ ಜೀವಿತದಲ್ಲಿ ಇದ್ದ ಎಲ್ಲ ಖ಼ಲೀಫರ ಜೊತೆಗೆ ನಿಷ್ಠೆಯ ಸಂಬಂಧವಿತ್ತು. ವಸಿಯ್ಯತ್ ಬಗ್ಗೆ ಯಾವಾಗಲೂ ಚಿಂತೆಯಿತ್ತು. ಖ಼ಲೀಫತುಲ್ ಮಸೀಹ್‌ರಿಗೆ ಪತ್ರ ಬರೆಯಲು ಉಪದೇಶಿಸುತ್ತಿದ್ದರು. ಪತ್ರ ಬರೆದರೆ, ನೆಮ್ಮದಿ ಸಿಗುತ್ತದೆ ಎಂದು ಹೇಳುತ್ತಿದ್ದರು. ನನಗೂ ನಿಯತವಾಗಿ ಪತ್ರಗಳನ್ನು ಬರೆಯುತ್ತಿದ್ದರು. ಬಹುತೇಕ ಪ್ರತಿ ಖುತ್ಬದ ನಂತರ ಅವರ ಪತ್ರ ಬರುತಿತ್ತು. ಅದರಲ್ಲಿ ಅನೇಕ ರೀತಿಯ ವಿವರಣೆಗಳು ಇರುತ್ತಿದ್ದುವು. ಅವರಿಗೆ ಇಷ್ಟವಾದ ಕೆಲವು ಸಂಗತಿಗಳ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸುತ್ತಿದ್ದರು. ಎಂದಿಗೂ ಯಾವುದೇ ಆಕ್ಷೇಪಣೀಯ ಮಾತುಗಳನ್ನು ಹೇಳುತ್ತಿರಲಿಲ್ಲ. ಆಕ್ಷೇಪಣೀಯವಾದ ಮಾತುಗಳ ಹಿಂದೆ ಹೋಗುವ ಆವಶ್ಯಕತೆಯಿಲ್ಲವೆಂದು ಹೇಳುತ್ತಿದ್ದರು. ಅದರಿಂದ ಯಾವಾಗಲೂ ನಷ್ಟವೇ ಆಗುತ್ತದೆ. ಪ್ರಯೋಜನವೇನೂ ಇಲ್ಲವೆಂದು ಹೇಳುತ್ತಿದ್ದರು.

ನಾನು ಹೇಳಿದಂತೆ ಖ಼ಿಲಾಫತಿನೊಂದಿಗೆ ಅಸಾಮಾನ್ಯವಾದ ಸಂಬಂಧವಿತ್ತು. ಅವರು ಬಡವರಿಗೆ ಬಹಳ ನೆರವಾಗುತ್ತಿದ್ದರು. ಅಖ್‌ತರ್ ಸಾಹಿಬ್ ಹೇಳುತ್ತಾರೆ: ನಮ್ಮ ತಂದೆಯು ನಮ್ಮ ತಾಯಿ ಮತ್ತು ನಮ್ಮನ್ನು ಉಪೇಕ್ಷಿಸಿದಾಗ, ದಿವಂಗತರ ತಾಹಿರ ಸಾಹಿಬರು ತನ್ನ ಮನೆಯಲ್ಲಿ ನಮಗೆ ಜಾಗವನ್ನು ನೀಡಿದರು ಮತ್ತು ತನ್ನ ಮಕ್ಕಳ ಹಾಗೆ ನಮ್ಮ ಕಾಳಜಿ ವಹಿಸಿದರು. ನಮ್ಮ ಆಹಾರ ಪಾನೀಯ, ಬಟ್ಟೆಬರೆಗಳ, ಕಲಿಕೆಯ ಬಗ್ಗೆ ಗಮನವಹಿಸಿದರು. ನಾವು ಅನ್ಯರು ಎಂದು ಅನುಭವವಾಗುವಂತೆ ಮಾಡಲಿಲ್ಲ.

ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಹಿರಿಯರ ಬಳಿ ಸ್ಥಾನವನ್ನು ನೀಡಲಿ ಮತ್ತು ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ. ಆಮೀನ್.

************

# ಖುತ್‌ಬ ಜುಮುಅ

ಜನರಲ್ಲಿ ಅಬೂಬಕರ್ ಬಿನ್ ಅಬು ಕಹಾಫಾ ಅವರ ಜೀವ ಮತ್ತು ಆಸ್ತಿಯ ವಿಷಯದಲ್ಲಿ ನನಗೆ ಹೆಚ್ಚು ಕರುಣೆ ತೋರುವವರು ಯಾರೂ ಇಲ್ಲ.

ಇಸ್ಲಾಮಿಗೆ ಮುಂಚಿನ ಕಾಲದಲ್ಲೂ ಖುರೈಶಿನ ವಿಶಿಷ್ಟ ಮತ್ತು ಶ್ರೇಷ್ಠ ಜನರಲ್ಲಿ ಅವರು ಎಣಿಸಲ್ಪಡುತ್ತಿದ್ದರು.

ಹಝ್ರ್‌ರತ್ ಅಬೂಬಕರ್(ರ) ಬಡವರ ಮತ್ತು ನಿರ್ಗತಿಕರ ಮೇಲೆ ಅತಿಯಾಗಿ ದಯೆದೋರುತ್ತಿದ್ದರು. ಅವರು ಚಳಿಗಾಲದಲ್ಲಿ ಕಂಬಳಿಗಳನ್ನು ಖರೀದಿ ಮಾಡಿಕೊಂಡು ದರಿದ್ರರಿಗೆ ವಿತರಣೆ ಮಾಡುತ್ತಿದ್ದರು.

ಹಝ್ರ್‌ರತ್ ಅಬೂಬಕರ್(ರ) ಖಿಲಾಫತಿನಿಂದ ಯಾವುದೇ ವೈಯಕ್ತಿಕ ಪ್ರಯೋಜನವನ್ನು ಪಡೆಯಲಿಲ್ಲ. ಬದಲಾಗಿ ಅವರು ಸೃಷ್ಟಿ ಸೇವೆಯನ್ನೇ ತನ್ನ ಗೌರವವೆಂದು ಭಾವಿಸುತ್ತಿದ್ದರು.

ಉಹದ್ ಯುದ್ಧದಲ್ಲಿ ಹಝ್ರ್‌ರತ್ ಪೈಗಂಬರ್(ಸ) ಶಹೀದ್ ಆದರು ಎಂಬ ವದಂತಿ ಹರಡಿದಾಗ ಮೊಟ್ಟಮೊದಲಾಗಿ ಹಝ್ರ್‌ರತ್ ಅಬೂಬಕರ್(ರ) ಜನಜಂಗುಳಿಯನ್ನು ಚೀರುತ್ತಾ ಹಝ್ರ್‌ರತ್ ಪೈಗಂಬರ್(ಸ)ರ ಬಳಿಗೆ ತಲುಪಿದರು.

ಯಾವ ರೀತಿಯಲ್ಲಿ ಜಿಬ್ರೀಲ್ ಬೈತುಲ್ ಮಖ್‌ದಸಿನ ಯಾತ್ರೆಯಲ್ಲಿ ಹಝ್ರ್‌ರತ್ ಪೈಗಂಬರ್(ಸ)ರ ಜೊತೆಗೆ ಇದ್ದರೋ ಅದೇ ರೀತಿಯಲ್ಲಿ ಹಿಜ್ರತ್ ವೇಳೆಯಲ್ಲಿ ಹಝ್ರ್‌ರತ್ ಅಬೂಬಕರ್(ರ) ಹಝ್ರ್‌ರತ್ ಪೈಗಂಬರ್(ಸ)ರ ಜೊತೆಗೆ ಇದ್ದರು.

ಯಾ ರಸೂಲಲ್ಲಾಹ್, ನಾನು ನನ್ನ ಜೀವಕ್ಕಾಗಿ ಹೆದರುತ್ತಿಲ್ಲ. ನಾನು ಕೊಲ್ಲಲ್ಪಟ್ಟರೆ ಒಬ್ಬ ವ್ಯಕ್ತಿ ಕೊಲ್ಲಲ್ಪಟ್ಟಂತೆ ಅಷ್ಟೇ. ಆದರೆ ನಾನು ನಿಮಗಾಗಿ ಹೆದರುತ್ತೇನೆ. ಏಕೆಂದರೆ, ನಿಮಗೆ ಏನಾದರೂ ಆದರೆ, ಸತ್ಯ ಲೋಕದಿಂದ ಅಳಿದು ಹೋಗುವುದು.

ಹಝ್ರ್‌ರತ್ ಅಬುಬಕರ್(ರ) ಅವರು ತ್ಯಾಗವನ್ನು ಮಾಡಿಕೊಂಡು ಕೂಡ, ಅಲ್ಲಾಹನ ಮೇಲೆ ಔದಾರ್ಯ ಮಾಡಿದ್ದೇನೆ ಎಂದು ಅವರು ಯೋಚಿಸಲಿಲ್ಲ. ಬದಲಾಗಿ ತ್ಯಾಗ ಮಾಡಲು ಅಲ್ಲಾಹನು ಸೌಭಾಗ್ಯವನ್ನು ನೀಡಿದ್ದನ್ನು ಅಲ್ಲಾಹನ ಔದಾರ್ಯವೆಂದು ಭಾವಿಸುತ್ತಿದ್ದರು.

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರ್‌ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **25–11–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

اِيَّاكَ نَعْبُدُ وَاِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಹಝ್ರ್‌ರತ್ ಅಬೂಬಕರ್(ರ)ರ ಜೀವಿತದ ವಿವಿಧ ಮಗ್ಗುಲುಗಳ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು. ಈ ಸಂಬಂಧವಾಗಿ ಅವರ ಸೃಷ್ಟಿ ಸೇವೆ ಮತ್ತು ನಿರ್ಗತಿಕರಿಗೆ ಆಹಾರ ನೀಡುವುದರ ಕುರಿತು ಪ್ರಸ್ತಾಪವಿದೆ. ಇಸ್ಲಾಂ ಸ್ವೀಕಾರ ಮಾಡುವುದಕ್ಕೆ ಮುಂಚೆಯೂ ಹಝ್ರ್‌ರತ್ ಅಬೂಬಕರ್(ರ) ಖುರೈಶಿನ ಅತ್ಯುತ್ತಮ ಜನರಲ್ಲಿ ಗಣಿಸಲ್ಪಡುತ್ತಿದ್ದರು. ಜನರಿಗೆ ಯಾವುದೇ ಕಷ್ಟಗಳು ಬಂದರೂ ಜನರು ಅವರಿಂದ ಸಹಾಯ ಪಡೆಯುಚಿತ್ತಿದ್ದರು. ಮಕ್ಕದಲ್ಲಿ ದೊಡ್ಡ ದೊಡ್ಡ ಔತಣಗಳನ್ನು ಮತ್ತು ಅತಿಥಿ ಸತ್ಕಾರಗಳನ್ನು ಅವರು ಮಾಡುತ್ತಿದ್ದರು. (ಅಸ್ಸೀರತುಲ್ ಹಲಬೀಯ, ಸಂಪುಟ–1, ಪುಟ–390, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಇಸ್ಲಾಮಿಗೆ ಮುಂಚಿನ ಕಾಲದಲ್ಲೂ ಖುರೈಶಿನ ವಿಶಿಷ್ಟ ಮತ್ತು ಶ್ರೇಷ್ಠ ಜನರಲ್ಲಿ ಅವರು ಎಣಿಸಲ್ಪಡುತ್ತಿದ್ದರು. ಜನರು ತಮ್ಮ ವಿಷಯಗಳ ಮತ್ತು ಸಮಸ್ಯೆಗಳ ಪರಿಹಾರಕ್ಕಾಗಿ ಅವರ ಬಳಿಗೆ ಹೋಗುತ್ತಿದ್ದರು. (ಹಝ್ರ್‌ರತ್ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಮುಹಮ್ಮದ್ ಅಸ್ಸಲಬಿ ಅನುವಾದ, ಪುಟ–52–54, ದಾರ್ ಇಬ್ನೆ ಕಸೀರ್ ಬೈರೂತ್ 2003)

ಹಝ್ರ್‌ರತ್ ಅಬೂಬಕರ್(ರ) ಬಡವರ ಮತ್ತು ನಿರ್ಗತಿಕರ ಮೇಲೆ ಅತಿಯಾಗಿ ದಯೆದೋರುತ್ತಿದ್ದರು. ಅವರು ಚಳಿಗಾಲದಲ್ಲಿ ಕಂಬಳಿಗಳನ್ನು ಖರೀದಿ ಮಾಡಿಕೊಂಡು ದರಿದ್ರರಿಗೆ ವಿತರಣೆ ಮಾಡುತ್ತಿದ್ದರು. (ಹಝ್ರ್‌ರತ್ ಅಬುಬಕರ್ ಸಿದ್ದೀಖ್(ರ) ಕೆ ಫೈಸ್ಲೆ, ಪುಟ–378, ಮುಶ್ತಾಖ್ ಬುಕ್ ಕಾರ್ನರ್ ಲಾಹೋರ್)

ಹಝ್ರ್‌ರತ್ ಅಬುಬಕರ್(ರ) ಅವರು ಹಳ್ಳಿಗಳಿಂದ ತಂದಿರುವ ಕಂಬಳಿಗಳನ್ನು ಖರೀದಿಸಿದರು ಮತ್ತು ಚಳಿಗಾಲದ ಅವಧಿಯಲ್ಲಿ ಮದೀನಾದ ವಿಧವೆಯರಿಗೆ ಈ ಕಂಬಳಿಗಳನ್ನು ವಿತರಿಸಿದರು ಎಂದು ಒಂದು ವರದಿ ಇದೆ. (ಕನ್ಝುಲ್ ಅಲ್‌ಮಾಲ್, ಸಂಪುಟ–3, ಭಾಗ–5, ಪುಟ–245, ಕಿತಾಬುಲ್ ಖಿಲಾಫ, ಹದೀಸ್–14076, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2004)

ಖಿಲಾಫತ್ ಸ್ಥಾನವನ್ನು ಪಡೆದುಕೊಳ್ಳುವ ಮೊದಲು ಅವರು ಪರಿತ್ಯಕ್ತ ಕುಟುಂಬದ ಮೇಕೆಗಳ ಹಾಲು ಕರೆಯುತ್ತಿದ್ದರು ಎಂಬ ವರದಿ ಇದೆ. ಅವರು ಖಲೀಫರಾದಾಗ, ಈ ಕುಟುಂಬದ ಹುಡುಗಿಯೊಬ್ಬಳು ಈಗ ನೀವು ನಮ್ಮ ಮೇಕೆಗಳ ಹಾಲು ಕರೆಯುವುದಿಲ್ಲವೇ ಎಂದು ಕೇಳಿದಳು. ಇದನ್ನು ಕೇಳಿದ ಹಝ್ರ್‌ರತ್ ಅಬೂಬಕರ್(ರ) ಏಕೆ ಎಂದರು. ನನ್ನ ಜೀವನಕ್ಕೆ ಪ್ರತಿಜ್ಞೆ ಮಾಡಿ ಹೇಳುತ್ತೇನೆ! ನಾನು ಖಂಡಿತವಾಗಿಯೂ ನಿನಗಾಗಿ ಕರೆಯುತ್ತೇನೆ ಮತ್ತು ಈ ವಿಷಯವು ನಾನು ಅನುಸರಿಸಿದ್ದ ನನ್ನ ಅಭ್ಯಾಸದಿಂದ ನನ್ನನ್ನು ತಡೆಯುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ಅವರು ಮೊದಲಿನಂತೆಯೇ ಆ ಕುಟುಂಬದ ಮೇಕೆಗಳ ಹಾಲು ಕರೆಯುತ್ತಿದ್ದರು. ಆ ಹುಡುಗಿಯರು ತಮ್ಮ ಮೇಕೆಗಳೊಂದಿಗೆ ಬಂದಾಗ, ಅವರು ಕರುಣೆಯಿಂದ ಹೇಳುತ್ತಿದ್ದರು ನಾನು ಹಾಲಿನ ನೊರೆ ಮಾಡಬೇಕೇ ಅಥವಾ ಬೇಡವೇ? ಅವರು ನೊರೆ ಮಾಡಲು ಹೇಳಿದರೆ, ಅವರು ಪಾತ್ರೆಯನ್ನು ಸ್ವಲ್ಪ ದೂರದಲ್ಲಿಟ್ಟು ಹಾಲನ್ನು ಚೆನ್ನಾಗಿ ನೊರೆಯಾಗುವವರೆಗೆ ಕರೆಯುತ್ತಾರೆ. ನೊರೆ ಮಾಡಬೇಡಿ ಎಂದು ಹೇಳಿದರೆ, ಹಾಲು ನೊರೆ ಬರದಂತೆ ಪಾತ್ರೆಯನ್ನು ಕೊಚ್ಚಲಿನ ಹತ್ತಿರ ಇಟ್ಟು ಹಾಲು ಕರೆಯುತ್ತಿದ್ದರು. ಅವರು ಈ ಸೇವೆಯನ್ನು ನಿರಂತರವಾಗಿ ಆರು ತಿಂಗಳ ಕಾಲ ಮಾಡಿದರು, ಅಂದರೆ ಖಿಲಾಫತ್ ನಂತರ ಆರು ತಿಂಗಳವರೆಗೆ ಮುಂದುವರೆಸಿದರು. ನಂತರ ಅವರು ಮದೀನಾದಲ್ಲಿ ನೆಲೆಸಿದರು.

ಮೊದಲು ಹಝ್ರ್‌ರತ್ ಅಬೂಬಕ್ಕರ್(ರ) ಅವರಿಗೆ ಎರಡು ಮನೆಗಳಿದ್ದವು. ರಸೂಲುಲ್ಲಾಹ್(ಸ)ರ ಕಾಲದಲ್ಲಿ ಹೊರಗೆ ಒಂದು ಮನೆ ಇತ್ತು, ಅವರು ಅಲ್ಲಿ ಹೊರಗೆ ವಾಸಿಸುತ್ತಿದ್ದರು, ಆದರೆ ರಸೂಲುಲ್ಲಾಹ್(ಸ) ಅವರು ಮಸ್ಜಿದೆ ನಬವಿಯ ಹತ್ತಿರ ತಮ್ಮ ಮನೆಯ ಸಮೀಪ ಒಂದು ನಿವೇಶನವನ್ನು ನೀಡಿದ್ದರು ಅಲ್ಲಿ ಅವರು ಮನೆ ನಿರ್ಮಿಸಿಕೊಂಡಿದ್ದರು. ಅದರಲ್ಲದೆ ಅವರ ಒಂದು ಮನೆ ಇತ್ತು. ಮದೀನಾದಲ್ಲಿಯೂ ಎರಡು ಮನೆಗಳಿದ್ದವು, ಆದರೆ ಮುಂಚೆ ರಸೂಲುಲ್ಲಾಹ್(ಸ) ಅವರ ಜೀವನದಲ್ಲಿ ಅವರು ಹೆಚ್ಚಿನ ಸಮಯವನ್ನು ಹಳ್ಳಿಯ ಮನೆಯಲ್ಲಿ ಕಳೆಯುತ್ತಿದ್ದರು. ಖಿಲಾಫತ್ ನಂತರ, ಮದೀನಾಗೆ ಮತ್ತೆ ಸ್ಥಳಾಂತರಗೊಂಡಿದರು. ಅವರು ಮದೀನಾಗೆ ಬರುವವರೆಗೂ, ಅವರು ತಮ್ಮನ್ನು ತಾವು ತೆಗೆದುಕೊಂಡ ಆ ಹುಡುಗಿಯರ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು.(ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–138–139, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರ್‌ರತ್ ಉಮರ್(ರ.ಅ) ಮದೀನಾದ ಹೊರವಲಯದಲ್ಲಿ ವಾಸಿಸುತ್ತಿದ್ದ ವಯಸ್ಸಾದ ಮತ್ತು ಕುರುಡು ಮಹಿಳೆಯ ಸೇವೆ ಮಾಡುತ್ತಿದ್ದರು. ಅವರು ಆ ಮುದುಕಿಗಾಗಿ ನೀರು ತರುತ್ತಿದ್ದರು ಮತ್ತು ಅವಳ ಕೆಲಸಗಳನ್ನು ಮಾಡಿಕೊಡುತ್ತಿದ್ದರು. ಒಂದು ಬಾರಿ ಅವರು ಅವಳ ಮನೆಗೆ ಹೋದಾಗ, ಅವರಿಗಿಂತ ಮುಂಚಿತವಾಗಿಯೇ ಅವಳ ಕೆಲಸಗಳನ್ನು ಯಾರೋ ಮಾಡಿದ್ದಾಗಿ ಕಂಡುಬಂತು. ಮುಂದಿನ ಬಾರಿ ಅವರು ಅವಳ ಮನೆಗೆ ಬೇಗನೇ ಹೋಗಿ ಏನಾಗುತ್ತಿದೆ ಎಂದು ಅವಿತುಕೊಂಡು ನೋಡಿದರು. ಹಝ್ರ್‌ರತ್ ಅಬೂಬಕರ್(ರ) ಆ ಮುದುಕಿಯ ಮನೆಗೆ ಬರುತ್ತಿರುವುದಾಗಿ ಅವರು ಕಂಡರು. ಆ ಕಾಲದಲ್ಲಿ ಹಝ್ರ್‌ರತ್ ಅಬೂಬಕರ್(ರ) ಖಲೀಫರಾಗಿದ್ದರು.

ಇದನ್ನು ನೋಡಿಕೊಂಡು ಹಝ್ರ್‌ರತ್ ಉಮರ್(ರ) ಹೇಳಿದರು: ಅಲ್ಲಾಹನಾಣೆ,

ಇದನ್ನು ಅವರೇ ಮಾಡಬಹುದಾಗಿತ್ತು. (ತಾರೀಖಿಲ್ ಖಿಲಫಾ, ಜಲಾಲುದ್ದೀನ್ ಅಸ್ಸುಯೂತಿ, ಪುಟ-64, ಬೈರೂತ್ ಆವೃತಿ 1999) ಅಂದರೆ, ಈ ಒಳಿತಿನಲ್ಲಿ ನನಗಿಂತ ಮುಂದೆ ಇರುವವರು ಅವರೇ ಆಗಿರಬಹುದಾಗಿತ್ತು.

ಒಂದು ವರದಿಯಲ್ಲಿ ಮೂಸಾ ಬಿನ್ ಇಸ್ಮಾಯಿಲ್ ಅವರು ಹೇಳಿದರು: ಮುತಮರ್ ತನ್ನ ತಂದೆಯಿಂದ ವರದಿ ಮಾಡಿ ಹೇಳೀದರು ಅಬು ಉಸ್ಮಾನ್ ನಮಗೆ ವಿವರಿಸಿದರು: ಹಜರತ್ ಅಬ್ದುಲ್ ರಹಮಾನ್ ಬಿನ್ ಅಬಿ ಬಕರ್(ರ) ಅವರಿಗೆ ತಿಳಿಸಿದರು, ಸೂಫಾದ ಜನರು ನಿರ್ಗತಿಕರಾಗಿದ್ದಾರೆ. ಒಮ್ಮೆ ಪ್ರವಾದಿ(ಸ) ಹೇಳಿದರು. ಯಾವನ ಬಳಿ ಇಬ್ಬರ ಊಟವಿದೆಯೇ ಅವನು ಮೂರನೆಯವನನ್ನು ಕೂಡ ಕೊಂಡುಹೋಗಲಿ ಮತ್ತು ಯಾವನ ಬಳಿ ನಾಲ್ವರ ಊಟವಿದೆಯೋ ಅವನು ಐದನೆಯವನನ್ನು ಕೊಂಡುಹೋಗಲಿ. ಅಥವಾ ಅದೇ ರೀತಿ ಹೇಳಿದರು, ಅಂದರೆ ಅಲ್ಲಿ ಕುಳಿತಿದ್ದ ಬಡವರನ್ನು ಮತ್ತು ನಿರ್ಗತಿಕರನ್ನು ನಿಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ಆಹಾರ ಕೊಡಿ. ಹಝ್ರತ್ ಅಬೂಬಕರ್(ರ) ಮೂರು ಜನರನ್ನು ಕರೆತಂದರು ಮತ್ತು ಪ್ರವಾದಿ(ಸ)ರವರು ಹತ್ತು ಜನರನ್ನು ಕರೆತಂದರು. ಹಝ್ರತ್ ಅಬುಬಕರ್(ರ) ಮತ್ತು ಇತರ ಮೂವರು ಜನ ಮನೆಯಲ್ಲಿದ್ದರು ಅಂದರೆ ನಾನು, ನನ್ನ ತಂದೆ ಮತ್ತು ನನ್ನ ತಾಯಿ ಎಂದು ಹಜರತ್ ಅಬ್ದುಲ್ ರಹಮಾನ್ ಹೇಳುತ್ತಿದ್ದರು. ವರದಿಗಾರರು ಹೇಳುತ್ತಾರೆ ಅಬ್ದುರ್ರಹ್ಮಾನ್ ರವರು ನನ್ನ ಹೆಂಡತಿ ಅಥವಾ ನನ್ನ ಮತ್ತು ಹಝ್ರತ್ ಅಬುಬಕರ್ (ರ) ಅವರ ಮನೆಯಲ್ಲಿ ಹಂಚಿಕೊಂಡ ನನ್ನ ಸೇವಕ ಎಂದು ಹೇಳಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಮತ್ತು ಹಝ್ರತ್ ಅಬುಬಕರ್(ರ) ಪ್ರವಾದಿಯೊಂದಿಗೆ ಸಂಜೆ ಭೋಜನವನ್ನು ಮಾಡಿದ ನಂತರ ಅವರು ಇಶಾ ನಮಾಝನ್ನು ನಿರ್ವಹಿಸಿ ಹಿಂದಿರುಗಿದರು. ಅತಿಥಿಗಳನ್ನು ಮನೆಗೆ ಕರೆದುಕೊಂಡು ಹೋಗಿದ್ದರು ಆದರೆ ಅವರು ರಸೂಲುಲ್ಲಾಹ್(ಸ) ಅವರೊಂದಿಗೆ ಉಳಿದು ಅಲ್ಲಿಯೇ ಊಟ ಮಾಡಿ ಹಿಂತಿರುಗಿದರು. ಅವರು ರಸೂಲುಲ್ಲಾಹ್(ಸ) ಅವರೊಂದಿಗೆ ಸಂಜೆಯ ಊಟವನ್ನು ಮಾಡಿದರು ಮತ್ತು ಅಲ್ಲಾಹನ ಇಚ್ಛೆಯಂತೆ ರಾತ್ರಿಯನ್ನು ಕಳೆದ ನಂತರ ಅವರು ಅಲ್ಲಿ ಬಹಳ ಕಾಲ ಇದ್ದರು ಎಂದು ವರದಿಯಾಗಿದೆ. ಅವರ ಪತ್ನಿ ಅವರಿಗೆ ಕೇಳಿದರು, ನಿಮ್ಮ ಅತಿಥಿಗಳಿಂದ ನಿಮ್ಮನ್ನು ತಡೆದದ್ದು ಯಾವ ವಿಷಯವಾಗಿದೆ? ಅಂದರೆ, ನೀವು ಏಕೆ ವಿಳಂಬ ಮಾಡಿದಿರಿ? ಅದಕ್ಕೆ ಹಝ್ರತ್ ಅಬೂಬಕರ್(ರ) ಹೇಳಿದರು: ನೀವು ಅವರಿಗೆ ಆಹಾರ ನೀಡಲಿಲ್ಲವೇ? ಅತಿಥಿಗಳು ನೀವು ಬರುವ ತನಕ ತಿನ್ನಲು ನಿರಾಕರಿಸಿದ್ದರು ಎಂದು ಪತ್ನಿ ಹೇಳಿದರು. ಹಝ್ರತ್ ಅಬೂಬಕರ್(ರ) ಬರುವವರೆಗೆ ನಾವು ಊಟ ಮಾಡುವುದಿಲ್ಲ ಎಂದು ಅತಿಥಿಗಳು ಹೇಳಿದರು. ಅವರ ಪತ್ನಿ ಹೇಳಿದರು ನಾನು ಅವರಿಗೆ ಊಟ ಬಡಿಸಿದ್ದೆ ಆದರೆ ಅತಿಥಿಗಳು ಅವರನ್ನು ಬಡಿಸಲು ಬಿಡಲಿಲ್ಲ. ಹಝ್ರತ್ ಅಬ್ದುಲ್ ರಹ್ಮಾನ್ ಹೇಳುತ್ತಾರೆ ನಾನು ಹೋಗಿ ತಲೆಮರೆಸಿಕೊಂಡೆ. ಅತಿಥಿಗಳಿಗೆ ಊಟ ಕೊಡದಿದ್ದಕ್ಕೆ ಹಝ್ರತ್ ಅಬೂಬಕ್ಕರ್ ನಿಂದ ಬೈಯಬಾರದೆಂದು ನಾನು ಅವರಿಂದ ಬಚ್ಚಿಟ್ಟುಕೊಂಡೆ. ಆಗ ಹಝ್ರತ್ ಅಬೂಬಕರ್(ರ) ಹೇಳಿದರು, ಓ ಮೂರ್ಖ! ಮತ್ತು ಅವರು ನನ್ನನ್ನು ತುಂಬಾ ಸೋಮಾರಿ ಎಂದು ಕರೆದರು, ಹಝ್ರತ್ ಅಬುಬಕರ್(ರ) ಅತಿಥಿಗಳಿಗೆ ಆಹಾರವನ್ನು ಸೇವಿಸಲು ಹೇಳಿದರು ಮತ್ತು ನಾನು ತಿನ್ನುವುದಿಲ್ಲ ಎಂದು ಹಝ್ರತ್ ಅಬುಬಕರ್ ಸ್ವತಃ ಪ್ರಮಾಣ ಮಾಡಿದರು. ಅಬ್ದುಲ್ ರಹಮಾನ್ ಹೇಳುತ್ತಾರೆ ಅಲ್ಲಾಹನ ಆಣೆ! ನಾವು ತೆಗೆದುಕೊಂಡ ಪ್ರತಿ ತುಣುಕಿನ ಕೆಳಗೆ ಹೆಚ್ಚು ಆಹಾರ ಬೆಳೆಯುತ್ತಿದ್ದ ಹಾಗೆ ಕಾಣಿದೆವು ಮತ್ತು ಅವರು ತೃಪ್ತರಾಗುವರೆಗೆ ತುಂಬಾ ತಿಂದರು. ಮತ್ತು ಮೊದಲು ಇದ್ದಷ್ಟು ಆಹಾರಕ್ಕಿಂತ ಇನ್ನು ಹೆಚ್ಚಾಯಿತು.

ಅತಿಥಿಗಳಿಗೆ ಅನ್ನಸಂತರ್ಪಣೆ ಮಾಡಲಾಯಿತು. ಅತಿಥಿಗಳು ತಿನ್ನುತ್ತಿದ್ದರು ಆದರೆ ಆಹಾರವು ಹಾಗೆಯೇ ಉಳಿದಿತ್ತು ಆದರೆ ಹೆಚ್ಚಾಗುತ್ತಿತ್ತು ಎಂದು ಅವರು ಹೇಳುತ್ತಾರೆ. ಮತ್ತು ಎಲ್ಲರೂ ಹೊಟ್ಟೆ ತುಂಬ ತಿಂದರು. ಹಝ್ರತ್ ಅಬೂಬಕರ್(ರ) ಅವರು ಆಹಾರ ಹಾಗೆಯೇ ಉಳಿದಿದೆ ಬದಲಾಗಿ ಅದಕ್ಕಿಂತ ಹೆಚ್ಚಾಗಿದ್ದನ್ನು ಕಂಡಾಗ ಅವರು ತಮ್ಮ ಪತ್ನಿಗೆ, ಬನೀ ಫಿರಾಸ್ ಅವರ ಸಹೋದರಿಗೆ ಹೇಳಿದರು! ಇದೇನು? ಅವರ ಪತ್ನಿ ಹೇಳಿದರು ನನ್ನ ಕಣ್ಣಿಗೆ ತಂಪೆರೆಯುವ ಆಣೆ! ಈಗ ಅದು ಮೊದಲಿಗಿಂತ ಮೂರು ಪಟ್ಟು ಹೆಚ್ಚಾಗಿದೆ. ಅಂದರೆ, ಆಹಾರವು ತುಂಬಾ ಹೆಚ್ಚಾಗಿದೆ. ಹಝ್ರತ್ ಅಬೂಬಕ್ಕರ್(ರ) ಕೂಡ ಅದರಿಂದ ತಿಂದು ಹೇಳಿದರು ಅವನು ಸೈತಾನ ಆಗಿದ್ದನು, ಅಂದರೆ ಅವನ ಪ್ರಚೋದನೆಯಿಂದ ನಾನು ತಿನ್ನುವುದಿಲ್ಲ ಎಂದು ಪ್ರಮಾಣ ಮಾಡಿದ್ದೇನೆ ಎಂದು ಹೇಳಿದರು. ನಾನು ಮೊದಲೇ ಹೇಳಿದ್ದೆ, ಇಲ್ಲ, ನಾನು ಅದನ್ನು ತಿನ್ನುವುದಿಲ್ಲ ಎಂದು ಪ್ರಮಾಣ ಮಾಡಿದ್ದೆ. ಆದರೆ ಅವರು ಆಹಾರವನ್ನು ಅನುಗ್ರಹಿಸಲಾಗುತ್ತಿರುವುದನ್ನು ನೋಡಿದಾಗ, "ಆ ಪ್ರಮಾಣವು ಸೈತಾನನಿಂದ ನನ್ನಿಂದ ತೆಗೆದುಕೊಂಡಿತು, ಆದರೆ ಇದು ಅನುಗ್ರಹದಾಯಕವಾದ ಆಹಾರವಾಗಿದೆ, ನಾನು ತಿನ್ನುತ್ತೇನೆ. ಎಂದು ಹಝ್ರತ್ ಅಬೂಬಕರ್(ರ) ಅವರು ಅದರಿಂದ ಒಂದು ತುಣುಕನ್ನು ತಿಂದರು. ತದನಂತರ, ಅವರು ಆಹಾರವನ್ನು ತೆಗೆದುಕೊಂಡು ಪ್ರವಾದಿ(ಸ) ಅವರ ಬಳಿಗೆ ತೆಗೆದುಕೊಂಡು ಹೋಗಿ ಅವರು ಬೆಳಿಗ್ಗೆ ತನಕ ಅವರೊಂದಿಗೆ ಇದ್ದರು. ಬೆಳಗಿನ ತನಕ ಅಲ್ಲಿಯೇ ಆಹಾರ ಇತ್ತು. ನಮ್ಮ ಮತ್ತು ಒಂದು ರಾಷ್ಟ್ರದ ನಡುವೆ ಒಡಂಬಡಿಕೆ ಇತ್ತು ಮತ್ತು ಅದು ಮುಗಿದಿದೆ ಎಂದು ಹೇಳುತ್ತಾರೆ. ನಾವು ಹನ್ನೆರಡು ಜನರನ್ನು ಪ್ರತ್ಯೇಕವಾಗಿ ಕುಳಿತುಕೊಳ್ಳುವಂತೆ ಮಾಡಿದೆವು ಮತ್ತು ಅವರಲ್ಲಿ ಪ್ರತಿಯೊಬ್ಬರು ಅವರೊಂದಿಗೆ ಕೆಲವು ಜನರನ್ನು ಹೊಂದಿದ್ದರು. ಅಲ್ಲಾಹನಿಗೆ ಚೆನ್ನಾಗಿ ಬಲ್ಲವನಾಗಿದ್ದಾನೆ, ಅಂದರೆ ಒಪ್ಪಂದವನ್ನು ಮಾಡಿದವರಲ್ಲಿ ಹನ್ನೆರಡು ಜನರಿದ್ದರು ಮತ್ತು ಅವರಲ್ಲಿ ಪ್ರತಿಯೊಬ್ಬರು ಕೆಲವು ಜನರು ಇದ್ದರು. ಪ್ರತಿಯೊಬ್ಬ ವ್ಯಕ್ತಿಯೊಂದಿಗೆ ಎಷ್ಟು ಮಂದಿ ಇದ್ದಾರೆಂದು ಅಲ್ಲಾಹನಿಗೆ ಚೆನ್ನಾಗಿ ತಿಳಿದಿತ್ತು ಎಂದು ಅವರು ಹೇಳುತ್ತಾರೆ, ಆದರೆ ಪ್ರವಾದಿ (ಸ.ಅ) ಅವರು ಈ ಜನರನ್ನು ಅವರೊಂದಿಗೆ ಕಳುಹಿಸಿದ್ದಾರೆ, ಅಂದರೆ ಗಣನೀಯ ಸಂಖ್ಯೆಯಿದೆ ಎಂಬುದು ಖಚಿತವಾಗಿದೆ. ಈ ಅನುಗ್ರಹವನ್ನು ಅಲ್ಲಾಹನು ಹಝ್ರತ್ ಅಬೂಬಕರ್(ರ)ರ ಆಹಾರದಲ್ಲಿ ಇರಿಸಿದನು. (ಸಾಹೀಹ್ ಬುಖಾರಿ, ಕಿತಾಬ್ ಅಲ್-ಮನಾಕಿಬ್, ಹದೀಸ್ ಸಂಖ್ಯೆ-3581)

ಹಝ್ರತ್ ಪೈಗಂಬರ್(ಸ) ಕೇಳಿದ್ದಾಗಿ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಅಬೂಬಕರ್(ರ) ವರದಿ ಮಾಡುತ್ತಾರೆ: ನಿಮ್ಮಲ್ಲಿ ಯಾರಾದರೂ ಇಂದು ನಿರ್ಗತಿಕನಿಗೆ ಆಹಾರ ನೀಡಿದ್ದೀರಾ? ಹಝ್ರತ್ ಅಬೂಬಕರ್(ರ) ಹೇಳಿದರು: ನಾನು ಮಸೀದಿಗೆ ಪ್ರವೇಶಿಸಿದಾಗ, ಒಬ್ಬ ಭಿಕ್ಷುಕ ಭಿಕ್ಷೆ ಬೇಡಿದನು. ನಾನು ಅಬ್ದುರ್ರಹ್ಮಾನಿನ ಕೈಯಲ್ಲಿ ರೊಟ್ಟಿಯ ಒಂದು ತುಣುಕನ್ನು ಕಂಡೆನು. ಅದನ್ನು ನಾನು ಅವನಿಂದ ಪಡೆದುಕೊಂಡು ಭಿಕ್ಷುಕನಿಗೆ ನೀಡಿದೆ. (ಸುನನ್ ಅಬು ದಾವೂದ್, ಕಿತಾಬುಝ್ಝಕಾತ್, ಹದೀಸ್ ಸಂಖ್ಯೆ-1670)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ)ರ ಪುತ್ರನಾದ ಅಬ್ದುರ್ರಹ್ಮಾನ್(ರ) ಕೂಡ ಖಿಲಾಫತಿಗೆ ಯೋಗ್ಯರಾಗಿದ್ದರು. ಅವರು ಹಝ್ರತ್ ಉಮರ್(ರ)ಗಿಂತ ಸೌಮ್ಯ ಸ್ವಭಾವದವರಾಗಿದ್ದರು ಮತ್ತು ಯೋಗ್ಯತೆ ಕೂಡ ಹಝ್ರತ್ ಉಮರ್(ರ)ಗಿಂತ ಕಡಿಮೆಯೇನೂ ಆಗಿರಲಿಲ್ಲ. ಆದ್ದರಿಂದ ಅವರು ಹಝ್ರತ್ ಅಬೂಬಕರ್(ರ)ರ ನಂತರ ಆಗಬೇಕು ಎಂದು ಜನರು ಹೇಳಿದರು. ಆದರೆ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರ ಸ್ವಭಾವ ಪ್ರಕೃತಗಳು ಭಿನ್ನವಾಗಿದ್ದರೂ ಹಝ್ರತ್ ಅಬೂಬಕರ್(ರ) ಹಝ್ರತ್ ಉಮರ್(ರ)ರನ್ನೇ ಖಿಲಾಫತಿಗಾಗಿ ಆಯ್ಕೆ ಮಾಡಿಕೊಂಡರು. ಒಟ್ಟಿನಲ್ಲಿ ಹಝ್ರತ್ ಅಬೂಬಕರ್(ರ) ಖಿಲಾಫತಿನಿಂದ ಯಾವುದೇ ವೈಯಕ್ತಿಕ ಪ್ರಯೋಜನವನ್ನು ಪಡೆಯಲಿಲ್ಲ. ಬದಲಾಗಿ ಅವರು ಸೃಷ್ಟಿ ಸೇವೆಯನ್ನೇ ತನ್ನ ಗೌರವವೆಂದು ಭಾವಿಸುತ್ತಿದ್ದರು.

ಮತ್ತೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸೂಫಿಗಳ ಹೀಗೊಂದು ವರದಿಯಿದೆ: (ಇದು ಎಲ್ಲಿಯ ವರೆಗೆ ಸರಿಯಿದೆ ಎಂದು ಅಲ್ಲಾಹನು ಬಲ್ಲವನಾಗಿದ್ದಾನೆ) ಹಝ್ರತ್ ಉಮರ್(ರ) ಹಝ್ರತ್ ಅಬೂಬಕರ್(ರ)ರ ಒಬ್ಬ ಗುಲಾಮನೊಡನೆ ಕೇಳಿದರು: ನಿಮ್ಮ ಯಜಮಾನ ಯಾವ ಯಾವ ಕೆಲಸಗಳನ್ನು ಮಾಡುತ್ತಿದ್ದರು. ಹಾಗಾದರೆ ನಾನು ಅವುಗಳನ್ನು ಮಾಡುವೆನು. ಗುಲಾಮನು ಹೇಳಿದನು: ಹಝ್ರತ್ ಅಬೂಬಕರ್(ರ) ದಿನಾಲೂ ರೊಟ್ಟಿಯನ್ನು ತೆಗೆದುಕೊಂಡು ಒಂದೆಡೆ ಹೋಗುತ್ತಿದ್ದರು. ಹೀಗೆ ಹಝ್ರತ್ ಉಮರ್(ರ) ಆ ಗುಲಾಮನ ಜೊತೆಗೆ ಆ ಕಡೆಗೆ ಆಹಾರದೊಂದಿಗೆ ಹೋದರು. ಅಲ್ಲಿ ಒಂದು ಗುಹೆಯಲ್ಲಿ ಕೈಕಾಲುಗಳು ಇಲ್ಲದ ಒಬ್ಬ ಅಂಗವಿಕಲ ಅಂಧ ವ್ಯಕ್ತಿ ಕುಳಿತುಕೊಂಡಿದ್ದನು. ಹಝ್ರತ್ ಉಮರ್(ರ) ಅವನ ಬಾಯಿಗೆ ಒಂದು ತುತ್ತನ್ನು ಹಾಕಿದಾಗ ಅವನು ಅಳುತ್ತಾ ಹೀಗೆ ಹೇಳಿದನು: ಅಲ್ಲಾಹನು ಹಝ್ರತ್ ಅಬೂಬಕರ್(ರ)ರ ಮೇಲೆ ಕೃಪೆದೋರಲಿ. ಅವರು ಎಂತಹ ಶ್ರೇಷ್ಠ ವ್ಯಕ್ತಿಯಾಗಿದ್ದರು! ಅಬೂಬಕರ್(ರ) ನಿಧನಗೊಂಡರು ಎಂದು ನಿನಗೆ ಹೇಗೆ ಗೊತ್ತಾಯಿತು ಎಂದು ಹಝ್ರತ್ ಉಮರ್(ರ) ಅವನೊಡನೆ ಕೇಳಿದರು. ಅವನು ಹೇಳಿದನು: ನನ್ನ ಬಾಯಿಯಲ್ಲಿ ಹಲ್ಲುಗಳಿಲ್ಲ. ಆದ್ದರಿಂದ ಅಬೂಬಕರ್(ರ) ತುತ್ತನ್ನು ಜಗಿದುಕೊಂಡು ನನ್ನ ಬಾಯಿಗೆ ಹಾಕುತ್ತಿದ್ದರು. ಇಂದಿನ ತುತ್ತು ಗಟ್ಟಿಯಾಗಿ ಇದೆ. ಆದ್ದರಿಂದ ಇಂದು ನನ್ನ ಬಾಯಿಗೆ ತುತ್ತು ಹಾಕುತ್ತಿರುವುದು ಬೇರೆ ವ್ಯಕ್ತಿಯಾಗಿರಬೇಕೆಂದು ನಾನು ಊಹಿಸಿಕೊಂಡೆನು. ಅದಲ್ಲದೇ ಹಝ್ರತ್ ಅಬೂಬಕರ್(ರ) ಎಂದಿಗೂ ಗೈರುಹಾಜರಾಗುತ್ತಿರಲಿಲ್ಲ. ಸ್ವಲ್ಪ ದಿನಗಳಿಂದ ಅವರು ಬರದೇ ಇರುವುದನ್ನು ಕಂಡಾಗ, ಖಂಡಿತವಾಗಿಯೂ ಅವರು ಈ ಲೋಕದಲ್ಲಿಲ್ಲವೆಂದು ಗೊತ್ತಾಯಿತು. ಒಟ್ಟಿನಲ್ಲಿ ಆಡಳಿತದಿಂದ ಹಝ್ರತ್ ಅಬೂಬಕರ್(ರ) ಗಳಿಸಿದ್ದಾದರೂ ಏನು? ಅವರಿಗೆ ಲಭಿಸಿದ ಖಿಲಾಫತಿನಿಂದ ಅವರೇನೂ ಭೌತಿಕ ಪ್ರಯೋಜನವನ್ನು ಪಡೆಯಲಿಲ್ಲ. ಸರ್ಕಾರಿ ಸಂಪತ್ತನ್ನು ಅವರು ತನ್ನದಾಗಿರಿಸಿಕೊಂಡರೇ? ಖಂಡಿತವಾಗಿಯೂ ಇಲ್ಲ. ಅವರ ಸಂಬಂಧಿಕರಿಗೆ ಲಭಿಸಿದ ವಸ್ತುಗಳು ಅವರ ವೈಯಕ್ತಿಕ ಸಂಪತ್ತಿನಿಂದಾಗಿತ್ತು. (ಖುತ್ಬಾತೆ ಮಹ್ಮೂದ್, ಸಂಪುಟ-17, ಪುಟ-494-495) ಅವರಿಗೆ ಇದ್ದ ಒಂದೇ ಒಂದು ವೈಶಿಷ್ಟ್ಯ ಅವರ ಸೇವೆಯ ಗುಣವಾಗಿತ್ತು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನಿಗೆ ಸಲ್ಲಬೇಕಾದ ಕರ್ತವ್ಯಗಳು ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳು ಶರೀಅತಿನ ಎರಡು ತುಂಡುಗಳಾಗಿವೆ. ಹಝ್ರತ್ ಪೈಗಂಬರ್(ಸ) ತನ್ನ ಎಷ್ಟೊಂದು ಆಯುಸ್ಸನ್ನು ಸೇವೆಯಲ್ಲಿ ಕಳೆದರು ನೋಡಿರಿ. ಹಝ್ರತ್ ಅಲಿ(ರ)ರ ಅವಸ್ಥೆಯನ್ನು ನೋಡಿರಿ. ಇನ್ನು ಜಾಗ ಬಾಕಿ ಉಳಿಯದಷ್ಟು ಬಟ್ಟೆಯಲ್ಲಿ ತೇಪೆ ಹಾಕಿಕೊಂಡಿದ್ದರು. ಹಝ್ರತ್ ಅಬೂಬಕರ್(ರ) ಮುದುಕಿಯೊಬ್ಬಳಿಗೆ ಸಿಹಿತಿನಿಸು ಕೊಡುವುದನ್ನು ದಿನಚರ್ಯೆಯನ್ನಾಗಿ ಮಾಡಿಕೊಂಡಿದ್ದರು. ಯೋಚಿಸಿರಿ, ಇದು ಎಷ್ಟು ದೊಡ್ಡ ನಿಷ್ಠೆಯಾಗಿತ್ತು. (ಬದ್ಧತೆಯಾಗಿತ್ತು). ಹಝ್ರತ್ ಅಬೂಬಕರ್(ರ) ನಿಧನಗೊಂಡಾಗ, ಇಂದು ಅಬೂಬಕರ್(ರ) ನಿಧನಗೊಂಡಿರುವರು ಎಂದು ಆ ಮುದುಕಿ ಹೇಳಿದಳು. ನಿನಗೆ ದಿವ್ಯವಾಣಿ ಉಂಟಾಯಿತೇ ಎಂದು ನೆರೆಯವರು ಕೇಳಿದರು. ಅವಳು ಹೇಳಿದಳು: ಇಲ್ಲ, ಇಂದು ಅಬೂಬಕರ್(ರ) ಹಲ್ವ ತೆಗೆದುಕೊಂಡು ಬರಲಿಲ್ಲ. ಆದ್ದರಿಂದ ಅವರು ನಿಧನಗೊಂಡಿರುವರು ಎಂದು ನನಗೆ ಗೊತ್ತಾಯಿತು. ಎಂದರೆ, ಜೀವಂತವಾಗಿರುವಾಗ ಹಲ್ವ ತಲುಪದೇ ಇರಲು ಸಾಧ್ಯವಿರಲಿಲ್ಲ. ಎಷ್ಟೊಂದು ಹಿರಿದಾದ ಸೇವೆಯಾಗಿತ್ತು ಎಂದು ನೋಡಿರಿ. ಈ ರೀತಿಯಾಗಿ ಎಲ್ಲರೂ ಸೇವೆ ಮಾಡಬೇಕು. (ಮಲ್‌ಫೂಝಾತ್, ಸಂಪುಟ-6, ಪುಟ-54, 1984 ಆವೃತಿ)

ಇತರರ ತಪ್ಪುಗಳನ್ನು ಮರೆಮಾಚುವ ಅವರ ಗುಣದ ಮಟ್ಟ ಎಂಥದ್ದಾಗಿತ್ತು ಎಂಬುದರ ಬಗ್ಗೆ ವರದಿಯಿದೆ. ಹಝ್ರತ್ ಅಬೂಬಕರ್(ರ) ಹೇಳುತ್ತಿದ್ದರು: ನಾನೊಬ್ಬ ಕಳ್ಳನನ್ನು ಹಿಡಿದರೆ, ಅಲ್ಲಾಹನು ಅವನ ಅಪರಾಧವನ್ನು ಮರೆಸಲಿ ಎಂದಾಗಿತ್ತು ನನ್ನ ಅತ್ಯಂತ ದೊಡ್ಡ ಬಯಕೆ. (ಅತ್ತಬಖಾತುಲ್ ಕುಬ್ರ, ಸಂಪುಟ-5, ಪುಟ-9, ದಾರಲ್ ಕುತುಬ್ ಇಲ್ಮಿಯ ಬೈರೂತ್ 2012)

ಹಝ್ರತ್ ಅಬೂಬಕರ್(ರ) ಶೌರ್ಯ ಮತ್ತು ಧೈರ್ಯದ ಸ್ವರೂಪವಾಗಿದ್ದರು. ಇಸ್ಲಾಮಿಗಾಗಿ ಅಥವಾ ಹಝ್ರತ್ ಪೈಗಂಬರ್(ಸ)ರ ಪ್ರೇಮದ ಕಾರಣದಿಂದ ದೊಡ್ಡ ದೊಡ್ಡ ಅಪಾಯಗಳನ್ನು ಅವರು ಪರಿವೆ ಮಾಡುತ್ತಿರಲಿಲ್ಲ. ಮಕ್ಕಾ ಜೀವಿತದಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ಏನಾದರು ತೊಂದರೆ ಅಥವಾ ಅಪಾಯದ ಸಂದರ್ಭವನ್ನು ನೋಡಿದರೆ, ಅವರ ಸಂರಕ್ಷಣೆಗಾಗಿ ಹಝ್ರತ್ ಅಬೂಬಕರ್(ರ) ಗೋಡೆಯಂತೆ ಮುಂದೆ ನಿಲ್ಲುತ್ತಿದ್ದರು. ಅಬೀ ತಾಲಿಬಿನ ಕಣಿವೆಯಲ್ಲಿ ಮೂರು ವರ್ಷಗಳ ತನಕ ಸೆರೆಯಂತಹ ಕಾಲಘಟ್ಟ ಬಂದಾಗ ಸ್ಥೈರ್ಯದಿಂದ ಮತ್ತು ಸ್ಥಿರಚಿತ್ತತೆಯಿಂದ ಅಲ್ಲೇ ಇದ್ದುಕೊಂಡರು. ಹಿಜ್ರತಿನ ವೇಳೆಯೂ ಹಝ್ರತ್ ಪೈಗಂಬರ್(ಸ)ರ ಸಹವಾಸ ಮತ್ತು ಜೊತೆಯಾಗಿ ಇರುವ ಗೌರವವನ್ನು ಅವರು ಗಳಿಸಿದರು. ಅಲ್ಲಾದರೋ ಜೀವಕ್ಕೆ ಅಪಾಯವಿತ್ತು. ನಡೆದ ಎಲ್ಲ ಯುದ್ಧಗಳಲ್ಲಿ ಅವರು ಭಾಗಿಯಾಗಿದ್ದರು ಎಂದು ಮಾತ್ರವಲ್ಲ, ಹಝ್ರತ್ ಪೈಗಂಬರ್(ಸ)ರ ಸಂರಕ್ಷಣೆಯ ಹೊಣೆಗಾರಿಕೆಯನ್ನು ಈಡೇರಿಸಿದರು. ಅವರ ಇದೇ ಧೈರ್ಯ ಮತ್ತು ಶೌರ್ಯವನ್ನು ಮುಂದಿರಿಸುತ್ತಾ ಹಝ್ರತ್ ಅಲಿ(ರ) ಒಂದು ಬಾರಿ ಜನರೊಡನೆ ಕೇಳಿದರು: ಎಲ್ಲರಿಗಿಂತ ಧೈರ್ಯಶಾಲಿ ಯಾರು? ನೀವೇ ಆಗಿರುವಿರಿ ಎಂದು ಜನರು ಹೇಳಿದರು. ಆದರೆ ಹಝ್ರತ್ ಅಲಿ(ರ) ಹೇಳಿದರು: ಎಲ್ಲರಿಗಿಂತ ಧೈರ್ಯಶಾಲಿ ಅಬೂಬಕರ್(ರ) ಆಗಿರುವರು.

ಏಕೆಂದರೆ ಬದ್ರ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರ ಬಳಿ ಹಝ್ರತ್ ಅಬೂಬಕರ್(ರ) ಖಡ್ಗವನ್ನು ಹಿಡಿದುಕೊಂಡು ನಿಂತುಕೊಂಡಿದ್ದರು. ಯಾವನೇ ಮುಶ್ರಿಕನು ಹಝ್ರತ್ ಪೈಗಂಬರ್(ಸ)ರ ಬಳಿಗೆ ತಲುಪುವುದಕ್ಕೆ ಮುಂಚಿತವಾಗಿ ಹಝ್ರತ್ ಅಬೂಬಕರ್(ರ)ರೊಡನೆ ಹೋರಾಡಬೇಕಾಗುತ್ತಿತ್ತು.

ಅದೇ ರೀತಿಯಲ್ಲಿ ಉಹದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ) ಶಹೀದ್ ಆದರು ಎಂಬ ವದಂತಿ ಹರಡಿದಾಗ ಮೊಟ್ಟಮೊದಲಾಗಿ ಹಝ್ರತ್ ಅಬೂಬಕರ್(ರ) ಜನಜಂಗುಳಿಯನ್ನು ಚೀರುತ್ತಾ ಹಝ್ರತ್ ಪೈಗಂಬರ್(ಸ)ರ ಬಳಿಗೆ ತಲುಪಿದರು.

ಹಝ್ರತ್ ಪೈಗಂಬರ್(ಸ)ರ ಸಮೀಪ ಆ ಸಮಯದಲ್ಲಿ ಕೇವಲ ಹನ್ನೊಂದು ಸಹಾಬಿ ಶ್ರೇಷ್ಠರು ಇದ್ದರು ಎಂದು ಹೇಳಲಾಗುತ್ತದೆ. ಅವರಲ್ಲಿ ಹಝ್ರತ್ ಅಬೂಬಕರ್(ರ), ಹಝ್ರತ್ ಸಅದ್, ಹಝ್ರತ್ ತಲ್‌ಹ, ಹಝ್ರತ್ ಝುಬೇರ್, ಹಝ್ರತ್ ಅಬೂದುಜಾನರ ಹೆಸರುಗಳು ಕೂಡ ಬರುತ್ತದೆ. ಉಹದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರ ಕಾವಲಿಗಾಗಿ ಕಣಿವೆಯಲ್ಲಿದ್ದ ಕೆಲವು ತ್ಯಾಗಶೀಲರಾದ ವ್ಯಕ್ತಿಗಳಲ್ಲಿ ಹಝ್ರತ್ ಅಬೂಬಕರ್(ರ) ಕೂಡ ಒಬ್ಬರಾಗಿದ್ದರು. ಖಂದಕ್ ಯುದ್ಧದಲ್ಲಿ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರ ಜೊತೆಜೊತೆಯಾಗಿದ್ದರು. ಹೊಂಡವನ್ನು ಅಗೆಯುವಾಗ ಬಟ್ಟೆಯಲ್ಲಿ ಮಣ್ಣನ್ನು ಎತ್ತಿ ಹಾಕುವವರಲ್ಲಿ ಅವರು ಇದ್ದರು.

ಹುದೈಬಿಯ ಸಂಧಿಯ ವೇಳೆ ಜೀವತ್ಯಾಗ ಮಾಡಲು ಕೂಡ ಸಿದ್ಧರೆಂದು ಹೇಳಿ ಬೈಅತ್ ಪ್ರತಿಜ್ಞೆ ಮಾಡಿಕೊಂಡವರಲ್ಲಿ ಹಝ್ರತ್ ಅಬೂಬಕರ್(ರ) ಕೂಡ ಇದ್ದರು. ಆದರೆ ಹುದೈಬಿಯ ಸಂಧಿಯ ವೇಳೆಯೂ ಒಪ್ಪಂದವನ್ನು ಬರೆಯಲಾದಾಗ, ಹಝ್ರತ್ ಅಬೂಬಕರ್(ರ) ತೋರಿಸಿದ ವಿಶ್ವಾಸಪರವಾದ ಧೈರ್ಯ, ಸ್ಥೈರ್ಯ, ಬುದ್ಧಿವಂತಿಕೆ, ಅನುಸರಣೆ ಮತ್ತು ಹಝ್ರತ್ ಪೈಗಂಬರ್(ಸ)ರೊಡನೆ ಇರುವ ಪ್ರೇಮದ ಮಾದರಿಯನ್ನು ಹಝ್ರತ್ ಉಮರ್(ರ) ತನ್ನ ಜೀವನ ಪೂರ್ತಿ ಮರೆಯಲಿಲ್ಲ.

ತಾಯಿಫ್ ಯುದ್ಧದಲ್ಲೂ ಹಝ್ರತ್ ಅಬೂಬಕರ್(ರ) ಇದ್ದರು. ಅವರ ಮಗನಾದ ಅಬ್ದುಲ್ಲಾಹ್ ಬಿನ್ ಅಬೂಬಕರ್(ರ) ಕೂಡ ಇದ್ದರು. ಹಝ್ರತ್ ಅಬೂಬಕರ್(ರ)ರ ಯುವ ಮಗನು ಇದರಲ್ಲಿ ಶಹೀದ್ ಆಗಿದ್ದರು. (ಸೀರತ್ ಸಯ್ಯಿದುನಾ ಸಿದ್ದೀಖೆ ಅಕ್ಬರ್(ರ), ಉಸ್ತಾದ್ ಉಮರ್ ಅಬುನ್ನಸರ್, ಉರ್ದು ಅನುವಾದ, ಪುಟ–367,354,369,376, ಮುಶ್ತಾಖ್ ಬುಕ್ ಕಾರ್ನರ್ ಲಾಹೋರ್) (ಸೀರತ್ ಸಯ್ಯಿದುನಾ ಸಿದ್ದೀಖೆ ಅಕ್ಬರ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಅಸ್ಸಲಾಬಿ ಅನುವಾದ, ಪುಟ–107, ಅಲ್‌ಫುರ್ಖಾನ್ ಟ್ರಸ್ಟ್ ಖಾನ್‌ಗಡ್ ಪಾಕಿಸ್ತಾನ್)

ಅನಂತರ ಹಝ್ರತ್ ಪೈಗಂಬರ್(ಸ) 30,000 ಸೈನಿಕರೊಂದಿಗೆ ತಬೂಕ್ ಯುದ್ಧಕ್ಕೆ ಹೊರಟಾಗ ಅವರು ಅನೇಕ ಸೇನಾಧಿಪತಿಗಳನ್ನು ನಿಶ್ಚಯಿಸಿದ್ದರು. ಅವರಿಗೆ ಧ್ವಜಗಳನ್ನು ಕೊಟ್ಟಿದ್ದರು. ಆ ಸಂದರ್ಭದಲ್ಲಿ ಅತಿ ದೊಡ್ಡ ಧ್ವಜವನ್ನು ಹಝ್ರತ್ ಅಬೂಬಕರ್(ರ)ರಿಗೆ ನೀಡಲಾಗಿತ್ತು. (ಸೀರತ್ ಸಯ್ಯಿದುನಾ ಸಿದ್ದೀಖೆ ಅಕ್ಬರ್, ಉಸ್ತಾದ್ ಉಮರ್ ಅಬುನ್ನಸರ್, ಉರ್ದು ಅನುವಾದ, ಪುಟ–381, ಮುಶ್ತಾಖ್ ಬುಕ್ ಕಾರ್ನರ್ ಲಾಹೋರ್)

ಹಝ್ರತ್ ಸಲ್ಮಾ ಬಿನ್ ಅಕೂಅ್ ವರದಿ ಮಾಡುತ್ತಾರೆ: ನಾನು ಹಝ್ರತ್ ಪೈಗಂಬರ್(ಸ)ರ ಜೊತೆಗೆ 7 ಯುದ್ಧಗಳಲ್ಲಿ ಭಾಗವಹಿಸಿದ್ದೆ. ಮತ್ತು ಹಝ್ರತ್ ಪೈಗಂಬರ್(ಸ) ಕಳುಹಿಸಿದ 9 ಯುದ್ಧಗಳಲ್ಲಿ ನನಗೆ ಭಾಗವಹಿಸಲು ಸಂದರ್ಭ ಸಿಕ್ಕಿತ್ತು. ಅವುಗಳಲ್ಲಿ ನಮ್ಮ ನೇತೃತ್ವ ಕೆಲವೊಮ್ಮೆ ಹಝ್ರತ್ ಅಬೂಬಕರ್(ರ) ವಹಿಸುತ್ತಿದ್ದರು. ಕೆಲವೊಮ್ಮೆ ಹಝ್ರತ್ ಉಸಾಮ ಬಿನ್ ಝೈದ್ ವಹಿಸುತ್ತಿದ್ದರು. (ಸೀರತ್ ಸಯ್ಯಿದುನಾ ಸಿದ್ದೀಖೆ ಅಕ್ಬರ್, ಉಸ್ತಾದ್ ಉಮರ್ ಅಬುನ್ನಸರ್, ಉರ್ದು ಅನುವಾದ, ಪುಟ–356, ಮುಶ್ತಾಖ್ ಬುಕ್ ಕಾರ್ನರ್ ಲಾಹೋರ್) ಮತ್ತು ಹಝ್ರತ್ ಪೈಗಂಬರ್(ಸ) ನಿಧನಗೊಂಡಾಗ, ಪೂರ್ತಿ ಅರಬ್ ದೇಶವೇ ಧರ್ಮತ್ಯಾಗ ಮಾಡಿದಂತೆ ಆಗಿತ್ತು. ಈ ಅವಸ್ಥೆಗಳಲ್ಲಿ ಹಝ್ರತ್ ಅಬೂಬಕರ್(ರ) ಧೈರ್ಯ ಮತ್ತು ಶೌರ್ಯದ ಅಭೂತಪೂರ್ವ ಮಾದರಿಯನ್ನು ತೋರಿಸಿದರು. ಅದರ ವಿಶದವಾದ ಪ್ರಸ್ತಾಪ ಹಿಂದೆ ನಡೆದಿದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಂದು ಬಾರಿ ಸತ್ಯನಿಷೇಧಿಗಳು ಹಝ್ರತ್ ಪೈಗಂಬರ್(ಸ)ರ ಕುತ್ತಿಗೆಗೆ ರುಮಾಲು ಹಾಕಿಕೊಂಡು ಜೋರಾಗಿ ಎಳೆಯಲು ಶುರು ಮಾಡಿದರು. ಈ ವಿವರ ಹಝ್ರತ್ ಅಬೂಬಕರ್(ರ)ರಿಗೆ ಗೊತ್ತಾದಾಗ, ಅವರು ಓಡುತ್ತಾ ಬಂದು ಸತ್ಯನಿಷೇಧಿಗಳಿಂದ ಹಝ್ರತ್ ಪೈಗಂಬರ್(ಸ)ರನ್ನು ಬಿಡಿಸಿಕೊಂಡು ಹೀಗೆ ಹೇಳಿದರು: ಎಲೈ ಜನರೇ, ನಿಮಗೆ ದೇವಭಯವಿಲ್ಲವೇ? ಅಲ್ಲಾಹನು ನನ್ನ ಪ್ರಭುವೆಂದು ಹೇಳಿದ ಮಾತ್ರಕ್ಕೆ ನೀವು ಒಬ್ಬ ವ್ಯಕ್ತಿಯನ್ನು ಹೊಡೆಯುತ್ತಿರುವಿರೋ? ಅವರು ನಿಮ್ಮಿಂದ ಏನಾದರೂ ಸ್ವತ್ತನ್ನು ಬೇಡುತ್ತಿಲ್ಲ. ಹೀಗಿರುವಾಗ ನೀವೇಕೆ ಅವರನ್ನು ಹೊಡೆಯುತ್ತೀರಿ?

ಸಹಾಬಿಯರು ಹೇಳುತ್ತಾರೆ: ನಾವು ನಮ್ಮ ಕಾಲದಲ್ಲಿ ಅತ್ಯಂತ ಧೈರ್ಯಶಾಲಿಯೆಂದು ಅಬೂಬಕರ್(ರ)ರನ್ನು ಭಾವಿಸುತ್ತಿದ್ದೆವು. ಏಕೆಂದರೆ, ಹಝ್ರತ್ ಪೈಗಂಬರ್(ಸ)ರನ್ನು ವಧಿಸಿದರೆ, ಇಸ್ಲಾಂ ಕೊನೆಗೊಳ್ಳುವುದು ಎಂದು ಶತ್ರುಗಳು ಅರಿತುಕೊಂಡಿದ್ದರು. ಯಾರಾದರೂ ಹಝ್ರತ್ ಪೈಗಂಬರ್(ಸ)ರ ಮೇಲೆ ಹಲ್ಲೆ ನಡೆಸಿದರೆ, ಅವರ ಮುಂದೆಯಾಗಿ ಇರಲಿಕ್ಕಾಗಿ ಹಝ್ರತ್ ಅಬೂಬಕರ್(ರ) ಸದಾ ಹಝ್ರತ್ ಪೈಗಂಬರ್(ಸ)ರ ಸಮೀಪ ನಿಲ್ಲುತ್ತಿದ್ದರು. ಹೀಗೆ ಬದ್ರ್ ಸಂದರ್ಭದಲ್ಲಿ ಅವಿಶ್ವಾಸಿಗಳೋಮದಿಗೆ ಯುದ್ಧವಾದಾಗ ಸಹಾಬಿಗಳು ತಮ್ಮಲ್ಲಿಯೇ ಸಮಾಲೋಚಿಸಿ ರಸೂಲುಲ್ಲಾಹ್(ಸ) ಅವರಿಗಾಗಿ ಒಂದು ಮೇಲ್ಛಾವಣಿಯನ್ನು (ಡೆಕ್) ಸಿದ್ಧಪಡಿಸಲಾಯಿತು. ಯಾ ರಸೂಲಲ್ಲಾಹ್! ನೀವು ಈ ಅಟ್ಟದ ಮೇಲೆ ಇರಿ ಮತ್ತು ನಮ್ಮ ಯಶಸ್ಸಿಗಾಗಿ ದುಆ ಮಾಡಿರಿ, ನಾವು ಶತ್ರುಗಳ ವಿರುದ್ಧ ಸ್ವತಃ ಹೋರಾಡುತ್ತೇವೆ. ಮತ್ತು ಯಾ ರಸೂಲಲ್ಲಾಹ್! ನಮ್ಮಲ್ಲಿ ಪ್ರಾಮಾಣಿಕತೆ ಕಂಡುಬಂದರೂ ಮದೀನಾದಲ್ಲಿ ಕುಳಿತವರು ನಮಗಿಂತ ಹೆಚ್ಚು ಪ್ರಾಮಾಣಿಕರು ಮತ್ತು ನಿಷ್ಠಾವಂತರು ಎಂದು ನಾವು ನಿಮಗೆ ದೃಢವಾದ ಭರವಸೆ ನೀಡುತ್ತೇವೆ. ಅವಿಶ್ವಾಸಿಗಳೊಂದಿಗೆ ಯುದ್ಧ ನಡೆಯುವುದು ಅವರಿಗೆ ತಿಳಿದಿರಲಿಲ್ಲ, ಇಲ್ಲದಿದ್ದರೆ ಅವರು ಯುದ್ಧದಲ್ಲಿ ಭಾಗವಹಿಸುತ್ತಿದ್ದರು.

"ಯಾ ರಸೂಲಲ್ಲಾಹ್!! ಒಂದು ವೇಳೆ ಅಲ್ಲಾಹನ ಇಚ್ಛೆಯಿಂದ ನಾವು ಈ ಯುದ್ಧದಲ್ಲಿ ಸೋತರೆ, ನಾವು ನಿಮಗಾಗಿ ಒಂದು ವೇಗದ ಒಂಟೆಯನ್ನು ಕಟ್ಟಿದ್ದೇವೆ ಮತ್ತು ನಿಮ್ಮ ಪಕ್ಕದಲ್ಲಿ ಅಬೂಬಕರ್ ಅವರನ್ನು ನಿಲ್ಲಿಸಿದ್ದೇವೆ. ಅವರಿಗಿಂತ ಧೈರ್ಯಶಾಲಿ ಮತ್ತು ಶೂರ ವ್ಯಕ್ತಿಯನ್ನು ನಾವು ನೋಡಿಲ್ಲ. ಯಾ ರಸೂಲಲ್ಲಾಹ್! ನೀವು ತಕ್ಷಣ ಈ ಒಂಟೆಯ ಮೇಲೆ ಅಬೂಬಕರ್ ಅವರೊಂದಿಗೆ ಮದೀನಾಕ್ಕೆ ಹೋಗಬೇಕು ಮತ್ತು ಅಲ್ಲಿಂದ ಹೊಸ ಸೈನ್ಯವನ್ನು ಕರೆತಂದು ಅವಿಶ್ವಾಸಿಗಳ ವಿರುದ್ಧ ಹೋರಾಡಬೇಕು, ಅದು ನಮಗಿಂತ ಹೆಚ್ಚು ಪ್ರಾಮಾಣಿಕ ಮತ್ತು ನಿಷ್ಠಾವಂತವಾಗಿರುತ್ತಾರೆ."

ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ: "ಈ ಘಟನೆಯಿಂದ ನಿರ್ಣಾಯಿಸಿಕೊಳ್ಳಿ ಅಬುಬಕರ್(ರ) ಎಂತಹ ತ್ಯಾಗ ನೀಡುವ ವ್ಯಕ್ತಿಯಾಗಿದ್ದರು ಎಂದು." (ಖುತ್ಬಾತ್ ಮಹ್ಮೂದ್, ಸಂಪುಟ–39, ಪುಟಗಳು 220–221)

ನಂತರ ಒಂದು ಸಂದರ್ಭದಲ್ಲಿ ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳಿದರು, "ಒಮ್ಮೆ ಕೆಲವರು ಸಹಾಬಿಗಳನ್ನು ಕೇಳಿದರು, ರಸೂಲುಲ್ಲಾಹ್(ಸ) ಅವರ ಕಾಲದಲ್ಲಿ ಅತ್ಯಂತ ಧೈರ್ಯಶಾಲಿ ಮತ್ತು ಶೂರ ವ್ಯಕ್ತಿ ಯಾರು? ಎಂದು. ಪ್ರಸ್ತುತ ಕಾಲದಲ್ಲಿ ಶಿಯಾ–ಸುನ್ನಿಗಳ ಪ್ರಶ್ನೆಯಂತೆಯೇ, ಆ ಕಾಲದಲ್ಲೂ ಜನರು ಯಾರೊಂದಿಗೆ ಸಂಬಂಧ ಹೊಂದಿದ್ದರೂ ಅವರನ್ನು ಹೊಗಳುತ್ತಿದ್ದರು. ಈ ಪ್ರಶ್ನೆಯನ್ನು ಸಹಾಬಿಯರಿಗೆ ಕೇಳಿದಾಗ, ನಮ್ಮಲ್ಲಿ ಅತ್ಯಂತ ಧೈರ್ಯಶಾಲಿ ಎಂದರೆ ರಸೂಲುಲ್ಲಾಹ್(ಸ) ಅವರ ಪರವಾಗಿ ನಿಲ್ಲುವ ವ್ಯಕ್ತಿ ಎಂದು ಅವರು ಉತ್ತರಿಸಿದರು. ಈ ಅಂಶವನ್ನು ಒಬ್ಬ ಯೋಧ ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯ. ಯಾರಿಗೆ ಯುದ್ಧ ಮತ್ತು ಯುದ್ಧದ ಅಪಾಯಗಳನ್ನು ತಿಳಿದಿರುತ್ತವೋ ಅವನಿಗೆ ಮಾತ್ರ ಧೈರ್ಯ ಎಂದರೇನು ಎಂದು ತಿಳಿದಿರುತ್ತದೆ. ಎಲ್ಲಿ ಅಪಾಯ ಹೆಚ್ಚಾಗಿರುತ್ತದೆಯೋ ಅಲ್ಲಿ ನಿಲ್ಲುವ ಧೈರ್ಯವನ್ನು ಅರ್ಥಮಾಡಿಕೊಳ್ಳಬಹುದು. ಆದ್ದರಿಂದ ಅವರು ಹೇಳುತ್ತಾರೆ, "ದೇಶ ಮತ್ತು ರಾಷ್ಟ್ರದ ಆತ್ಮವಾಗಿರುವ ವ್ಯಕ್ತಿಯನ್ನು ಶತ್ರು ಕೊಲ್ಲಲು ಬಯಸುತ್ತಾನೆ, ಆದ್ದರಿಂದ ಅವನ ಸಾವಿನೊಂದಿಗೆ ಎಲ್ಲಾ ಜಗಳಗಳು ಕೊನೆಗೊಳ್ಳುತ್ತವೆ." ಆದ್ದರಿಂದ, ಅಂತಹ ವ್ಯಕ್ತಿಯು ಯಾವ ಕಡೆ ನಿಂತರೂ, ಶತ್ರುಗಳು ಪೂರ್ಣ ಬಲದಿಂದ ದಾಳಿ ಮಾಡುತ್ತಾರೆ. ಅಂದರೆ, ಅದನ್ನು ರಕ್ಷಿಸಲು, ಆ ಕೇಂದ್ರವನ್ನು ರಕ್ಷಿಸಲು. ಧೈರ್ಯಶಾಲಿ ವ್ಯಕ್ತಿ ಮಾತ್ರ ನಿಲ್ಲಲು ಸಾಧ್ಯ. ತದನಂತರ ಸಹಾಬರವರು ಹಝ್ರತ್ ಅಬೂಬಕರ್(ರ) ಅವರ ಪಕ್ಕದಲ್ಲಿ ಆಗಾಗ್ಗೆ ನಿಲ್ಲುತ್ತಿದ್ದರು ಮತ್ತು ನಮ್ಮ ಪ್ರಕಾರ ಅವರು ಅತ್ಯಂತ ಧೈರ್ಯಶಾಲಿ ಎಂದು ಹೇಳಿದರು." (ತಫ್ಸೀರೆ ಕಬೀರ್, ಸಂಪುಟ–10, ಪುಟ–366)

ನಂತರ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಸೂರಾ ಬನೀ ಇಸ್ರಾಈಲ್‌ನ ಎರಡನೇ ಆಯತನ್ನು ವ್ಯಾಖ್ಯಾನಿಸುತ್ತ ಹೇಳುತ್ತಾರೆ: **"ಅಸ್ರ ಬಿಅಬ್ದಿ'** ಯಿಂದ ಸ್ಪಷ್ಟವಾಗುವುದೇನೆಂದರೆ ನಡೆಸುವವನು ಬೇರೆಯವನಾಗಿದ್ದಾನೆ. ಇದರಲ್ಲಿ ನಡೆಯುವವನ ತನ್ನ ಯಾವ ವ್ಯಯಕ್ತಿಕ ಅಧಿಕಾರವಿರಲಿಲ್ಲ. ಹಿಜ್ರತ್‌ನ ಘಟನೆಯೂ ಹಾಗೆಯೇ ಸಂಭವಿಸಿತು ಅಂದರೆ ರಸೂಲುಲ್ಲಾಹ್(ಸ) ರವರು ರಾತ್ರಿಯಲ್ಲಿ ಹೊರಟುಹೋದರು ಈ ರೀತಿಯಲ್ಲಿಯೇ ಹೊರಡುವಿಕೆಯು ಅವರ ಸ್ವಂತ ಇಚ್ಛೆಯಿಂದಿರಲಿಲ್ಲ, ಬದಲಿಗೆ ಆ ಸಮಯದಲ್ಲಿ ಅವರು ಬಲವಂತವಾಗಿ ಹೊರಡಿದರು, ಆಗ ಅವಿಶ್ವಾಸಿಗಳು ಅವರನ್ನು ಕೊಲ್ಲಲು ಅವರ(ರ) ಮನೆಗೆ ಮುತ್ತಿಗೆ ಹಾಕಿದರು. ಆದ್ದರಿಂದ, ಈ ಪ್ರಯಾಣದಲ್ಲಿ ಅವರ ಯಾವುದೇ ಸ್ವಂತ ಇಚ್ಛೆ ಇರಲಿಲ್ಲ, ಆದರೆ ಸರ್ವಶಕ್ತನಾದ ಅಲ್ಲಾಹನ ಚಿತ್ತವು ಅವರನ್ನು ಬಲವಂತಪಡಿಸಿತು. ಅಂದರೆ ರಸೂಲುಲ್ಲಾಹ್(ಸ) ಅವರನ್ನು ನಿಯಂತ್ರಿಸುವವನು, ಮತ್ತು ನಿಮ್ಮನ್ನು(ಸ) ಹೊರಗಡೆ ತೆಗೆಯುವವನು, ನಿಮ್ಮನ್ನು(ಸ) ಹಿಜ್ರತ್ ಕಡೆಗೆ ಸಾಗಿಸುವವನು ಸರ್ವಶಕ್ತನಾದ ಅಲ್ಲಾಹನಾಗಿದ್ದನು. ಹೀಗೆ ಅಲ್ಲಾಹನ ಚಿತ್ತದ ಕಾರಣ ರಸೂಲುಲ್ಲಾಹ್(ಸ)ರವರು ನಿಸ್ಸಹಾಯಕರಾಗಿ ಹೊರಟರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಯಾವ ರೀತಿಯಲ್ಲಿ ಜಿಬ್ರೀಲ್ ಬೈತುಲ್ ಮಖ್‌ದಸಿನ ಯಾತ್ರೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಜೊತೆಗೆ ಇದ್ದರೋ ಅದೇ ರೀತಿಯಲ್ಲಿ ಹಿಜ್ರತ್ ವೇಳೆಯಲ್ಲಿ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರ ಜೊತೆಗೆ ಇದ್ದರು. ಜಿಬ್ರೀಲ್ ಅಲ್ಲಾಹನಿಗೆ ಅಧೀನಗೊಂಡು ಕೆಲಸ ಮಾಡುತ್ತಿದ್ದ ಹಾಗೆಯೇ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರಿಗೆ ವಿಧೇಯರಾಗಿ ಇದ್ದರು. ಜಿಬ್ರೀಲ್ ಎಂಬ ಪದದ ಅರ್ಥ ಅಲ್ಲಾಹನ

ಪಹಿಲ್ವಾನ ಎಂದಾಗಿದೆ. ಹಝ್ರತ್ ಅಬೂಬಕರ್(ರ) ಕೂಡ ಅಲ್ಲಾಹನ ವಿಶಿಷ್ಟ ದಾಸರಾಗಿದ್ದರು. ಧರ್ಮಕ್ಕಾಗಿ ಒಬ್ಬ ನಿರ್ಭೀತ ಪಹಿಲ್ವಾನನ ಹಾಗೆ ಆಗಿದ್ದರು. (ತಫ್ಸೀರ್ ಕಬೀರ್, ಸಂಪುಟ–4, ಪುಟ–296)

ಒಂದೆಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸತ್ಯವೇನೆಂದರೆ, ಅಲ್ಲಾಹನ ವಚನದಲ್ಲಿ ವಿಶ್ವಾಸಗೊಂಡ ನಂತರ ಮನುಷ್ಯನ ಹೃದಯದಲ್ಲಿ ನಿರಾಶೆ ಉಂಟಾಗಲಾರದು. ಅಲ್ಲಾಹನ ಮೇಲೆ ಪರಿಪೂರ್ಣ ವಿಶ್ವಾಸವಿದ್ದರೆ ಎಂದಿಗೂ ನಿರಾಶೆ ಉಂಟಾಗದು. ಹಝ್ರತ್ ಪೈಗಂಬರ್(ಸ)ರ ಸ್ಥಿತಿಯನ್ನು ನೋಡಿರಿ, ಉದಾಹರಣೆಗೆ, ಸೌರ್ ಗುಹೆಯಲ್ಲಿ ಯಾವ ಪ್ರತೀಕ್ಷೆ ಬಾಕಿಯಿತ್ತು? ಹಝ್ರತ್ ಪೈಗಂಬರ್(ಸ) ರಾತ್ರಿಯ ಅಂಧಕಾರದಲ್ಲಿ ತನ್ನ ಮನೆಯನ್ನು ಬಿಟ್ಟು ಸೌರ್ ಗುಹೆಯಲ್ಲಿ ಅಡಗಿ ಕುಳಿತರು. ಪ್ರವೇಶದ್ವಾರ ದೊಡ್ಡದಾಗಿದ್ದ ಒಂದು ಗುಹೆಯಲ್ಲಿ ಆಗಿತ್ತು ಅದು. ಪ್ರತಿಯೊಬ್ಬ ವ್ಯಕ್ತಿ ಸುಲಭವಾಗಿ ಅದರೊಳಗೆ ಇಣುಕಿ ನೋಡಬಹುದಾಗಿತ್ತು ಮತ್ತು ಒಳಕ್ಕೆ ಜಿಗಿಯಬಹುದಾಗಿತ್ತು. ಒಬ್ಬರೇ ಸಂಗಡಿಗ ಅವರ ಜೊತೆಗಿತ್ತು. ಇಬ್ಬರೂ ಯಾವುದೇ ಆಯುಧವಿಲ್ಲದೆ, ಯಾವುದೇ ಶಕ್ತಿಯಿಲ್ಲದೇ ಇದ್ದರು. ಮಕ್ಕದ ಆಯುಧಧಾರಿತ ಜನರು ಹಝ್ರತ್ ಪೈಗಂಬರ್(ಸ)ರನ್ನು ಹುಡುಕುತ್ತಾ ಸೌರ್ ಗುಹೆಯ ಬಳಿಗೆ ತಲುಪಿದರು. ಹಝ್ರತ್ ಪೈಗಂಬರ್(ಸ) ಒಳಗೆ ಇದ್ದರೆ ಹಿಡಿಯಬಹುದಾಗಿದೆ. ಆದ್ದರಿಂದ ಬಾಗಿಕೊಂಡು ಒಂದು ಸಲ ಒಳಗೆ ನೋಡಬೇಕೆಂದು ಕೆಲವರು ಒತ್ತಾಯಪಡಿಸಿದ್ದರು. ಶತ್ರುಗಳನ್ನು ಇಷ್ಟೊಂದು ಹತ್ತಿರದಲ್ಲಿ ಕಂಡು ಹಝ್ರತ್ ಅಬೂಬಕರ್(ರ) ಅತ್ತುಬಿಟ್ಟರು. ಅವರು ಹೇಳಿದರು: ಯಾ ರಸೂಲಲ್ಲಾಹ್, ಶತ್ರುಗಳಂತು ಬಹಳ ಸಮೀಪಕ್ಕೆ ತಲುಪಿರುವರು. ಆಗ ಹಝ್ರತ್ ಪೈಗಂಬರ್(ಸ) ಬಹಳ ಆವೇಶದಿಂದ ಹೇಳಿದರು: **ಲಾ ತಹ್ಝನ್ ಇನ್ನಲ್ಲಾಹ ಮಅನಾ.** ಹೇ ಅಬೂಬಕರ್, ಏಕೆ ಭಯಪಡುತ್ತೀ? ಅಲ್ಲಾಹನು ನಮ್ಮ ಜೊತೆಗಿದ್ದಾನೆ. ಇಷ್ಟಾದ ಮೇಲೆ ಹಝ್ರತ್ ಪೈಗಂಬರ್(ಸ)ರನ್ನು ಕೊಲ್ಲಲು ಅಥವಾ ಬಂಧಿಸಲು ಎಷ್ಟು ಸಮಯ ಬೇಕಿತ್ತು? ಆದರೆ ಶತ್ರುಗಳು ಶಕ್ತಿಶಾಲಿಯಾಗಿದ್ದರೂ, ಸೈನಿಕರ ಜೊತೆಗೆ ಇದ್ದರೂ, ಆಯುಧಗಳು ಅವರ ಜೊತೆಗೆ ಇದ್ದರೂ, ಹಝ್ರತ್ ಪೈಗಂಬರ್(ಸ) ಕೇವಲ ಒಬ್ಬ ಸಂಗಡಿಗನ ಜೊತೆಗೆ ಯಾವುದೇ ಆಯುಧವಿಲ್ಲದೇ ಗುಹೆಯಲ್ಲಿ ಕುಳಿತುಕೊಂಡಿದ್ದರೂ ಇಷ್ಟೆಲ್ಲ ಶತ್ರುಗಳನ್ನು ನೋಡಿಯೂ ಹಝ್ರತ್ ಪೈಗಂಬರ್(ಸ) ಹೇಳುತ್ತಾರೆ: **ಲಾ ತಹ್ಝನ್ ಇನ್ನಲ್ಲಾಹ ಮಅನಾ.** ಶತ್ರುಗಳು ಶಕ್ತಿಶಾಲಿಯೆಂದು ನೀವೇಕೆ ಹೇಳುತ್ತೀರಿ? ಅವರು ದೇವನಿಗಿಂತಲೂ ಶಕ್ತಿಶಾಲಿಯೇ? ದೇವನು ನಮ್ಮ ಜೊತೆಗೆ ಇರುವನಾದರೆ, ಗಾಬರಿಗೊಳ್ಳುವ ಆವಶ್ಯಕತೆಯೇನಿದೆ? ಹಝ್ರತ್ ಪೈಗಂಬರ್(ಸ)ರ ಭಯ ಕೂಡ ತನಗಾಗಿ ಆಗಿರಲಿಲ್ಲ. ಹಝ್ರತ್ ಪೈಗಂಬರ್(ಸ)ರಿಗೆ ಆಗಿತ್ತು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಈ ಘಟನೆಯನ್ನು ಮುಂದಿರಿಸುತ್ತಾ, ಹಝ್ರತ್ ಅಬೂಬಕರ್(ರ) ಅವಿಶ್ವಾಸಿಯಾಗಿದ್ದರು ಎಂದು ಕೆಲವು ಶಿಯಾಗಳು ಹೇಳುತ್ತಾರೆ. ಆದರೆ ಚರಿತ್ರೆಯಲ್ಲಿ ಸ್ಪಷ್ಟವಾಗಿ ಬರೆಯಲಾಗಿದೆ. ಹಝ್ರತ್ ಪೈಗಂಬರ್(ಸ) **ಲಾ ತಹ್ಝನ್ ಇನ್ನಲ್ಲಾಹ ಮಅನಾ** ಎಂದು ಹೇಳಿದಾಗ, ಹಝ್ರತ್ ಅಬೂಬಕರ್(ರ) ಹೇಳಿದರು: ಯಾ ರಸೂಲಲ್ಲಾಹ್, ನಾನು ನನ್ನ ಜೀವಕ್ಕಾಗಿ ಹೆದರುತ್ತಿಲ್ಲ. ನಾನು ಕೊಲ್ಲಲ್ಪಟ್ಟರೆ ಒಬ್ಬ ವ್ಯಕ್ತಿ ಕೊಲ್ಲಲ್ಪಟ್ಟಂತೆ ಅಷ್ಟೇ. ಆದರೆ ನಾನು ನಿಮಗಾಗಿ ಹೆದರುತ್ತೇನೆ. ಏಕೆಂದರೆ, ನಿಮಗೆ ಏನಾದರೂ ಆದರೆ, ಸತ್ಯ ಲೋಕದಿಂದ ಅಳಿದು ಹೋಗುವುದು. (ಖುತ್ಬಾತೆ ಮಹ್ಮೂದ್, ಸಂಪುಟ–28, ಪುಟ–416–417)

ನಂತರ ಒಂದು ಸ್ಥಳದಲ್ಲಿ, ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ, ಇದು ಪ್ರವಾದಿಗಳಿಗೆ ವಿಶಿಷ್ಟವಲ್ಲ, ಆದರೆ ಅವರ ನಂತರವೂ ಆ ಸಮಯದಲ್ಲಿ ಅವರು ಮಾಡಿದ್ದನ್ನು ರದ್ದುಗೊಳಿಸಲು ಸಾಧ್ಯವಾಗದ ಜನರು ತಮ್ಮದೇ ಆದ ಕಾಲದಲ್ಲಿ ಇದ್ದಾರೆ.

ಉದಾಹರಣೆಗೆ, ಹಝ್ರತ್ ಅಬುಬಕರ್(ರ) ಅವರನ್ನು ತೆಗೆದುಕೊಳ್ಳಿ, ಹಝ್ರತ್ ಅಬೂಬಕರ್(ರ) ಅವರ ಬಗ್ಗೆ ಯಾರೂ ಹೇಳಲು ಸಾಧ್ಯವಿಲ್ಲ, ಅವರು ಕೂಡ ಒಂದು ಹಂತದಲ್ಲಿ ತಮ್ಮ ಸಮುದಾಯವನ್ನು ಮುನ್ನಡೆಸುತ್ತಾರೆ. ಅವರು ದುರ್ಬಲ ಸ್ವಭಾವದ, ಶಾಂತಿಯುತ ಮತ್ತು ಸೌಮ್ಯ ಹೃದಯದ ಜನನ ಎಂದು ಸಾಮಾನ್ಯವಾಗಿ ನಂಬಲಾಗಿತ್ತು. ಪ್ರವಾದಿಯವರ ಕಾಲದಲ್ಲಿ ನಡೆದ ಯುದ್ಧಗಳನ್ನು ನೋಡಿ. ರಸೂಲುಲ್ಲಾಹ್(ಸ) ಅವರು ಯಾವುದೇ ಪ್ರಮುಖ ಯುದ್ಧದಲ್ಲಿಯೂ ಸಹ ಹಝ್ರತ್ ಅಬೂಬಕರ್(ರ) ಅವರನ್ನು ಸೈನ್ಯದ ಕಮಾಂಡರ್ ಆಗಿ ಮಾಡಲಿಲ್ಲ. ನಿಸ್ಸಂದೇಹವಾಗಿ, ಅವರನ್ನು ಕೆಲವು ಚಿಕ್ಕ ಚಿಕ್ಕ ಯುದ್ಧಗಳಲ್ಲಿ ಅಧಿಕಾರಿಯನ್ನಾಗಿ ಕಳುಹಿಸಲ್ಪಟ್ಟರು ಆದರೆ ದೊಡ್ಡ ಯುದ್ಧಗಳಲ್ಲಿ, ಇತರ ಜನರನ್ನು ಯಾವಾಗಲೂ ಸೇನಾಧಿಪತಿಯನ್ನಾಗಿ ಕಳುಹಿಸಲಾಗುತ್ತಿತ್ತು. ಅಂತೆಯೇ, ನಿಮ್ಮನ್ನು ಇತರ ಕಾರ್ಯಗಳ ಉಸ್ತುವಾರಿ ವಹಿಸಲಾಗುತ್ತಿರಲಿಲ್ಲ. ಉಳಿದದ್ದು ಪವಿತ್ರ ಖುರ್ಆನ್‌ನ ಬೋಧನೆ ಅಥವಾ ನ್ಯಾಯಾಂಗದ ಕೆಲಸ ಇತ್ಯಾದಿಗಳನ್ನು ಸಹ ನಿಮಗೆ ವಹಿಸಲಾಗಿಲ್ಲ. (ಅದನ್ನು ಹಝ್ರತ್ ಅಬುಬಕರ್(ರ) ಅವರಿಗೆ ವಹಿಸಲಾಗಿಲ್ಲ) ಆದರೆ ಅಬುಬಕರ್(ರ) ಅವರ ಸಮಯ ಬಂದಾಗ ಅಬುಬಕರ್ ಮಾಡುವುದನ್ನು ಮತ್ತಿತರರು ಮಾಡಲು ಸಾಧ್ಯವಿಲ್ಲ ಎಂದು ರಸೂಲುಲ್ಲಾಹ್(ಸ) ಅವರು ತಿಳಿದಿದ್ದರು. ಆದ್ದರಿಂದ, ರಸೂಲುಲ್ಲಾಹ್(ಸ) ನಿಧನ ಹೊಂದಿದಾಗ ಮತ್ತು ಮುಸ್ಲಿಮರಲ್ಲಿ ಖಲೀಫ ಯಾರಾಗಬೇಕೆಂಬುದರ ಬಗ್ಗೆ ವಿವಾದ ಉಂಟಾದಾಗ, ಆ ಸಮಯದಲ್ಲಿ ಹಝ್ರತ್ ಅಬೂಬಕರ್(ರ) ಅವರು ತಮ್ಮ ಮನಸ್ಸಿನಲ್ಲಿ ಅವರು ಖಲೀಫರಾಗುತ್ತಾರೆ ಎಂದು ಇರಲಿಲ್ಲ. ಹಝ್ರತ್ ಉಮರ್(ರ) ಮೊದಲಾದವರು ಮಾತ್ರ ಅದಕ್ಕೆ ಅರ್ಹರು ಎಂದು ಅವರು ಭಾವಿಸಿದ್ದರು. ಅನ್ಸಾರರಲ್ಲಿ ಮೂಡಿದ ಉತ್ಸಾಹ ಮತ್ತು ಅವರಲ್ಲಿಯೇ ಖಲೀಫ ಆಗಬೇಕೆಂದು ಅವರು ಬಯಸಿದ್ದರು ಏಕೆಂದರೆ ಅವರು ಇಸ್ಲಾಂ ಧರ್ಮಕ್ಕಾಗಿ ನಾವು ತ್ಯಾಗ ಮಾಡಿದ್ದೇವೆ ಎಂದು ಭಾವಿಸಿದರು ಮತ್ತು ಈಗ ಅನ್ಸಾರರು ಖಿಲಾಫತ್ ಹಕ್ಕು ನಮ್ಮದೇ ಎಂದು ಭಾವಿಸಿದರು ಮತ್ತೊಂದೆಡೆ ಮುಹಾಜಿರ್‌ಗಳು (ವಲಸಿಗರು) ಖಲೀಫ ನಮ್ಮಲ್ಲಿ ಆಗಬೇಕು ಎಂದು ಹೇಳುತ್ತಿದ್ದರು. ಹೀಗೆ ರಸೂಲುಲ್ಲಾಹ್(ರ) ರವರ ಮರಣದ ನಂತರ ವಿವಾದವು ಹುಟ್ಟಿಕೊಂಡಿತು. ಖಲೀಫರು ಅನ್ಸಾರ್‌ಗಳಿಂದ ಆಗಬೇಕು ಎಂದು ಅನ್ಸಾರ್ ಹೇಳುತ್ತಿದ್ದರು ಮತ್ತು ಇಲ್ಲ ಕಲೀಫರು ನಮ್ಮಲ್ಲಿ ಆಗಬೇಕು ಎಂದು ಮುಹಾಜಿರ್ (ವಲಸಿಗರು) ಹೇಳಿದರು. ಅಂತಿಮವಾಗಿ, ಅನ್ಸಾರ್‌ಗಳ ಕಡೆಯಿಂದ ವಿವಾದವು ವಲಸಿಗರಿಂದ ಒಬ್ಬ ಖಲೀಫ ಮತ್ತು ಅನ್ಸಾರ್‌ನಿಂದ ಒಬ್ಬ ಖಲೀಫ ಆಗಬೇಕು ಎಂದು ಕೊನೆಗೊಂಡಿತು. ವಿವಾದ ಬಗೆಹರಿಸಲು ಸಭೆ ಕರೆಯಲಾಗಿತ್ತು. ಹಝ್ರತ್ ಉಮರ್(ರ.ಅ) ರವರು ಹೇಳುವಂತೆ ಆ ಸಮಯದಲ್ಲಿ ಹಝ್ರತ್ ಅಬುಬಕರ್(ರ) ಅವರು ಒಳ್ಳೆಯವರು ಮತ್ತು ಉದಾತ್ತರು ಎಂದು ನಾನು ಅರ್ಥಮಾಡಿಕೊಂಡಿದ್ದೇನೆ, ಆದರೆ ಈ ಸಮಸ್ಯೆಯನ್ನು ಪರಿಹರಿಸುವುದು ಅವರ ಕೆಲಸವಲ್ಲ. (ಅವರಿಗೆ ಇದು ತುಂಬಾ ಕಷ್ಟದ ಕೆಲಸ) ಯಾರಾದರೂ ಈ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾದರೆ ಅದು ನಾನೇ ಎಂದು ಹಝ್ರತ್ ಉಮರ್(ರ) ಮನಸ್ಸಿನಲ್ಲಿ ಹೇಳಿಕೊಂಡಿದ್ದರು. ಇಲ್ಲಿ ಶಕ್ತಿಯ ಕೆಲಸವಾಗಿದೆ. ಮೃದುತ್ವ ಮತ್ತು ಪ್ರೀತಿಯ ಕೆಲಸವಲ್ಲ. (ಮತ್ತು ಹಝ್ರತ್ ಅಬೂಬಕರ್(ರ) ಅವರು ಸೌಮ್ಯತೆ ಮತ್ತು ಪ್ರೀತಿಯನ್ನು ತೋರಿಸುವವರು) ಹೀಗಾಗಿ ಹಝ್ರತ್ ಉಮರ್(ರ) ಹೇಳುತ್ತಾರೆ, ನಾನು ಖುರೈಶ್‌ಗಳಿಂದ ಖಲೀಫರಾಗಬೇಕು ಮತ್ತು ಒಬ್ಬ ಖಲೀಫ ಅನ್ಸಾರ್‌ಗಳಿಂದ ಮತ್ತು ಒಬ್ಬ ಖಲೀಫ ಮುಹಾಜಿರ್‌ಗಳಿಂದ ಆಗಬೇಕು ಎಂದ ವಾದವು ತಪ್ಪು ಎಂದು ಸಾಬೀತುಪಡಿಸಲು ಗಾಂಭೀರ್ಯದಿಂದ ಯೋಚಿಸಿ ಪುರಾವೆಗಳನ್ನು ಹುಡುಕಲು ಚಿಂತಿಸಿದೆ. ಹಝ್ರತ್ ಉಮರ್ ಹೇಳುತ್ತಾರೆ: ನಾನು ಹಲವು ವಾದಗಳನ್ನು ಆಲೋಚಿಸಿದ ನಂತರ ಈ ವಿವಾದವನ್ನು ಬಗೆಹರಿಸಲು ನಡೆದ ಸಭೆಗೆ ಹೋಗಿದ್ದೆ. ಹಝ್ರತ್ ಅಬೂಬಕರ್(ರ) ಕೂಡ ನನ್ನ ಜೊತೆಗಿದ್ದರು. ನಾನು ಒಂದು ಭಾಷಣವನ್ನು ಮಾಡಲು ಮತ್ತು ನಾನು ಯೋಚಿಸಿದ ವಾದಗಳನ್ನು ಜನರಿಗೆ ಮನವರಿಕೆ ಮಾಡಲು ಬಯಸಿದೆ. ಹಝ್ರತ್ ಅಬೂಬಕ್ಕರ್ ಅವರಿಗೆ ಈ ಸಭೆಯಲ್ಲಿ ಮಾತನಾಡುವ ಧೈರ್ಯ ಮತ್ತು ಘನತೆ ಇಲ್ಲ ಎಂದು ನಾನು ಭಾವಿಸಿದೆ, ಆದರೆ ನಾನು ಎದ್ದು ನಿಲ್ಲಲು ಹೊರಟಿದ್ದೆ (ಹಝ್ರತ್ ಉಮರ್(ರ) ಹೇಳುತ್ತಾರೆ ನಾನು ಎದ್ದು ನಿಲ್ಲ ಬೇಕಾದರೆ) ಹಝ್ರತ್ ಅಬೂಬಕರ್(ರ) ಕೋಪದಿಂದ ನನ್ನ ಕೈಯನ್ನು ಹೊಡೆದು ನನಗೆ ಹೇಳಿದರು. ಕುಳಿತುಕೊಳ್ಳಿ ಮತ್ತು ಅವರೇ ಸ್ವತಃ ಎದ್ದು ನಿಂತು ಮಾತನಾಡಲು ಪ್ರಾರಂಭಿಸಿದರು. ಹಝ್ರತ್ ಉಮರ್(ರ) ಹೇಳುತ್ತಾರೆ ಅಲ್ಲಾಹನಆಣೆ! ಹಝ್ರತ್ ಅಬೂಬಕರ್(ರ) ನಾನು ಯೋಚಿಸಿದ ಎಲ್ಲಾ ವಾದಗಳನ್ನು ವಿವರಿಸಿದರು, ಮತ್ತು ನಂತರ ಅವರು ಅನ್ಸಾರರ ಹೃದಯಗಳನ್ನು ತೃಪ್ತಿಪಡಿಸುವವರೆಗೆ ಮತ್ತು ಅವರು ಖಿಲಾಫತ್–ಎ–ಮುಹಾಜಿರೀನ್ ತತ್ವವನ್ನು ಸ್ವೀಕರಿಸುವವರೆಗೆ ಇನ್ನೂ ಅನೇಕ ವಾದಗಳನ್ನು ವಿವರಿಸಿದರು.

ಇದೇ ಅಬುಬಕರ್ ಅವರ ಬಗ್ಗೆ ಹಝ್ರತ್ ಉಮರ್(ರ) ಸ್ವತಃ ವಿವರಿಸುತ್ತಾರೆ, ಅವರು ಒಮ್ಮೆ ಹಝ್ರತ್ ಅಬೂಬಕರ್(ರ) ಅವರ ಬಟ್ಟೆಗಳನ್ನು ಮಾರುಕಟ್ಟೆಯಲ್ಲಿ ವಿವಾದದಿಂದಾಗಿ ಹರಿದು ಹಾಕಿದರು ಮತ್ತು ಅವರನ್ನು ಕೊಲ್ಲಲು ಸಿದ್ಧರಾಗಿದ್ದರು. ಹಝ್ರತ್ ಅಬುಬಕರ್(ರ) ಮೃದು ಹೃದಯವನ್ನು ಹೊಂದಿದ್ದರು ಎಂದು ರಸೂಲುಲ್ಲಾಹ್(ಸ) ಹೇಳುತ್ತಿದ್ದ ಅದೇ ಅಬುಬಕರ್(ರ) ಆಗಿದ್ದರು, ಆದರೆ ಪ್ರವಾದಿ(ಸ) ಅವರ ನಿಧನದ ಸಮಯ ಸಮೀಪಿಸಿದಾಗ, ಹಝ್ರತ್ ಪೈಗಂಬರ್(ಸ) ತನ್ನ ನಿಧನಕ್ಕೆ ಮುಂಚಿತವಾಗಿ ಹಝ್ರತ್ ಆಯಿಶ(ರ)ರೊಡನೆ ಹೀಗೆ ಹೇಳಿದರು: ಜನರು ನನ್ನ ನಂತರ ಅಬೂಬಕರ್(ರ)ರನ್ನು ಖಲೀಫರನ್ನಾಗಿ ಮಾಡಬೇಕೆಂದು ಜನರೊಡನೆ ಹೇಳಲು ಪದೇ ಪದೇ ನಾನು ಬಯಸುತ್ತಿದ್ದೆ. ಆದರೆ ನಾನು ಹಾಗೆ ಹೇಳಲಿಲ್ಲ. ಏಕೆಂದರೆ, ನನ್ನ ನಿಧನದ ನಂತರ ಅಲ್ಲಾಹನು ಮತ್ತು ಅವನ ಸತ್ಯವಿಶ್ವಾಸಿಗಳಾದ ದಾಸರು ಅಬೂಬಕರ್(ರ)ರನ್ನು ಅಲ್ಲದೇ ಬೇರೆ ಯಾರನ್ನೂ ಖಲೀಫರನ್ನಾಗಿ ಮಾಡಲಾರರು ಎಂದು ನನ್ನ ಮನಸ್ಸಿಗೆ ಗೊತ್ತಿತ್ತು. ಅನಂತರ ಹಾಗೆಯೇ ಆಯಿತು. ಆದ್ದರಿಂದ ನೀವು ಖಲೀಫರಾಗಿ ಆಯ್ಕೆಯಾದರು. ಅವರು ಬಹಳ ಸಹೃದಯ ಮತ್ತು ಸೌಮ್ಯ ಸ್ವಭಾವದ ವ್ಯಕ್ತಿಯಾಗಿದ್ದರು ಎಷ್ಟರ ಮಟ್ಟಿಗೆ ಸೌಮ್ಯ ಸ್ವಭಾವದವರಾಗಿದ್ದರು ಎಂದರೆ ಒಮ್ಮೆ ಹಝ್ರತ್ ಉಮರ್(ರ) ಅವರನ್ನು ಕೊಲ್ಲಲು ಮಾರುಕಟ್ಟೆಯಲ್ಲಿ ಮುಂದೆ ಬಂದರು ಮತ್ತು ಅವರ ಬಟ್ಟೆಗಳನ್ನು ಹರಿದು ಹಾಕಿದರು, ಆದರೆ ಈ ರೀತಿಯ ಸೌಮ್ಯತೆ ಹೊಂದಿರುವ ಅಬೂಬಕರ್ ಅವರಿಗೆ ಎಂತಹ ಪರಿಸ್ಥಿತಿ ಎದುರಾಯಿತು ಎಂದರೆ ಒಮ್ಮೆ ಹಝ್ರತ್ ಉಮರ್(ರ) ರವರು ಹಝ್ರತ್ ಅಬುಬಕರ್(ರ)ರವರ ಬಳಿ ಬಂದು ಹೀಗೆ ಮನವಿ ಮಾಡುತ್ತ ಹೇಳಿದರು: ಎಲ್ಲಾ ಅರಬ್ಬರು ತಿರುಗಿಬಿದ್ದಿದ್ದಾರೆ ಕೇವಲ ಮದೀನಾ, ಮೆಕ್ಕಾ ಮತ್ತು ಸಣ್ಣ ಪಟ್ಟಣದಲ್ಲಿ ಮಾತ್ರ ಜಮಾಅತ್‌ನಿಂದ ನಮಾಝ್ ನಿರ್ವಹಿಸಲಾಗುತ್ತಿದೆ. ಉಳಿದವರು ನಮಾಝ್ ನಿರ್ವಹಿಸುತ್ತಿದ್ದಾರೆ ಆದರೆ ಒಬ್ಬರ ಹಿಂದೆ ಒಬ್ಬರು ನಮಾಝ್ ನಿರ್ವಹಿಸಲು ಸಿದ್ಧರಿಲ್ಲ ಮತ್ತು ಯಾರ ಮಾತನ್ನೂ ಕೇಳಲು ಸಿದ್ಧರಿಲ್ಲ ಮತ್ತು ಭಿನ್ನಾಭಿಪ್ರಾಯಗಳು ಬೆಳೆದಿದೆ. ಐದು ಆರು ತಿಂಗಳ ಕಾಲ ಮುಸ್ಲಿಮರಾಗಿರುವ ಅರೇಬಿಯಾದ ಅಜ್ಞಾನಿಗಳು ಝಕಾತ್ ಅನ್ನು ಬಿಟ್ಟುಕೊಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಹಝ್ರತ್ ಉಮರ್(ರ) ಹೇಳಿದರು ಈ ಜನರಿಗೆ ಝಕಾತ್ ಸಮಸ್ಯೆಯು ಅರ್ಥವಾಗುತ್ತಿಲ್ಲ, ಆದ್ದರಿಂದ ಒಂದು ಅಥವಾ ಎರಡು ವರ್ಷಗಳವರೆಗೆ ಅವರಿಗೆ ಝಕಾತ್ ಅನ್ನು ಮನ್ನಾ ಮಾಡಿದರೆ ತಪ್ಪೇನು? ಯಾವಾಗಲೂ ಕೈಯಲ್ಲಿ ಕತ್ತಿ ಹಿಡಿದು ನಿಲ್ಲುವ ಉಮರ್, ಏನಾದರೂ ಸಂಭವಿಸಿದಾಗ, ಯಾ ರಸೂಲಲ್ಲಾಹ್ ಆದೇಶವಿದ್ದರೆ, ನಾನು ಅವನ ಕುತ್ತಿಗೆಯನ್ನು ತೆಗೆಯುತ್ತೇನೆ ಎಂದು ಹೇಳುತ್ತಿದ್ದವನು ಆ ಜನರಿಂದ ಎಷ್ಟು ಭಯಭೀತನಾಗುತ್ತಾನೆ ಎಂದರೆ ಅಬುಬಕರ್(ರ) ಅವರ ಬಳಿಗೆ ಬಂದು ಅಜ್ಞಾನಿಗಳನ್ನು ಸ್ವಲ್ಪ ಸಮಯದವರೆಗೆ ಕ್ಷಮಿಸಲು ವಿನಂತಿಸುತ್ತಾರೆ. ನಾವು ಅವರನ್ನು ಕ್ರಮೇಣ ಅರ್ಥಮಾಡಿಸುತ್ತೇವೆ. ಆದರೆ ಹಝ್ರತ್ ಉಮರ್(ರ) ಹೇಳುವಷ್ಟು ಕೋಮಲ ಹೃದಯವುಳ್ಳ ಆ ಅಬೂಬಕರ್ ಅವರನ್ನು ನಾನು ಒಮ್ಮೆ ಕೊಲ್ಲಲು ಸಿದ್ಧನಾಗಿದ್ದೆ ಮತ್ತು ಅವರ ಬಟ್ಟೆಗಳನ್ನು ಮಾರುಕಟ್ಟೆಯಲ್ಲಿ ಹರಿದು ಹಾಕಿದೆ. ಆ ವೇಳೆ

ಅವರು ಉಮರ್‌ರನ್ನು ತೀವ್ರ ಕೋಪದಿಂದ ನೋಡಿದರು, ಅಂದರೆ ದಂಗೆ ಮಾಡುವವರಿಗೆ ಏನೂ ಹೇಳಬಾರದು, ಎರಡು ವರ್ಷಗಳವರೆಗೆ ಝಕಾತ್ ತೆಗೆದುಕೊಳ್ಳಬೇಡಿ ಎಂದು ಹಝ್ರ‌ತ್ ಉಮರ್(ರ) ಹೇಳಿದಾಗ. ಹಝ್ರ‌ತ್ ಅಬೂಬಕರ್(ರ) ಅವರು ಉಮರ್(ರ) ಅವರನ್ನು ತೀವ್ರ ಕೋಪದಿಂದ ನೋಡಿ ಹೇಳಿದರು; ಉಮರ್, ರಸೂಉಲ್ಲಾಹ್(ಸ) ಅವರು ಮಾಡದ ಕೆಲಸವನ್ನು ಮಾಡಲು ನೀವು ಒತ್ತಾಯಿಸುತ್ತಿದ್ದೀರಿ. ಹಝ್ರ‌ತ್ ಉಮರ್(ರ) ಇದು ಸರಿ ಎಂದು ಹೇಳಿದರು, ಆದರೆ ಈ ಜನರು ಹಸೀಸುಲ್–ಅಹ್ದ್ ಆಗಿದ್ದಾರೆ. ಶತ್ರುಗಳ ಸೈನ್ಯವು ಮದೀನಾದ ಗೋಡೆಗಳನ್ನು ತಲುಪಿದೆ. ಈ ಜನರು ಹೆಚ್ಚುತ್ತಲೇ ಇದ್ದು ದೇಶದಲ್ಲಿ ರಾಜರ ಸಾಮ್ರಾಜ್ಯದ ಸ್ಥಿತಿ ಉದ್ಭವಿಸುವುದು ಒಳ್ಳೆಯದೇ ಅಥವಾ ಅವರಿಗೆ ಒಂದು ಅಥವಾ ಎರಡು ವರ್ಷಗಳ ಕಾಲ ಝಕಾತ್‌ನಿಂದ ವಿನಾಯಿತಿ ನೀಡುವುದು ಸೂಕ್ತವೇ? ಅದಕ್ಕೆ ಹಝ್ರ‌ತ್ ಅಬೂಬಕರ್(ರ) ಹೇಳಿದರು: ಅಲ್ಲಾಹನಆಣೆ! ಶತ್ರುಗಳು ಮದೀನಾವನ್ನು ಪ್ರವೇಶಿಸಿ ಮದೀನದ ಬೀದಿಗಳಲ್ಲಿ ಮುಸ್ಲಿಮರನ್ನು ಕೊಂದರೂ ಮತ್ತು ಮಹಿಳೆಯರ ದೇಹವನ್ನು ನಾಯಿಗಳೊಂದಿಗೆ ಎಳೆದೊಯ್ದರೂ ನಾನು ಅವರಿಗೆ ಝಕಾತ್ ಅನ್ನು ಕ್ಷಮಿಸುವುದಿಲ್ಲ. ಅಲ್ಲಾಹನಆಣೆ! ರಸೂಲುಲ್ಲಾಹ್(ಸ.ಅ)ರ ಕಾಲದಲ್ಲಿ ಈ ಜನರು ಹಗ್ಗದ ತುಂಡಾದರೂ ಝಕಾತ್ ಆಗಿ ನೀಡುತ್ತಿದ್ದರೆ, ನಾನು ಖಂಡಿತವಾಗಿಯೂ ಅವರಿಂದ ಅದನ್ನು ಸ್ವೀಕರಿಸುತ್ತೇನೆ.

ಮತ್ತೆ ಅವರು(ರ) ಹೇಳಿದರು: ಉಮರ್, ನೀವು ಭಯಭೀತರಾಗಿದ್ದಲ್ಲಿ, ಖಂಡಿತವಾಗಿಯೂ ಇಲ್ಲಿಂದ ಹೊರಟು ಹೋಗಿ. ನಾನು ಈ ಜನರೊಂದಿಗೆ ಏಕಾಂಗಿಯಾಗಿ ಹೋರಾಡುತ್ತೇನೆ ಮತ್ತು ಅವರು ತಮ್ಮ ದುಷ್ಟತನದಿಂದ ಹೊರಬರುವವರೆಗೂ ನಿಲ್ಲುವುದಿಲ್ಲ. ತದನಂತರ ಯುದ್ಧ ನಡೆದು ವಿಜಯಿಯಾದರು ಅಂದರೆ ಹಝ್ರ‌ತ್ ಅಬೂಬಕರ್(ರ) ವಿಜಯಶಾಲಿಯಾದರು ಮತ್ತು ಅವರ ಮರಣದ ಮೊದಲು ಮತ್ತೊಮ್ಮೆ ಇಡೀ ಅರೇಬಿಯಾವನ್ನು ತನ್ನ ಹಿಡಿತಕ್ಕೆ ತಂದರು. ಹಝ್ರ‌ತ್ ಅಬೂಬಕರ್(ರ) ತನ್ನ ಜೀವಿತದಲ್ಲಿ ಮಾಡಿದ ಕೆಲಸಗಳು ಅವರದ್ದೇ ಪಾಲಾಗಿತ್ತು. ಬೇರೆ ಯಾವನೇ ವ್ಯಕ್ತಿಗೆ ಆ ಕೆಲಸಗಳನ್ನು ಮಾಡಲು ಸಾಧ್ಯವಿರಲಿಲ್ಲ.
(ಖುತ್ಬಾತ್ ಮಹ್ಮೂದ್, ಸಂಪುಟ–30, ಪುಟಗಳು 198–200 ರಿಂದ ಆಯ್ದುಕೊಳ್ಳಲಾಗಿದೆ)

ಹಝ್ರ‌ತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ, ಮಕ್ಕಾದ ನಾಯಕರು ಜನರಲ್ಲಿ ಗೌರವ ಮತ್ತು ಹಿರಿಮೆಯನ್ನು ಹೊಂದಿದ್ದರು, ಜನರು ಅವರ ಮುಂದೆ ಮಾತನಾಡಲು ಹೆದರುತ್ತಿದ್ದರು ಮತ್ತು ಅವರ ದಯೆಗಳು ಜನರ ಮೇಲೆ ಹೇರಳವಾಗಿತ್ತು. ಯಾವ ವ್ಯಕ್ತಿಯು ಅವರ ಮುಂದೆ ಕಣ್ಣು ಎತ್ತುತ್ತಿರಲಿಲ್ಲ. ಅವರ ಈ ಘನತೆಯು ಹುದೈಬಿಯಾ ಸಂಧಿಯ ಸಂದರ್ಭದಲ್ಲಿ ಕಾಣಿಸುತ್ತದೆ. ಹುದೈಬಿಯಾದ ಸಂಧಿಯ ಸಂದರ್ಭದಲ್ಲಿ ರಸೂಲುಲ್ಲಾಹ್(ಸ) ಅವರೊಂದಿಗೆ ಮಾತನಾಡಲು ಮಕ್ಕಾದ ಜನರು ಕಳುಹಿಸಿದ ಮುಖ್ಯಸ್ಥನು ರಸೂಲುಲ್ಲಾಹ್(ಸ) ಅವರ ಕೂದಲನ್ನು ಮುಟ್ಟಿದನು ಇದನ್ನು ನೋಡಿದ ಸಹಾಬಿಯೊಬ್ಬರು ಕತ್ತಿಯ ಹಿಡಿಯಿಂದ ಅವರ ಕೈಗೆ ಬಲವಾಗಿ ಹೊಡೆದು ನೀನು ನಿನ್ನ ಅಶುದ್ಧ ಕೈಗಳಿಂದ ರಸೂಲುಲ್ಲಾಹ್(ಸ) ಅವರ ಅನುಗ್ರಹದಾಯಕ ಕೂದಲನ್ನು ಮುಟ್ಟಬೇಡ ಎಂದು ಹೇಳಿದರು. ಕತ್ತಿ ಹಿಡಿಕೆಯಿಂದ ನನ್ನ ಕೈಗೆ ಹೊಡೆದವನು ಯಾರೆಂದು ನೋಡಲು ಅವನು ತನ್ನ ಕಣ್ಣುಗಳನ್ನು ಮೇಲಕ್ಕೆತ್ತಿ ನೋಡಿದನು. ಸಹಚರರು ತಮ್ಮನ್ನು ತಾವು ಕವಚವನ್ನು ಧರಿಸಿದ್ದರಿಂದ, ಅವರ ಕಣ್ಣುಗಳು ಮತ್ತು ಅವರ ಉಂಗುರಗಳು ಮಾತ್ರ ಅವರಿಗೆ ಗೋಚರಿಸುತ್ತಿತ್ತು. ಸ್ವಲ್ಪ ಹೊತ್ತು ಎಚ್ಚರಿಕೆಯಿಂದ ನೋಡಿದನು. ಆಗ ಅವನು ಹೇಳಿದನು, ನೀನು ಅವನಲ್ಲವೇ? ಅದಕ್ಕೆ ಅವರು ಹೌದು ಎಂದರು. "ಇಂಥ ಸಂದರ್ಭದಲ್ಲಿ ನಿನ್ನ ಕುಟುಂಬದವರವನ್ನು ಇಂಥ ಸಮಸ್ಯೆಯಿಂದ ಪಾರುಮಾಡಿದ್ದು, ಇಂಥ ಸಂದರ್ಭದಲ್ಲಿ ನಿನಗೆ ಇಂಥ ಉಪಕಾರ ಮಾಡಿದ್ದು ನಿನಗೆ ಗೊತ್ತಿಲ್ಲವೇ?" ಎಂದನು. ನೀನು ನನ್ನ ಮುಂದೆ ಮಾತನಾಡುತ್ತೀಯಾ? ಎಮದು ಹೇಳಿದನು. ಹಝ್ರ‌ತ್ ಮುಸ್ಲೆಹ್ ಮೌಊದ್(ರ) ಅವರು ಈ ದಯೆಯನ್ನು ಉಲ್ಲೇಖಿಸುತ್ತಾ ಹೇಳುತ್ತಾರೆ, ಪ್ರಸ್ತುತ ದಿನಗಳಲ್ಲಿ ದಯೆಯನ್ನು ಮರೆತುಬಿಡುವ ವಿದ್ಯಮಾನವು ಜನರಲ್ಲಿ ಎಷ್ಟು ಸಾಮಾನ್ಯವಾಗಿದೆ, ನೀವು ಸಂಜೆ ಯಾರಿಗಾದರೂ ಉಪಕಾರ ಮಾಡಿದರೆ, ಅವರು ಅದನ್ನು ಬೆಳಿಗ್ಗೆ ಮರೆತುಬಿಡುತ್ತಾರೆ. ಅವರು ಹೇಳುತ್ತಾರೆ: ಈಗ ನಾನು ಈ ಉಪಕಾರದ ಕಾರಣದಿಂದ ನನ್ನ ಜೀವನದುದ್ದಕ್ಕೂ ನಿನ್ನ ಗುಲಾಮನಾಗಿರಬೇಕೆ? ಅವನು ನನಗೆ ಉಪಕಾರ ಮಾಡಿದರೆ ಏನಾಯಿತು, ಅವನು ಒಂದು ರಾತ್ರಿಯ ಉಪಕಾರದ ಮೌಲ್ಯವನ್ನು ಸಹಿಸಲಾರದೆ ತನ್ನ ಇಡೀ ಜೀವನದ ಗುಲಾಮಗಿರಿಯನ್ನು ತೊರೆದನು. ಈಗ ಇದು ಬಹಳ ಸೂಕ್ಷ್ಮವಾದ ಸಂದರ್ಭವಾಗಿತ್ತು, ಆದರೆ ಅವನು ತನ್ನ ಉಪಕಾರವನ್ನು ಎಣಿಸಿದಾಗ, ಸಹಚರನ ಕಣ್ಣುಗಳು ನೆಲಕ್ಕೆ ಬಿದ್ದವು ಮತ್ತು ಅವರು ನಾಚಿಕೆಯಿಂದ ಹಿಂದೆ ಸರಿದರು. ಉಪಕಾರಕ್ಕೆ ತುಂಬಾ ಬೆಲೆ ಕೊಡುತ್ತಿದ್ದರು. ತದನಂತರ ಅವನು ಮತ್ತೆ ರಸೂಲುಲ್ಲಾಹ್(ಸ) ಅವರೊಡನೆ ಮಾತನಾಡಲು ಆರಂಭಿಸಿದನು, "ನಾನು ಅರಬ್ಬರ ತಂದೆಯಾಗಿದ್ದೇನೆ" ಎಂದು ಹೇಳಿದನು. ನಿಮ್ಮ ಜನರ ಗೌರವವನ್ನು ಉಳಿಸಿಕೊಳ್ಳಿ ಮತ್ತು ನಿಮ್ಮ ಸುತ್ತಲೂ ನೆರೆದಿರುವವರು ತೊಂದರೆ ಬಂದಾಗ ತಕ್ಷಣವೇ ಓಡಿಹೋಗುತ್ತಾರೆ ಮತ್ತು ನಿಮ್ಮ ರಾಷ್ಟ್ರದವರೇ ನಿಮ್ಮ ಹಿಂದೆ ಬರುತ್ತಾರೆ. ಹಾಗಾದರೆ ನಿಮ್ಮ ರಾಷ್ಟವನ್ನು ಏಕೆ ಅವಮಾನಿಸುತ್ತೀರಿ? ನಾನು ಅರಬ್ಬರ ತಂದೆಯಾಗಿದ್ದೇನೆ. ಆ ವ್ಯಕ್ತಿ ರಸೂಲುಲ್ಲಾಹ್(ಸ.ಅ) ರವರಿಗೆ ನಾನು ಅರಬ್ಬರ ತಂದೆ ಎಂದು ಮತ್ತೆ ಮತ್ತೆ ಹೇಳುತ್ತಿದ್ದನು. ನೀವು ನನ್ನ ಮಾತನ್ನು ಕೇಳಿ ನಾನು ಹೇಳಿದಂತೆ ಉಮ್ರಾ ಮಾಡದೆ ಹಿಂತಿರುಗಿ ಎಂದು ಹೇಳಿದನು. ಅದೇ ಸಮಯದಲ್ಲಿ, ಅವನು ತನ್ನ ವಿಷಯವನ್ನು ಒತ್ತಿಹೇಳಲು ಮತ್ತು ರಸೂಲುಲ್ಲಾಹ್(ಸ) ರವರಿಗೆ ಮನವರಿಕೆ ಮಾಡಲು, ಅವನು ಮತ್ತೊಮ್ಮೆ ರಸೂಲುಲ್ಲಾಹ್(ಸ)ರವರ ಅನುಗ್ರಹದಾಯಕ ಕೂದಲನ್ನು ಮುಟ್ಟಿದನು ಆ ಮುಟ್ಟುವಿಕೆಯು ಒಂದು ರೀತಿಯ ಅಹಂಕಾರದ ಬಣ್ಣದಲ್ಲಿತ್ತು. ಅದು ಅವನಿಗೆ ತನ್ನ ಮಾತುಗಳನ್ನು ಮನವರಿಕೆ ಮಾಡುವಂತೆ ಮಾಡಿತು, ಆದರೆ ಅದರಲ್ಲಿ ತಿರಸ್ಕಾರದ ಅಂಶವೂ ಇರುವುದರಿಂದ, ಸಹಚರರಿಗೆ ಅದನ್ನು ಸಹಿಸಲಾಗಲಿಲ್ಲ ಮತ್ತು ಅವನು ರಸೂಲುಲ್ಲಾಹ್(ಸ) ಅವರ ಗಡ್ಡವನ್ನು ಮುಟ್ಟಿದ ತಕ್ಷಣ. ಯಾರೋ ಒಬ್ಬರು ಅವನ ಕೈಯನ್ನು ಬಲವಂತವಾಗಿ ಹೊಡೆದು ಹೇಳಿದರು, "ನಿನ್ನ ಅಶುದ್ಧ ಕೈಗಳನ್ನು ರಸೂಲುಲ್ಲಾಹ್(ಸ) ಅವರ ಪವಿತ್ರ ಮುಖದ ಕಡೆಗೆ ಚಲಿಸಬೇಡಿ. ನಂತರ ಅವನು ತನ್ನ ಕಣ್ಣುಗಳನ್ನು ಮೇಲಕ್ಕೆತ್ತಿ ನನ್ನನ್ನು ತಡೆದವನು ಯಾರೆಂದು ನೋಡಲು ಮತ್ತು ಅಂತಿಮವಾಗಿ ಅವನನ್ನು ಗುರುತಿಸಲು ಮತ್ತು ಅವನ ಕಣ್ಣುಗಳನ್ನು ತಗ್ಗಿಸಲು ನೋಡಿದ ತಕ್ಷಣ ತನ್ನ ಕಣ್ಣುಗಳನ್ನು ಕೆಳಗಿಳಿಸಿದನು.

ಅವಿಶ್ವಾಸಿಗಳ ಪ್ರತಿನಿಧಿಯಾಗಿ ಬಂದ ವ್ಯಕ್ತಿ ಅವರನ್ನು ಗುರುತಿಸಿದಾಗ ಕಣ್ಣು ತಗ್ಗಿಸಿದನು. ಅವರು ಅಬೂಬಕರ್(ರ) ಎಂದು ನೋಡಿದಾಗ, "ಅಬೂಬಕರ್, ನನಗೆ ನಿಮ್ಮೊಂದಿಗೆ ಯಾವುದೇ ಉಪಕಾರವಿಲ್ಲ ಎಂದು ನನಗೆ ತಿಳಿದಿದೆ. ನಾನು ಯಾರಿಗೆ ದಯೆ ತೋರಿಸಿಲ್ಲವೋ ಅಂತಹ ವ್ಯಕ್ತಿ ನೀವು" ಎಂದು ಹೇಳಿದನು.

ಹೀಗೆ ಅವರು ಇತರರಿಗೆ ತುಂಬಾ ಉಪಕಾರ ಮಾಡಿದ ರಾಷ್ಟವಾಗಿದ್ದು, ಹಝ್ರ‌ತ್ ಅಬೂಬಕರ್(ರ) ಅವರನ್ನು ಹೊರತುಪಡಿಸಿ. ಅಲ್ಲಿದ್ದ ಅನ್ಸಾರುಗಳು ಮತ್ತು ವಲಸಿಗರ ಮೇಲೆ ಈ ಒಬ್ಬ ನಾಯಕನ ಒಂದು ರೀತಿಯ ಉಪಕಾರವನ್ನು ಹೊಂದಿದ್ದರು ಮತ್ತು ಹಝ್ರ‌ತ್ ಅಬೂಬಕರ್(ರ) ಅವರನ್ನು ಹೊರತುಪಡಿಸಿ ಬೇರೆ ಯಾರಿಗೂ ಹಾಗೆ ಮಾಡಲು ಧೈರ್ಯವಿರಲಿಲ್ಲ. (ಖುತ್ಬಾತೆ ಮಹ್ಮೂದ್, ಸಂಪುಟ–20, ಪುಟ–484–485)

ನಂತರ ಒಂದು ಸ್ಥಳದಲ್ಲಿ, ಹಝ್ರ‌ತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ, "ಝಕಾತ್ ಎಷ್ಟು ಅವಶ್ಯಕವಾದ ವಿಷಯವಾಗಿದೆ ಎಂದರೆ ಅದನ್ನು ಯಾರು ನೀಡುವುದಿಲ್ಲವೊ ಅವನು ಇಸ್ಲಾಂನಿಂದ ಹೊರಗಿಡುತ್ತಾನೆ." ಹಝ್ರ‌ತ್ ಅಬೂಬಕರ್(ರ) ಅವರ ಕಾಲದಲ್ಲಿ ರಸೂಲುಲ್ಲಾಹ್(ಸ) ಅವರು ಮರಣ ಹೊಂದಿದ ನಂತರ, ಕೆಲವರು ಝಕಾತ್ ನೀಡಲು ನಿರಾಕರಿಸಿದಾಗ, **ಖುಝ್ ಮಿನ್ ಅಮ್ವಾಲಿಕುಮ್ ಸದಖತನ್ ತುತಹ್ಹಿರ್‌ಹುಮ್ ವ ತುಝಕ್ಕೀಹಿಮ್ ಬಿಹಾ ವಸಲ್ಲಿ ಅಲೈಹಿಮ್** (ಅತ್ತೌಬ: 103) ಇದರಲ್ಲಿ ರಸೂಲುಲ್ಲಾಹ್(ಸ) ಅವರನ್ನು ನೀವು ತೆಗೆದುಕೊಳ್ಳಿ ಎಂದು ಆದೇಶಿಸಲಾಗಿದೆ. ಈಗ ನೀವು ಹೋದ ನಂತರ, ಅದನ್ನು ಬೇರೆ ಯಾರು ತೆಗೆದುಕೊಳ್ಳುತ್ತಾರೆ? ಮುಹಮ್ಮದ್(ಸ.ಅ) ರವರ ಉಪನಾಯಕರು ಅದನ್ನು ತೆಗೆದುಕೊಳ್ಳುತ್ತಾರೆ ಎಂದು ಅಜ್ಞಾನಿಗಳಿಗೆ ಅರ್ಥವಾಗಲಿಲ್ಲ, ಆದರೆ ಅಜ್ಞಾನದಿಂದ ಅವರು ನಾವು ಝಕಾತ್ ನೀಡುವುದಿಲ್ಲ ಎಂದು ಹೇಳಿದರು. ಒಂದೆಡೆ ಜನ ಝಕಾತ್ ನೀಡಲು ನಿರಾಕರಿಸಿದರೆ ಮತ್ತೊಂದೆಡೆ ಗಲಭೆಗಳು ಸೃಷ್ಟಿಯಾದವು ಹೀಗೆ ಸಾಮಾನ್ಯವಾಗಿ ಇಡೀ ಅರಬ್ಬರು ಧರ್ಮಭ್ರಷ್ಟರಾದರು ಮತ್ತು ಅನೇಕರು ಸುಳ್ಳು ಪ್ರವಾದಿಗಳಾದರು. ಹೀಗಾಗಿ (ನೌಝುಬಿಲ್ಲಾಹ್) ಇಸ್ಲಾಂ ನಾಶವಾಗತೊಡಗಿದೆ ಎಂದು ತಿಳಿಯಿತು. ಇಂತಹ ಸಂದಿಗ್ಧ ಸಮಯದಲ್ಲಿ ಸಹಾಬಿಗಳು ಹಝ್ರ‌ತ್ ಅಬೂಬಕ್ಕರ್(ರ) ಅವರಿಗೆ ಝಕಾತ್ ನೀಡಲು ನಿರಾಕರಿಸಿದವರೊಂದಿಗೆ ನೀವು ಸೌಮ್ಯವಾಗಿ ವರ್ತಿಸಬೇಕು ಎಂದು ಹೇಳಿದರು. ನಾನು ಎಷ್ಟೇ ಬಲಶಾಲಿಯಾಗಿದ್ದರೂ ಅಬೂಬಕ್ಕರ್‌ನಷ್ಟು ಬಲಶಾಲಿಯಲ್ಲ ಎಂದು ತುಂಬಾ ಧೈರ್ಯಶಾಲಿ ಎಂದು ಕರೆಯಲ್ಪಡುವ ಹಝ್ರ‌ತ್ ಉಮರ್(ರ) ಹೇಳುತ್ತಾರೆ. ಏಕೆಂದರೆ ನಾನು ಸಹ ಆ ಸಮಯದಲ್ಲಿ ಅದೇ ರೀತಿ ಹೇಳಿದ್ದೇನೆ. ಮೊದಲು ಅವಿಶ್ವಾಸಿಗಳನ್ನು ವಶಪಡಿಸಿಕೊಳ್ಳಿ ಮತ್ತು ನಂತರ ಅವರನ್ನು ಸುಧಾರಿಸಿಕೊಳ್ಳೋಣ, ಆದರೆ ಅಬೂಬಕರ್(ರ) ಹೇಳಿದರು, "ಇಬ್ನ್ ಖಹಾಫಾನ ಯೋಗ್ಯತೆ ಏನು? ರಸೂಲುಲ್ಲಾಹ್(ಸ) ನೀಡಿದ ಆದೇಶವನ್ನು ಬದಲಾಯಿಸಲಲು, ನಾನು ಈ ಜನರು ಝಕಾತ್ ಅನ್ನು ಸಂಪೂರ್ಣವಾಗಿ ಪಾವತಿಸುವವರೆಗೂ ನಾನು ಅವರೊಂದಿಗೆ ಹೋರಾಡುತ್ತೇನೆ ಮತ್ತು ಅವರು ರಸೂಲುಲ್ಲಾಹ್(ಸ) ಅವರ ಕಾಲದಲ್ಲಿ ಒಂಟೆಗಳನ್ನು ಕಟ್ಟಲು ಹಗ್ಗವನ್ನು ನೀಡುತ್ತಿದ್ದರೆ. "ಅದನ್ನೂ ನೀಡಬೇಕು".

ಆ ಸಮಯದಲ್ಲಿ, ಅಲ್ಲಾಹನು ನೇಮಿಸಿದ ಖ಼ಲೀಫ ಎಷ್ಟೊಂದು ಧೈರ್ಯ ಮತ್ತು ಶೌರ್ಯವನ್ನು ಹೊಂದಿರುತ್ತಾರೆ ಎಂದು ಆಗ ಸಹಾಬಿಯರಿಗೆ ಗೊತ್ತಾಯಿತು? ಕೊನೆಗೆ ಹಝ್ರ‌ತ್ ಅಬೂಬಕರ್(ರ) ಅವರನ್ನು ಅಧೀನಗೊಳಿಸಿದರು ಮತ್ತು ಅವರಿಂದ ಝಕಾತ್ ಪಡೆದುಕೊಂಡರು.

ಹಝ್ರ‌ತ್ ಅಬುಬಕರ್(ರ) ಅವರ ಆರ್ಥಿಕ ತ್ಯಾಗದ ಬಗ್ಗೆ, ಲೇಖಕರೊಬ್ಬರು ಬರೆಯುತ್ತಾರೆ, ಹಝ್ರ‌ತ್ ಅಬೂಬಕರ್ ಸಿದ್ದೀಕ್(ರ) ವಿಶ್ವಾಸಿಯಾದಾಗ, ಅವರು ನಲವತ್ತು ಸಾವಿರ ದಿರ್ಹಮ್‌ಗಳ ದೊಡ್ಡ ಮೊತ್ತವನ್ನು ಹೊಂದಿದ್ದರು ಮತ್ತು ವ್ಯಾಪಾರ, ಸಾಧನಗಳು ಮತ್ತು ಆಸ್ತಿಯ ಸಂಪತ್ತು ಇದರ ಹೊರತಾಗಿರುವುದು ಸ್ಪಷ್ಟವಾಗಿದೆ. ಆದರೆ ಒಂದು ವರದಿಯ ಪ್ರಕಾರ, ಅವರ ಬಳಿ ಒಂದು ಮಿಲಿಯನ್ ಅಂದರೆ ಹತ್ತು ಲಕ್ಷ ದಿರ್ಹಮ್ ಇತ್ತು. ಮಕ್ಕಾದಲ್ಲಿ, ಸಾಮಾನ್ಯ ಮುಸ್ಲಿಮರನ್ನು ಬೆಂಬಲಿಸಲು ಮತ್ತು ಬಡ ಮುಸ್ಲಿಮರನ್ನು ಬೆಂಬಲಿಸಲು ಅವರು ಸಾವಿರಾರು ದಿರ್ಹಮ್‌ಗಳನ್ನು ಖರ್ಚು ಮಾಡಿದರು. ಆದರೆ ಅವರು ವಲಸೆ ಹೋದಾಗ, ಅವರ ಬಳಿ ಐದು ಅಥವಾ ಆರು ಸಾವಿರ ದಿರ್ಹಮ್‌ಗಳ ನಗದು ಇತ್ತು. ಒಂದು ವರದಿಯ ಪ್ರಕಾರ, ಅವರು ರಸೂಲುಲ್ಲಾಹ್(ಸ) ಅವರ ಅಗತ್ಯಗಳಿಗಾಗಿ ಈ ಹಣವನ್ನು ಉಳಿಸಿದರು ಮತ್ತು ಮದೀನಾಕ್ಕೆ ವಲಸೆ ಹೋಗುವ ಸಮಯದಲ್ಲಿ ಅದನ್ನು ತಂದರು. ಅದೇ ಹಣದಲ್ಲಿ, ಅವರು ವಲಸೆಯ ನಂತರ ರಸೂಲುಲ್ಲಾಹ್(ಸ) ಅವರ ಕೆಲವು ಕುಟುಂಬದ ಸದಸ್ಯರ ಪ್ರಯಾಣ ವೆಚ್ಚವನ್ನು ಪಾವತಿಸಿದರು ಮತ್ತು ಮದೀನಾದಲ್ಲಿ ಮುಸ್ಲಿಮರಿಗೆ ಸ್ವಲ್ಪ ಭೂಮಿಯನ್ನು ಖರೀದಿಸಿದರು. (ಮಖಾಮಾತೆ ಸೀರತ್, ಡಾ. ಮುಹಮ್ಮದ್ ಹುಮಾಯೂನ್ ಅಬ್ಬಾಸ್ ಶಮ್ಸ್, ಸಂಪುಟ–2, ಪುಟ–433–434, ಮಕ್ತಬ ಇಸ್ಲಾಮಿಯಾ ಲಾಹೋರ್ 2015) (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–128, "ಅಬುಬಕರ್ ಸಿದ್ದೀಕ್" ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಹಝ್ರ‌ತ್ ಇಬ್ನ್ ಅಬ್ಬಾಸ್(ರ) ಹೇಳುತ್ತಾರೆ: ರಸೂಲುಲ್ಲಾಹ್(ಸ)ರವರು ನಿಧನ ಹೊಂದುವ ಮುಂಚೆ ಕೊನೆಯ ಅನಾರೋಗ್ಯದ ಸಂದರ್ಭದಲ್ಲಿ ಹೊರಗೆ

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.03, Thursday, 05 January 2023, Issue No. 01

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

ಬಂದರು ಆಗ ಅವರ ತಲೆಯನ್ನು ಬಟ್ಟೆಯಿಂದ ಕಟ್ಟಿಕೊಂಡಿದ್ದರು. ಅವರು(ಸ.ಅ) ಪ್ರವಚನಪೀಠದ ಮೇಲೆ ಕುಳಿತು ಅಲ್ಲಾಹನನ್ನು ಸ್ತುತಿಸಿ ಹೇಳೀದರು ಜನರಲ್ಲಿ ಅಬೂಬಕರ್ ಬಿನ್ ಅಬು ಕಹಾಫಾ ಅವರ ಜೀವ ಮತ್ತು ಆಸ್ತಿಯ ವಿಷಯದಲ್ಲಿ ನನಗೆ ಹೆಚ್ಚು ಕರುಣೆ ತೋರುವವರು ಯಾರೂ ಇಲ್ಲ. (ಸಹೀಹ್ ಅಲ್–ಬುಖಾರಿ, ಕಿತಾಬ್ ಅಲ್–ಸಲಾತ್, ವರದಿ ಸಂಖ್ಯೆ–467)

ಹಝ್ರತ್ ಅಬೂಹುರೈರ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳಿದರು: ಅಬೂಬಕರ್‌ರ ಸಂಪತ್ತಿನಿಂದ ನನಗೆ ಪ್ರಯೋಜನ ಲಭಿಸಿದಷ್ಟು ಯಾರ ಸಂಪತ್ತಿನಿಂದಲೂ ಪ್ರಯೋಜನ ಲಭಿಸಲಿಲ್ಲ. ಇದನ್ನು ಆಲಿಸಿ ಹಝ್ರತ್ ಅಬೂಬಕರ್(ರ) ಅತ್ತುಬಿಟ್ಟು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನಾನು ಮತ್ತು ನನ್ನ ಸಂಪತ್ತು ಕೇವಲ ನಿಮಗಾಗಿ ಆಗಿವೆ.

(ಸುನನ್ ಇಬ್ನೆ ಮಾಜ, ಮುಖದ್ದಮ, ಹದೀಸ್–94)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಂದು ಜಿಹಾದಿನ ಸಂದರ್ಭದಲ್ಲಿ ಹಝ್ರತ್ ಉಮರ್(ರ) ವರದಿ ಮಾಡುತ್ತಾರೆ: ಹಝ್ರತ್ ಅಬೂಬಕರ್(ರ) ಯಾವಾಗಲೂ ನನಗಿಂತ ಮುಂದೆಯಾಗುತ್ತಾರೆ. ಇಂದು ನಾನು ಅವರಿಗಿಂತ ಮುಂದೆಯಾಗುವೆನು. ಈ ಯೋಚನೆಯೊಂದಿಗೆ ಮನೆಗೆ ಹೋಗಿ ತನ್ನ ಸಂಪತ್ತಿನ ಅರ್ಧದಷ್ಟು ತೆಗೆದುಕೊಂಡು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದೆನು. ಆ ಕಾಲವು ಇಸ್ಲಾಮಿಗೆ ಅತ್ಯಂತ ವಿಪತ್ತಿನ ಕಾಲವಾಗಿತ್ತು. ಆದರೆ ಹಝ್ರತ್ ಅಬೂಬಕರ್(ರ) ತನ್ನ ಪೂರ್ತಿ ಸಂಪತ್ತನ್ನು ತೆಗೆದುಕೊಂಡು ಬಂದಿದ್ದರು. ಹಝ್ರತ್ ಪೈಗಂಬರ್(ಸ) ಕೇಳಿದರು: ಅಬೂಬಕರ್, ಮನೆಯಲ್ಲಿ ಏನನ್ನು ಬಿಟ್ಟು ಬಂದಿದ್ದೀಯ? ಅವರು ಹೇಳಿದರು: ಅಲ್ಲಾಹನು ಮತ್ತು ಅವನ ಪ್ರವಾದಿಯನ್ನು. ಹಝ್ರತ್ ಉಮರ್(ರ) ಹೇಳುತ್ತಾರೆ: ಇದನ್ನು ಕೇಳಿ ನಾನು ಬಹಳ ಲಜ್ಜಿತನಾದೆನು. ಇಂದು ನಾನು ಪೂರ್ಣ ಸಾಮರ್ಥ್ಯದಿಂದ ಅಬೂಬಕರ್‌ಗಿಂತ ಮುಂದಾಗಲು ಬಯಸಿದ್ದೆ. ಆದರೆ ಇಂದು ಕೂಡ ಅಬೂಬಕರ್ ಮುಂದೆ ಆದರು.

ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ: "ಹಝ್ರತ್ ಅಬುಬಕರ್(ರ) ರವರು ತಮ್ಮ ಎಲ್ಲಾ ಸಂಪತ್ತನ್ನು ತಂದಾಗ ಅವರು ತಮ್ಮ ಕುಟುಂಬಕ್ಕೆ ಏನು ಬಿಟ್ಟರು ಎಂದು ಯಾರಾದರೂ ಹೇಳಬಹುದು?" ಇಲ್ಲಿ ನೆನಪಿನಲ್ಲಿಡಬೇಕಾದ ವಿಷಯ ಎಂದರೆ ಗೃಹೋಪಯೋಗಿ ಸಾಮಗ್ರಿಗಳೊಂದಿಗೆ ಬಂದರು ಎಂದರ್ಥ, ಅವರು ವ್ಯಾಪಾರಿಯಾಗಿದ್ದು, ವ್ಯಾಪಾರದಲ್ಲಿ ತೊಡಗಿರುವ ಸಂಪತ್ತನ್ನು ತರಲಿಲ್ಲ, ಮನೆಯನ್ನು ಮಾರಿ ಬಂದಿಲ್ಲ. (ಫಝಾಎಲುಲ್ ಖುರ್‌ಆನ್, ಸನ್ವಾರುಲ್ ಉಲೂಮ್, ಸಂಪುಟ–11, ಪುಟ–577) (ಖುತ್ಬಾತೆ ಮಹ್ಮೂದ್, ಸಂಪುಟ–37, ಪುಟ–134–135) ಗೃಹಪಯೋಗ ಸಾಮಗ್ರಿಗಳನ್ನು ತಂದಿದ್ದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಈ ಘಟನೆಯಿಂದ ಹಝ್ರತ್ ಅಬೂಬಕರ್(ರ)ರ ಎರಡು ಶ್ರೇಷ್ಠತೆಗಳು ಪ್ರಕಟವಾಗುತ್ತವೆ. ಒಂದು ಅವರು ತ್ಯಾಗದಲ್ಲಿ ಎಲ್ಲರಿಗಿಂತ ಮುಂದೆ ಇದ್ದರು. ಎರಡು ತನ್ನ ಪೂರ್ತಿ ಸಂಪತ್ತು ತೆಗೆದುಕೊಂಡು ಬಂದರು ಎಂದು ಮಾತ್ರವಲ್ಲ, ಎಲ್ಲರಿಗಿಂತ ಮುಂಚೆ ಬಂದಿದ್ದರು. ಸ್ವಲ್ಪ ತಂದವರು ಅವರಂತು ಮನೆಯಲ್ಲಿ ಎಷ್ಟು ಇರಿಸಬೇಕು, ಎಷ್ಟು ಕೊಂಡುಹೋಗಬೇಕು ಎಂಬ ಯೋಚನೆಯಲ್ಲಿ ಹಿಂದೆಯಾದರು. ಅದಲ್ಲದೇ ಹಝ್ರತ್ ಅಬೂಬಕರ್(ರ) ಇತರರ ಮೇಲೆ ಆಕ್ಷೇಪವನ್ನು ಕೂಡ ಎತ್ತಿರಲಿಲ್ಲ. ನಾನು ಎಲ್ಲವನ್ನು ತಂದಿದ್ದೇನೆ, ಇತರರು ತಂದಿಲ್ಲವೆಂದು ಆಕ್ಷೇಪಿಸಲಿಲ್ಲ.

ತ್ಯಾಗವನ್ನು ಮಾಡಿಕೊಂಡು ಕೂಡ, ಅಲ್ಲಾಹನ ಮೇಲೆ ಔದಾರ್ಯ ಮಾಡಿದ್ದೇನೆ ಎಂದು ಅವರು ಯೋಚಿಸಲಿಲ್ಲ. ಬದಲಾಗಿ ತ್ಯಾಗ ಮಾಡಲು ಅಲ್ಲಾಹನು ಸೌಭಾಗ್ಯವನ್ನು ನೀಡಿದ್ದನ್ನು ಅಲ್ಲಾಹನ ಔದಾರ್ಯವೆಂದು ಭಾವಿಸುತ್ತಿದ್ದರು. (ಖುತ್ಬಾತೆ ಮಹೂದ್, ಸಂಪುಟ–17, ಪುಟ–580)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಧನತ್ಯಾಗ ಮಾಡುವವರು ತನ್ನ ಕುರಿತು ನೋಡಬೇಕಾಗಿದೆ. ಸ್ವತಃ ಕೂಡ ಚಂದಾ ನೀಡದೇ ಅಥವಾ ಸ್ವಲ್ಪವೇನಾದರೂ ಕೊಟ್ಟರೆ ಇತರರ ಮೇಲೆ ಆಕ್ಷೇಪ ಎತ್ತುವ ಕಪಟವಿಶ್ವಾಸಿಗಳ ಹಾಗೆ ಆಗಬಾರದು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸಹಾಬಿಯರ ಅವಸ್ಥೆಯನ್ನು ನೋಡಿರಿ. ಪರೀಕ್ಷಣೆಯ ಸಮಯ ಬಂದಾಗ, ತಮ್ಮ ಬಳಿಯಲ್ಲಿ ಇರುವುದನ್ನೆಲ್ಲ ಅಲ್ಲಾಹನ ಮಾರ್ಗದಲ್ಲಿ ನೀಡಿದರು. ಹಝ್ರತ್ ಅಬೂಬಕರ್(ರ) ಕಂಬಳಿಯನ್ನು ಹೊದ್ದುಕೊಂಡು ಬಂದರು. ಎಂದರೆ ಕೇವಲ ಒಂದು ಕಂಬಳಿಯನ್ನು ಹೊದ್ದುಕೊಂಡಿದ್ದರು. ಉಳಿದ ಎಲ್ಲವನ್ನು ಅಲ್ಲಾಹನ ಮಾರ್ಗದಲ್ಲಿ ನೀಡಿದರು. ಅನಂತರ ಅಲ್ಲಾಹನ ಅದರ ಪ್ರತಿಫಲವನ್ನು ಕೂಡ ನೀಡಿದನು. ಒಟ್ಟಿನಲ್ಲಿ ಇದಾಗಿದೆ ಯಥಾರ್ಥ ಶ್ರೇಷ್ಠತೆ. ಒಳಿತು ಮತ್ತು ಆಧ್ಯಾತ್ಮಿಕ ಆನಂದದ ಸೌಭಾಗ್ಯವನ್ನು ಪಡೆಯಲಿಕ್ಕಾಗಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದ ಸಂಪತ್ತೇ ಪ್ರಯೋಜನಕ್ಕೆ ಬರುವುದು.

(ಮಲ್‌ಫೂಝಾತ್, ಸಂಪುಟ–1, ಪುಟ–210–211, 1984 ಆವೃತ್ತಿ)

ಈ ಪ್ರಸ್ತಾಪ ಮುಂದುವರೆಯುವುದು ಇನ್‌ಶಾ ಅಲ್ಲಾಹ್

**********

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಮತ್ತು ಈ ಹಿರಿಯರನ್ನು ದುಃಖದಿಂದ ರಕ್ಷಿಸಲು ಅವರ ಮಕ್ಕಳನ್ನು ಸಂರಕ್ಷಿಸಲಾಗುತ್ತದೆ. ಅಲ್ಲಾಹನು ಸರ್ವಶಕ್ತನು ಹೇಳುವಂತೆ **ಅಲ್‌ಹಖ್ನಾಬಿಹಿಮ್ ಝುರ್‍ರಿಯತುಹುಮ್** ಅಂದರೆ ನಾವು ಮೂಮಿನರ (ಧರ್ಮನಿಷ್ಠರ) ಮಕ್ಕಳನ್ನು ಅವರು ಮುಮಿನ್ ಆಗಿದ್ದರೆ ಸ್ವರ್ಗದಲ್ಲಿ ಅವರೊಂದಿಗೆ ಸೇರಿಸುತ್ತೇವೆ ಮಕ್ಕಳ ಸ್ಥಾನಮಾನವು ಕಡಿಮೆಯಾದರೂ ಸಹ ನಾವು ಅವರ ಮಕ್ಕಳನ್ನು ಸ್ವರ್ಗದಲ್ಲಿ ಸೇರುವಂತೆ ಮಾಡುತ್ತೇವೆ. ಆದ್ದರಿಂದ, ಪ್ರವಾದಿಗಳು ಮತ್ತು ಶಾಂತಿ ಸ್ಥಾಪಕರ ಜಮಾಅತ್‌ಗಳು ಮತ್ತು ಸಮುದಾಯಗಳಿಗೆ ಪವಿತ್ರ ಖುರ್‌ಆನ್‌ನಲ್ಲಿ ಪುನರಾವರ್ತಿತ ವಾಗ್ದಾನಗಳಿವೆ, ಆದ್ದರಿಂದ ಅವರ ಮೇಲೆ ವಿಶೇಷ ಅನುಗ್ರಹವಿರುತ್ತದೆ, ಅವರು ಸಂಕಟವನ್ನು ಅನುಭವಿಸಿದರೆ ಪ್ರವಾದಿಗಳಿಗೆ ಮತ್ತು ಶಾಂತಿ ಸ್ಥಾಪಕರಿಗೆ ದುಃಖವಾಗುತ್ತದೆ ಮತ್ತು ಎಲ್ಲಾ ಸಮೂದಾಯಗಳ ಕಡೆಗೆ ಪ್ರವಾದಿಗಳು ಬಂದಿದ್ದಾರೆ ಎಂದು ಪವಿತ್ರ ಖುರ್‌ಆನ್‌ನಿಂದ ತಿಳಿದುಬರುತ್ತದೆ. ಆದ್ದರಿಂದ ಇಡೀ ಪ್ರಪಂಚವು ಈ ಅನುಗ್ರಹದಲ್ಲಿ ಭಾಗಿಯಾಗಿದೆಯೇ ಹೊರತು ಯಹೂದಿಗಳಿಗೆ ಮಾತ್ರ ಪ್ರತ್ಯೇಕತೆಯಿಲ್ಲ:

**ಸುಮ್ಮ ಇನ್ನ ರಬ್ಬಕ ಲಿಲ್ಲಝೀನ ಅಮಿಲುಸ್ಸೂಅ ಬಿಜಹಾಲತಿನ್**. ಅಜ್ಞಾನವು ಜ್ಞಾನಕ್ಕೆ ವಿರುದ್ಧವಾಗಿದೆ ಮತ್ತು ಅದರ ಅರ್ಥ ಅಜ್ಞಾನವಾಗಿದೆ. ನಿಘಂಟಿನಲ್ಲಿ ಈ ರೀತಿ ಇದೆ, **ಅಲ್‌ಜಹಾಲತು ಝಿದ್ದುಲ್ ಇಲ್ಮಿ** ಅದೇ ರೀತಿಯಲ್ಲಿ, ಇದನ್ನು ಬರೆಯಲಾಗಿದೆ: **ಅಲ್‌ಜಹಾಲತು ಝಿದ್ದುಲ್ ಇಲ್ಮಿ ವಲ್‌ಮಾರಿಫತಿ** ಅಂದರೆ (ಜಹಾಲತ್) ಅಜ್ಞಾನವು ಜ್ಞಾನದ ವಿರುದ್ಧವಾಗಿದೆ ಮತ್ತು ಅಲ್–ಜಹಾಲತ್ ಅಂದರೆ, ಅಜ್ಞಾನ ಮತ್ತು ಜ್ಞಾನದ ಕೊರತೆ ಎಂದಾಗಿದೆ. ಈ ಸ್ಥಳದಲ್ಲಿ, ಇದು ಜ್ಞಾನದ ಕೊರತೆ ಎಂದು ಅರ್ಥವಲ್ಲ, ಏಕೆಂದರೆ ಜ್ಞಾನವಿಲ್ಲದವನು ಶಿಕ್ಷಿಸಲ್ಪಡುವುದಿಲ್ಲ, ಆದರೆ ಅದು ಜ್ಞಾನದ ಕೊರತೆಯಾಗಿದೆ ಅಂದರೆ ಆದೇಶವಿದೆ, ಆದರೆ ಧರ್ಮನಿಷ್ಠೆಯ ದೌರ್ಬಲ್ಯದಿಂದಾಗಿ, ಈ ವ್ಯಕ್ತಿಯು ಸಮಯಕ್ಕೆ ತನ್ನನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಅಂತಹ ವ್ಯಕ್ತಿಯು ಶಿಕ್ಷೆಗೆ ಅರ್ಹನಾಗಿರುತ್ತಾನೆ ಏಕೆಂದರೆ ಜ್ಞಾನದ ನಂತರ ಧಾರ್ಮಿಕತೆಯನ್ನು ಸಾಧಿಸಲು ಪ್ರಯತ್ನಿಸದಿರುವುದು ಉದ್ದೇಶಪೂರ್ವಕ ಪಾಪವಾಗಿದೆ.

ವಾಸ್ತವವಾಗಿ, ಜ್ಞಾನವು ಒಬ್ಬ ವ್ಯಕ್ತಿಯನ್ನು ಪಾಪದಿಂದ ರಕ್ಷಿಸುತ್ತದೆ. ಆದ್ದರಿಂದ ಮನುಷ್ಯ ಯಾವಾಗಲೂ ಜ್ಞಾನ ಮತ್ತು ಅಲ್ಲಾಹನ ಪ್ರೀತಿಯಲ್ಲಿ ಪ್ರಗತಿ ಸಾಧಿಸಲು ಪ್ರಯತ್ನಿಸಬೇಕು.

ಅಜ್ಞಾನದಲ್ಲಿ ಎರಡು ವಿಧಗಳಿವೆ, ಒಂದು ಶಾಶ್ವತ, ಬಲಿಪಶು ಜ್ಞಾನದಿಂದ ಸಂಪೂರ್ಣವಾಗಿ ವಂಚಿತನಾಗಿರುತ್ತಾನೆ ಮತ್ತು ಪಾಪದಲ್ಲಿ ಅವನು ಎಲ್ಲಾ ಆನಂದವನ್ನು ಪಡೆಯುತ್ತಾನೆ, ಇನ್ನೊಂದು ತಾತ್ಕಾಲಿಕವಾಗಿದೆ ಎಂದು ನೆನಪಿನಲ್ಲಿಡಬೇಕು. ಕೀಳುಮಟ್ಟದ ವಿದ್ವಾಂಸರೂ ಇದಕ್ಕೆ ಬಲಿಯಾಗುತ್ತಾರೆ, ಏಕೆಂದರೆ ಕೆಲವೊಮ್ಮೆ ಅವರ ಜ್ಞಾನದ ಮಟ್ಟವು ಕಡಿಮೆಯಾಗುತ್ತದೆ, ಆದ್ದರಿಂದ ಅವರು ಭಾವನಾತ್ಮಕ ಭಾವನೆಗಳಿಗೆ ಬಲಿಯಾಗುತ್ತಾರೆ, ಆದ್ದರಿಂದ ಇದು ಹದೀಸ್ ಷರೀಫ್ನಲ್ಲಿ ಬರುತ್ತದೆ. **ಲಾಯಝ್‌ನಿ ಹೀನ ಯಝ್‌ನಿ ವಹುವ ಮುಮಿನುನ್ ಫಯುಖ್ರಜು ಮಿನ್‌ಹುಲ್ ಈಮಾನ ಫಯಸೀರು ಅಲಾ ರಾಸಿಹೀ ಕಝ್ಝುಲ್ಲತಿ** ಅಂದರೆ ಒಬ್ಬ ವ್ಯಭಿಚಾರಿಯು ವ್ಯಭಿಚಾರ ಮಾಡುವಾಗ, ಆ ಸಮಯದಲ್ಲಿ ಅವನ ಹೃದಯವು ನಂಬಿಕೆಯ ಸ್ಥಿತಿಯಲ್ಲಿರುವುದಿಲ್ಲ ಮತ್ತು ಅವನ ನಂಬಿಕೆಯು ಅವನ ಹೃದಯದಿಂದ ಹೊರಬಂದು ಅವನ ತಲೆಯ ಮೇಲೆ ಛತ್ರಿಯಂತೆ ಸುಳಿದಾಡುತ್ತದೆ. (ತಿರ್ಮಿದಿ ಅಬ್ವಾಬುಲ್ ಈಮಾನ್)

**ವಅಸ್‌ಲಿಹೂ–** ತಮ್ಮನ್ನು ತಾವು ಸುಧಾರಿಸಿಕೊಳ್ಳಿ ಅಥವಾ ಇತರರನ್ನು ಸುಧಾರಿಸಿ ಎಂಬುದಕ್ಕೆ ಎರಡೂ ಅರ್ಥಗಳಿವೆ. ಅದರಲ್ಲಿ, ಒಬ್ಬ ವ್ಯಕ್ತಿಯು ತಾನು ಮಾಡಿದ ಪಾಪಕ್ಕೆ ಹೃದಯದಿಂದ ಪಶ್ಚಾತ್ತಾಪ ಪಡುವುದು ಮಾತ್ರವಲ್ಲ, ಆ ಪಾಪಕ್ಕೆ ಕಾರಣವಾದ ಸಂಗತಿಗಳನ್ನು ತೆಗೆದುಹಾಕಬೇಕು ಎಂದು ಉಲ್ಲೇಖಿಸಲಾಗಿದೆ. ಭವಿಷ್ಯದಲ್ಲಿ ಪಾಪವು ನಡೆಯದಂತೆ, "ಇತರರನ್ನು ಸರಿಪಡಿಸಿ" ಎಂದರೆ ಅವರ ಪಾಪಗಳಿಗೆ ಪ್ರಾಯಶ್ಚಿತ್ತವಾಗಿ, ಅವರು ಮಾರ್ಗದರ್ಶನ ಮಾಡಿದವರಿಗೆ ಪ್ರತಿಫಲವಾಗಿ ಇತರ ಜನರನ್ನು ಸರಿಪಡಿಸಬೇಕು. ಅವರನ್ನು ಸೇರಿಕೊಳ್ಳುತ್ತಾರೆ ಮತ್ತು ಹಿಂದಿನ ಪಾಪದ ಕಾರಣದಿಂದ ಕಾರ್ಯಗಳ ಕೊರತೆಯನ್ನು ನೀಗಿಕೊಳ್ಳುತ್ತಾರೆ.

**(ತಫ್ಸೀರ್ ಕಬೀರ್, ಸಂಪುಟ 4, ಪುಟ 267, ಪ್ರಕಟಿತ ಖಾದಿಯಾನ್ 2010)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.